# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಡಿಸೆಂಬರ್ 23, 2024

ಸಂಪುಟ : 51 ಸಂಚಿಕೆ : 220 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

# ಕಲಬುರಗಿಯಲ್ಲಿ ನಿಮ್ಹಾನ್ಸ್ ಘಟಕ

## ಜಯದೇವ ಹೃದ್ರೋಗ ಆಸ್ಪತ್ರೆ ಕಟ್ಟಡದ ಲೋಕಾರ್ಪಣೆಗೊಳಿಸಿದ ಸಿದ್ಧರಾಮಯ್ಯ

ಕಲಬುರಗಿ, ಡಿ.22- ಕಲಬುರಗಿಯಲ್ಲಿ ನಿಮ್ಹಾನ್ಸ್ ಮತ್ತು ಡಯಾಬಿಟಾಲಜಿ ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ತಿಳಿಸಿದ್ದಾರೆ.

ಜಯದೇವ ಹೃದ್ರೋಗ ಆಸ್ಪತ್ರೆಯ ನೂತನ ಕಟ್ಟಡ ಲೋಕಾರ್ಪಣೆ ಮಾಡಿ ಮಾತನಾಡಿದ ಮುಖ್ಯಮಂತ್ರಿ, ಕಲಬುರಗಿಯಲ್ಲಿ ನಿಮ್ಹಾನ್ಸ್ ಮತ್ತು ಡಯಾಬಿಟಾಲಜಿ ಘಟಕ ಸ್ಥಾಪನೆ ಬೇಗ ತೀರ್ಮಾನ ತೆಗೆದುಕೊಳ್ಳುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಅವರಿಗೆ ಸೂಚಿಸಲಾಗುವುದು, ಮೈಸೂರಿಗೂ ನಿಮ್ಹಾನ್ಸ್ ಘಟಕದ ಅಗತ್ಯವಿದ್ದು ಅದನ್ನು ಪೂರೈಸುವ ಕಡೆ ಗಮನ ಹರಿಸಬೇಕು ಎಂದರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ 371 ಜೆ ಜಾರಿಯಾದ ದಶಮಾನೋತ್ಸವದ ಪ್ರಯುಕ್ತ 371 ಹಾಸಿಗೆಗಳ ಅತ್ಯುನ್ನತ ಆರೋಗ್ಯ ಸೌಕರ್ಯಗಳಿರುವ ಜಯದೇವ ಹೃದ್ರೋಗ ಆಸ್ಪತ್ರೆ ಲೋಕಾರ್ಪಣೆಯಾಗಿದೆ. ಬೆಂಗಳೂರು, ಮೈಸೂರಿನಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆ ಶುಚಿತ್ವ ಮತ್ತು ನಿರ್ವಹಣೆಯಲ್ಲಿ ಉತ್ತಮ ಗುಣಮಟ್ಟ ಕಾಯ್ದುಕೊಂಡಿದೆ. ಕಲಬುರಗಿಯ ಜಯದೇವ ಇವೆರಡೂ ಆಸ್ಪತ್ರೆಗಳಿಗಿಂತ ಇನ್ನೂ ಹೆಚ್ಚಿನ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು. ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿರುವ ಜನತೆ ಹೃದ್ರೋಗ ಸಮಸ್ಯೆಗಳಿಗೆ ಈಗ ಬೆಂಗಳೂರಿಗೆ ಬರುವ ಅಗತ್ಯವೇ ಇಲ್ಲ ಎಂದು ತಿಳಿಸಿದರು.

371 ಜೆ ಜಾರಿಯಿಂದ ಈ ಭಾಗದ ಸಹಸ್ರಾರು ವಿದ್ಯಾವಂತರು ಉತ್ತಮ ಹುದ್ದೆಗಳನ್ನು ಪಡೆಯಲು ಸಾಧ್ಯವಾಗಿದೆ. ನಮ್ಮ ಸರ್ಕಾರ ಉತ್ತರ ಕರ್ನಾಟಕ ಸೇರಿದಂತೆ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ನೀಲನಕ್ಷೆ ಸಿದ್ಧಪಡಿಸಿಕೊಂಡಿದ್ದೇವೆ. ಇದು ನಮ್ಮ ಸರ್ಕಾರದ ಬದ್ಧತೆಯಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಇಲ್ಲಿನ ವಿಶ್ವ ವಿದ್ಯಾಲಯಗಳಲ್ಲಿ ನೂತನ ಹೊಸ ಕೋರ್ಸ್‌ಗಳನ್ನು ಆರಂಭಿಸಲಾಗುವುದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಹೇಳಿದರು.

ಇದಕ್ಕೂ ಮುನ್ನ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, 'ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ರಚಿಸುವ ಉದ್ದೇಶವಿದ್ದು, ಉತ್ತರ ಕರ್ನಾಟಕ ವಿಮೋಚನಾ ದಿನದಂದೇ ಈ ಬಗ್ಗೆ ಹೇಳಿದ್ದೇನೆ'. ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಬೇಕು ಎನ್ನುವ ಬೇಡಿಕೆ ಬಹಳ ವರ್ಷಗಳಿಂದ ಇದೆ. ಪ್ರತ್ಯೇಕ ಸಚಿವಾಲಯ ಮಾಡುವ ಉದ್ದೇಶ ನಮಗೆ ಇದೆ' ಎಂದು ಹೇಳಿದರು.

# ಮೈಕೊರೆವ ಚಳಿಗೆ ತತ್ತರಿಸಿದ ಬೆಣ್ಣೆನಗರಿ

## ಬೆಚ್ಚನೆ ಉಡುಪುಗಳಿಗೆ ಡಿಮ್ಯಾಂಡ್, ತುಂಬಿದ ಟೀ-ಕಾಫಿ ಅಂಗಡಿ ಅಂಗಳ

ಸುನೀಲ್ ಹರಿಹರ

ದಾವಣಗೆರೆ, ಡಿ.18- ಚಳಿ ಚಳಿ ತಾಳೆನು ಈ ಚಳಿಯ, ಆಹಾ... ಕಳೆದ ಒಂದು ವಾರದಿಂದ ಜಿಲ್ಲೆಯಾದ್ಯಂತ ಚಳಿಯ ತೀವ್ರತೆ ಹೆಚ್ಚಾಗಿದ್ದರಿಂದ ಎಲ್ಲರ ಬಾಯಲ್ಲೂ ಚಳಿಯ ಗುಣಗಾನ ಶುರುವಾಗಿದೆ.

ಸೂರ್ಯ ಉದಯಿಸುವ ಮೊದಲೇ ಏಳುತ್ತಿದ್ದ ಜನ, ಬೆಳಗ್ಗೆ ಎಂಟಾದರೂ ಆಹಾ ಚಳಿ ಎಂದು ಮಲಗಿರುತ್ತಾರೆ. ಇನ್ನೂ ಕೆಲ ಜನರನ್ನು ಸೂರ್ಯನ ಕಿರಣಗಳೇ ಬೆನ್ನು ತಟ್ಟಿ ಎಬ್ಬಿಸುತ್ತಿದೆ.

ಜಿಲ್ಲೆಯ ಜನ ಚಳಿಯ ಅಬ್ಬರಕ್ಕೆ ತತ್ತರಿಸಿದ್ದಾರೆ. ಸ್ವೆಟರ್, ಟೋಪಿ, ಸ್ಕಾರ್ಫ್ ಧರಿಸಿಯೇ ಹೊರ ಬರುವಂತಾಗಿದೆ. ಬೆಳಗು ಮುಂಜಾನೆ 5 ಗಂಟೆಗೆ ನಾಗರಿಕರಿಗೆ ಸೇವೆ ನೀಡುವ ಹಾಲು-ತರಕಾರಿ ಮಾರಾಟಗಾರರು, ಪೇಪರ್ ವಿತರಕರು ಮತ್ತು ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವ ರೈತರು ಭೀಕರ ಚಳಿಗೆ ತಡಬಡಿಸುತ್ತಿದ್ದಾರೆ.

> **ಚಳಿಗೆ ಸ್ವೆಟರ್ ಮೊರೆ..!**
>
> **ಇಷ್ಟು ದಿನ ಮೂಲೆ ಸೇರಿದ್ದ ಸ್ವೆಟರ್, ಜರ್ಕಿನ್, ಸ್ಕಾರ್ಫ್, ಟೋಪಿ ಸೇರಿದಂತೆ ಬೆಚ್ಚನೆಯ ಉಡುಪುಗಳು ಈ ಚಳಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಚಳಿಯಿಂದ ರಕ್ಷಿಸಿಕೊಳ್ಳುವ ಜನ, ದರ ಹೆಚ್ಚಾಗಿರುವುದನ್ನು ಲೆಕ್ಕಿಸದೇ ಖರೀದಿಗೆ ಮುಂದಾಗಿರುವ ದೃಶ್ಯ ಮಾರುಕಟ್ಟೆಯಲ್ಲಿ ಕಂಡು ಬರುತ್ತಿದೆ.**

ನೇಸರನ ಆಸರೆಯಲ್ಲಿ ಹಗಲು ಕಳೆಯುವ ಜನ, ಮುಸ್ಸಂಜೆ ವೇಳೆಗೆ ಚಳಿಯ ತಾಪಕ್ಕೆ ಮುದುಡುತ್ತಿದ್ದಾರೆ. ಕೆಲಸ ಮುಗಿಸಿ ಸಂಜೆ ಸ್ನೇಹಿತರೊಡನೆ ತುಸು ಮೋಜು, ಮಸ್ತಿ ಮಾಡುತ್ತಿದ್ದ ಅಡ್ಡೆಗಳೂ ಸಹ ರಾತ್ರಿ 8ಕ್ಕೆ ಖಾಲಿಯಾಗಿರುವ ದೃಶ್ಯಗಳು ಅಲ್ಲಲ್ಲಿ ಕಂಡು ಬರುತ್ತಿವೆ. ನವೆಂಬರ್ ತಿಂಗಳಲ್ಲಿ ಚಳಿ ಬೇಗನೆ ಶುರುವಾಯಿತು ಎನ್ನುವಷ್ಟರಲ್ಲಿ ಕೆಲವು ದಿನ ಥಂಡಿ ಸಾಧಾರಣವಾಗಿತ್ತು. ಆದರೀಗ ಶೀತ ಗಾಳಿಯ ಪ್ರಖರತೆ ಕಳೆದೆಂಟು ದಿನಗಳಿಂದ ಹೆಚ್ಚಾಗಿದೆ. ಈ ಕುರಿತು ಹವಾಮಾನ ಇಲಾಖೆಯೂ ಸಹ ರಾಜ್ಯದಲ್ಲಿ ವಾಡಿಕೆಗಿಂದ 2-4ಡಿಗ್ರಿ ಶೆಲ್ಸಿಯಸ್ ತಾಪಮಾನ ಕಡಿಮೆ ಆಗಲಿದೆ ಎಂದು ಎಚ್ಚರಿಕೆ ನೀಡಿದೆ.

ಕಳೆದ ಒಂದು ವಾರದಲ್ಲಿ ಚಳಿರಾಯ ದಾಖಲೆ ಬರೆಯಲು ಹೊರಟಿದ್ದಾನೆ. ಮಂಗಳವಾರದಂದು ಗರಿಷ್ಠ 28, ಕನಿಷ್ಠ 14 ಡಿಗ್ರಿ ಶೆಲ್ಸಿಯಸ್ ತಾಪಮಾನ ಕುಸಿದಿದ್ದರಿಂದ ಜಿಲ್ಲೆಯ ಜನ ಬೆಚ್ಚನೆಯ ಉಡುಪಿನಲ್ಲೂ ನಡುಗುವಂತಾಗಿದೆ.

ಶೀತದ ವಾತಾವರಣದಿಂದ ರಕ್ಷಿಸಿಕೊಳ್ಳಲು ಜನ ಹರಸಾಹಸ ಪಡುತ್ತಿದ್ದು, ಮನೆಯ ಕಿಟಕಿ ಹಾಗೂ ಬಾಗಿಲುಗಳನ್ನು ಮುಚ್ಚಲು ಮುಂದಾಗುತ್ತಿದ್ದಾರೆ. ಇನ್ನು ಬೆಳಗ್ಗೆ-ಸಂಜೆ ವಾಯು ವಿಹಾರಕ್ಕೆ ತೆರಳುವ ಹಿರಿಯ ನಾಗರಿಕರು (2ನೇ ಪುಟಕ್ಕೆ)

# ನಾಡಿನ ಶ್ರೇಷ್ಠ ಕವಿಗೆ ರಾಷ್ಟ್ರಕವಿ ಪ್ರಶಸ್ತಿ ನೀಡಬೇಕು

## ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಒತ್ತಾಯ



ಮಂಡ್ಯ,ಡಿ.22- ಪ್ರತೀ ಐದು ವರ್ಷಕ್ಕೊಮ್ಮೆ ನಾಡಿನ ಶ್ರೇಷ್ಠ ಕವಿಯನ್ನು ಗುರುತಿಸಿ, ರಾಷ್ಟ್ರಕವಿ ಎಂದು ಪ್ರಶಸ್ತಿ ಪ್ರದಾನ ಮಾಡಬೇಕು ಎಂಬ ನಿರ್ಣಯವನ್ನು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳುವುದರ ಮೂಲಕ ಸರ್ಕಾರಕ್ಕೆ ಒತ್ತಾಯಿಸಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಗ್ರಹಿಸಿದೆ.

ಈ ಸಂಬಂಧ ಕಸಾಪ ದಾವಣಗೆರೆ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

ಸಮ್ಮೇಳನದಲ್ಲಿ ಕೈಗೊಳ್ಳುವ ನಿರ್ಣಯಗಳಲ್ಲಿ ತಾವು ಮಂಡಿಸುತ್ತಿರುವ ಹಕ್ಕೊತ್ತಾಯವನ್ನು ಸೇರ್ಪಡೆ ಮಾಡುವಂತೆ ವಾಮದೇವಪ್ಪ ಅವರು ಮನವಿಯಲ್ಲಿ ಕೇಳಿಕೊಂಡಿದ್ದಾರೆ.

ಅಲ್ಲದೇ, ದಾವಣಗೆರೆಯಲ್ಲಿ ರಾಜ್ಯ ಸರ್ಕಾರ ನಡೆಸಲು ಈ ಹಿಂದೆ ಕೈಗೊಂಡಿದ್ದ ತೀರ್ಮಾನದಂತೆ ವಿಶ್ವ ಕನ್ನಡ ಸಮ್ಮೇಳನವನ್ನು ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಅತಿ ಶೀಘ್ರದಲ್ಲಿ ನಡೆಸುವಂತೆ ಸರ್ಕಾರದ ಮೇಲೆ ಒತ್ತಡ ತರಲು ನಿರ್ಣಯವನ್ನು ಕೈಗೊಳ್ಳಬೇಕು ಎಂದು ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

# ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಶೀಘ್ರ ನಡೆಸಲಿ

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಿರ್ಣಯ



ಮಂಡ್ಯ, ಡಿ. 22 - ಮಂಡ್ಯದಲ್ಲಿ ಜರುಗಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶ್ಯಾಧ್ಯಕ್ಷ ಡಾ. ಬಿ.ಎಂ. ಪಟೇಲ್ ಪಾಂಡು ಅವರು ಆರು ನಿರ್ಣಯಗಳನ್ನು ಮಂಡಿಸಿದರು.

❒ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಎಲ್ಲಾ ಉಪ-ಬಂಧಗಳು ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮವು ಸಮಗ್ರವಾಗಿ ಜಾರಿಗೆ ಬರಬೇಕಿದ್ದು, ಕೂಡಲೇ ಅನುಷ್ಠಾನ ಆಗಬೇಕು. ಸ್ವಾಯತ್ತತೆ ಹೊಂದಿರುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ 'ರಾಜ್ಯ ಮಟ್ಟದ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲು ಸೂಕ್ತ ತಿದ್ದುಪಡಿ ತರಬೇಕು.

❒ ರಾಜ್ಯದಲ್ಲಿರುವ ಸರ್ಕಾರದ ಎಲ್ಲಾ ಕನ್ನಡ ಶಾಲೆಗಳಿಗೆ ಕಟ್ಟಡ, ವಾಚನಾಲಯ, ಆಟದ ಮೈದಾನ ಸೇರಿದಂತೆ ಇತರೆ ಮೂಲ ಸೌಕರ್ಯ ಗಳನ್ನು ಒದಗಿಸುವ ಮತ್ತು ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿಯ ಕ್ರಮಕ್ಕೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಕನ್ನಡೇತರ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕು.

❒ ಕನ್ನಡ ಅನ್ನದ ಭಾಷೆಯಾಗಲು ಕನ್ನಡಿಗರ ಉದ್ಯೋಗಕ್ಕೆ (5ನೇ ಪುಟಕ್ಕೆ)

# ವಿದ್ಯಾರ್ಥಿಗಳು ಶ್ರಮವಹಿಸಿ ವಿದ್ಯಾಭ್ಯಾಸದಲ್ಲಿ ತೊಡಗಿ

## 'ಸರ್.ಎಂ.ವಿ ವೈಭವ್' ಕಾರ್ಯಕ್ರಮದಲ್ಲಿ ರೈತ ಮಹಿಳೆ ಡಾ. ಕವಿತಾ ಮಿಶ್ರಾ ಅಭಿಮತ



ದಾವಣಗೆರೆ, ಡಿ.22- ವಿದ್ಯಾರ್ಥಿಗಳು, ಪಾಲಕರ ತ್ಯಾಗ ಮತ್ತು ಕನಸನ್ನು ಅರಿತು, ಕಠಿಣ ಶ್ರಮವಹಿಸಿ ವಿದ್ಯಾಭ್ಯಾಸದಲ್ಲಿ ತೊಡಗಬೇಕು ಎಂದು ಪ್ರಗತಿಪರ ರೈತ ಮಹಿಳೆ ಡಾ. ಕವಿತಾ ಮಿಶ್ರಾ ತಿಳಿಸಿದರು.

ಸ್ಥಳೀಯ ಸರ್.ಎಂ.ವಿ ಸಮೂಹ ಸಂಸ್ಥೆಗಳ ವತಿಯಿಂದ ಸರ್.ಎಂ.ವಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ 'ಸರ್.ಎಂ.ವಿ ವೈಭವ್' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾಭ್ಯಾಸದಲ್ಲಿ ಅಧಿಕ ಅಂಕ ಗಳಿಸಿ, ಉತ್ತಮ ಸ್ಥಾನ ಹೊಂದುವುದಷ್ಟೇ ಸಾಧನೆ ಅಲ್ಲ. ಉತ್ತಮ ತಾಯಿ, ಹೆಂಡತಿ, ಮಗ-ಮಗಳು ಮತ್ತು ಉತ್ತಮ ಸೊಸೆಯಾಗುವ ಜತೆಗೆ ಜವಾಬ್ದಾರಿ ಜೀವನ ನಡೆಸುವುದೂ ಸಹ ಸಾಧನೆ ಎಂದು ತಿಳಿಸಿದರು. ಯಾವ ಕೆಲಸವು ಸಣ್ಣದಲ್ಲ, ದೊಡ್ಡದೂ ಅಲ್ಲ. ಪ್ರತಿಯೊಂದು ಕೆಲಸಕ್ಕೂ ತನ್ನದೇ ಆದ ಮಹತ್ವವಿದೆ. ಈ ನಿಟ್ಟಿನಲ್ಲಿ ಸಾಧನೆಗೆ ಹಿಗ್ಗದೆ, ಸೋಲಿಗೆ ಕುಗ್ಗದೆ ಸರಳ ಜೀವನ ನಡೆಸಬೇಕು ಎಂದು ಕಿವಿಮಾತು ನೀಡಿದರು.

ಐಐಟಿ, ಐಎಎಸ್, ಇಂಜಿನಿಯರ್ ಮತ್ತು ಡಾಕ್ಟರ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಿಂಚಬೇಕೆನ್ನುವ ವಿದ್ಯಾರ್ಥಿ ಗಳು, ಕೃಷಿ ಕ್ಷೇತ್ರದಲ್ಲೂ ಸಾಧನೆ ಮಾಡಬೇಕು. ಆದರೆ ಯುವಕರು ರೈತರಾಗಲು ಹಿಂಜರಿಯುತ್ತಿರುವುದು ಶೋಚನೀಯ ಎಂದರು.

ಗದ್ದೆ ಇದ್ದವನೇ ಶ್ರೀಮಂತ. ಆದರೂ, ರೈತರು ಸೊಕ್ಕು ತೋರುವುದಿಲ್ಲ. ಈ ನಿಟ್ಟಿನಲ್ಲಿ ಜಗತ್ತು ರೈತನ ಕುಟುಂಬಕ್ಕೆ ನೀಡುವ ಗೌರವ ಬದಲಾಗ ಬೇಕು ಎಂದು ಹೇಳಿದರು.

ಅದ್ಭುತ ಹಾಗೂ ಅಚ್ಚರಿಗಳನ್ನು ಸೃಷ್ಟಿಸಲೆಂದೇ ದೇವರು ಮಹಿಳೆಯರನ್ನು ಸೃಷ್ಟಿಸಿದ್ದಾನೆ. ಮನಸ್ಸು ಮಾಡಿದರೆ ಜಗತ್ತನ್ನೇ ಅಲ್ಲಾಡಿಸುವ ಶಕ್ತಿ ಮಹಿಳೆಯರಿಗಿದೆ. ಆದ್ದರಿಂದ ಹೆಣ್ಣನ್ನು ಗೌರವಿಸುವ ಸಂಸ್ಕಾರವನ್ನು ಎಲ್ಲರು ಬೆಳೆಸಿಕೊಳ್ಳಬೇಕು ಎಂದರು.

ಇದೇ ವೇಳೆ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಸಾಧನೆಗೈದ ಕಾಲೇಜಿನ 24 ವಿದ್ಯಾರ್ಥಿಗಳಿಗೆ ಸನ್ಮಾನಿಸಿದರು. ಕೆ.ಎಂ. ಸೃಷ್ಟಿ ಎಂಬ ವಿದ್ಯಾರ್ಥಿನಿಗೆ ಸಂಸ್ಥೆಯ ವತಿಯಿಂದ 3 ಲಕ್ಷ ನಗದು ಬಹುಮಾನ (2ನೇ ಪುಟಕ್ಕೆ)

# ಪ್ರಧಾನಿ ಮೋದಿಗೆ ಕುವೈತ್‌ನ ಅತ್ಯುನ್ನತ ಗೌರವ



ಕುವೈತ್ ಸಿಟಿ, ಡಿ. 22- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕುವೈತ್ ತನ್ನ ಅತ್ಯುನ್ನತ ಗೌರವವಾದ 'ದಿ ಆರ್ಡರ್ ಆಫ್ ಮುಬಾರಕ್ ಅಲ್ - ಕಬೀರ್' ಪ್ರದಾನ ಮಾಡಿದೆ. ಭಾರತ ಹಾಗೂ ಕುವೈತ್ ನಡುವಿನ ಸಂಬಂಧಗಳನ್ನು ಬಲಪಡಿಸಿದ್ದಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ. ಕುವೈತ್ ದೇಶದ ಅಮೀರ್ ಶೇಕ್ ಮೆಶಲ್ ಅಲ್ - ಅಹಮದ್ ಅಲ್ -ಜಬರ್ ಅಲ್ ಸಬಾಹ್ ಅವರಿಂದ ಮೋದಿ ಪ್ರಶಸ್ತಿ ಪಡೆದಿದ್ದಾರೆ. ಇಲ್ಲಿನ ಬಯಾನ್ ಪ್ಯಾಲೇಸ್ ಎಂಬಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೊರೆತ 20ನೇ (2ನೇ ಪುಟಕ್ಕೆ)

# ನಟ ಅಲ್ಲು ಅರ್ಜುನ್ ಮನೆಗೆ ನುಗ್ಗಿ ಧ್ವಂಸ

ಹೈದರಾಬಾದ್,ಡಿ. 22- ಒಸ್ಮಾನಿಯ ವಿಶ್ವವಿದ್ಯಾಲಯದ ಜಂಟಿ ಕ್ರಿಯಾ ಸಮಿತಿ ಸದಸ್ಯರೆಂದು ಹೇಳಿಕೊಳ್ಳುವ ಕೆಲವರು ತೆಲುಗು ನಟ ಅಲ್ಲು ಅರ್ಜುನ್ ಮನೆಗೆ ನುಗ್ಗಿ ಹೂಕುಂಡ ಹಾಗೂ ಇತರೆ ವಸ್ತುಗಳನ್ನು ಧ್ವಂಸಗೊಳಿಸಿದ್ದಾರೆ.

ನಟ ಅಲ್ಲು ಅರ್ಜುನ್ ಅವರ ಪುಷ್ಪ-2 ಚಿತ್ರ ಪ್ರದರ್ಶನದ ವೇಳೆ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟ ಮಹಿಳೆಗೆ ನ್ಯಾಯ ಒದಗಿಸಬೇಕು ಎಂದವರು ಒತ್ತಾಯಿಸಿದ್ದಾರೆ. (2ನೇ ಪುಟಕ್ಕೆ)


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸಂಧ್ಯಾ ಮುಪ್ಪಣ್ಣ ಅಂದನೂರು**

ನಿಧನ : 23-12-2020

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಅಂದನೂರು ಮುಪ್ಪಣ್ಣ
ಮಕ್ಕಳಾದ : ಶ್ರೀಮತಿ ನಿಶ್ಚಿತಾ ಶ್ರೀ ಅಭಿಲಾಷ್ ಮತ್ತು ಮಕ್ಕಳು
ಶ್ರೀಮತಿ ಶಾಶ್ವಿತ ಶ್ರೀ ವಿನಯ್ ಅಂಬ್ಲಿ ಮತ್ತು ಮಕ್ಕಳು
ಶ್ರೀಮತಿ ಸಂಪಿಗೆ ಶ್ರೀ ಎ.ಎಂ. ಸಮರ್ಥ್
ಮೊಮ್ಮಕ್ಕಳಾದ : ಸನ್ವಿತಿ, ಅಥರ್ವ್, ಅಗಸ್ತ್ಯ, ವಸಿಷ್ಠ

ಶ್ರೀಮತಿ ಗೌರಮ್ಮ ಶ್ರೀ ಅಂದನೂರು ಮುರುಗೇಶಪ್ಪ ಮತ್ತು ಮಕ್ಕಳು
ಶ್ರೀಮತಿ ಗಿರಿಜಾ ಶ್ರೀ ಅಂದನೂರು ಬಾಬು ಮತ್ತು ಮಕ್ಕಳು
ಶ್ರೀಮತಿ ವಿದ್ಯಾ ಶ್ರೀ ಅಂದನೂರು ಮಲ್ಲಿಕಾರ್ಜುನ್ ಮತ್ತು ಮಕ್ಕಳು
ಶ್ರೀಮತಿ ಸುಜಯ ಶ್ರೀ ಕೆ.ಆರ್. ಶಿವಪ್ರಕಾಶ್ ಮತ್ತು ಮಕ್ಕಳು
ಶ್ರೀ ಸಿ.ಪಿ. ಪಂಚಾಕ್ಷರಿ ಮತ್ತು ಮಕ್ಕಳು
ಶ್ರೀಮತಿ ಕೆ.ಸಿ. ಶಾಂತ ಶ್ರೀ ಕೆ.ಎಸ್. ಚಂದ್ರಶೇಖರ್ ಮತ್ತು ಮಕ್ಕಳು
ಶ್ರೀಮತಿ ಸುನೀತ ಶ್ರೀ ಕೆ.ವಿ. ರವಿಕುಮಾರ್ ಮತ್ತು ಮಕ್ಕಳು
ಶ್ರೀಮತಿ ದೀಪಾ ಶ್ರೀ ಕೆ.ಎಸ್. ನವೀನ್ MLC ಮತ್ತು ಮಕ್ಕಳು
ಶ್ರೀಮತಿ ಪುಷ್ಪ ಶ್ರೀ ಬಿ.ಸಿ. ವೀರಣ್ಣ ಮತ್ತು ಮಕ್ಕಳು
ಅಂದನೂರು ಮತ್ತು ಬಾದಾಮಿ ಬಂಧುಗಳು


# ಕನ್ನಡ ಭಾಷೆಗೆ ಸಂತರಿಂದ ಮಹತ್ತರ ಕೊಡುಗೆ

## ಕರವೇ ಸಾಂಸ್ಕೃತಿಕ ವೈಭವ ಸಮಾರಂಭದಲ್ಲಿ ಪಾಲಿಕೆ ಮೇಯರ್ ಚಮನ್ ಸಾಬ್



ದಾವಣಗೆರೆ, ಡಿ. 21 - ಕನ್ನಡ ಭಾಷೆಗೆ ಅನೇಕ ರಾಜಮನೆತನಗಳು, ಸಂತರು, ವಚನಕಾರರು ಮಹತ್ತರ ಕೊಡುಗೆ ನೀಡಿದ್ದಾರೆ ಎಂದು ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಪಾದಚಾರಿ ವ್ಯಾಪಾರಿ ನಗರ ಘಟಕದ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಗರದ ಡಾ. ಮೋದಿ ವೃತ್ತ (ಗುಂಡಿ ಸರ್ಕಲ್)ದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ ವೈಭವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ ಬಹಳ ಪ್ರಾಚೀನ ಭಾಷೆ. ಬೇರೆ ರಾಜ್ಯಗಳ ಭಾಷೆಗಳಿಗೆ ಹೋಲಿಸಿದರೆ ನಮ್ಮ ಕರ್ನಾಟಕದಲ್ಲಿ ಇದೊಂದು ಹಬ್ಬವನ್ನಾಗಿ ಆಚರಿಸುತ್ತಿರುವುದು ವಿಶೇಷ ಎಂದು ಹೇಳಿದರು.

ಎರಡನೇ ಶತಮಾನದಲ್ಲಿಯೇ ಕನ್ನಡ ಭಾಷೆಯ ಬಗ್ಗೆ ಉಲ್ಲೇಖವಿದ್ದು ಕನ್ನಡ ಭಾಷೆಯನ್ನು ಬೆಳೆಸಲು ಅನೇಕ ದಾಸರು, ವಚನಕಾರರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ನಾವೆಲ್ಲಾ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಬೇಕಿದೆ ಎಂದು ಹೇಳಿದರು.

ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡುವುದರಿಂದ ಮಕ್ಕಳ ಭವಿಷ್ಯ ಉತ್ತಮವಾಗಿರಲಿದೆ. ಆದ್ದರಿಂದ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕು. ಮನೆಗಳಲ್ಲಿ ಕನ್ನಡ ಮಾತನಾಡಬೇಕು ಎಂದು ಕರೆ ನೀಡಿದರು.

ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಕನ್ನಡ ನಾಡು, ನುಡಿಗಾಗಿ ಹೋರಾಟ ನಡೆಸಿ ಯಶಸ್ವಿಯಾದ ಸಂಘಟನೆ ಕರ್ನಾಟಕ ರಕ್ಷಣಾ ವೇದಿಕೆ ಎಂದರು.

ಎಲ್ಲಾ ಪಕ್ಷಗಳ ರಾಜಕಾರಣಿಗಳೊಂದಿಗೂ ವೇದಿಕೆ ಉತ್ತಮ ಬಾಂಧವ್ಯ ಹೊಂದಿದೆ. ಆದರೆ ನಾಡು-ನುಡಿಗೆ ಧಕ್ಕೆ (2ನೇ ಪುಟಕ್ಕೆ)


## ಕೃತಜ್ಞತೆಗಳು

**ದಾವಣಗೆರೆ ಶಿವ ಕೋ ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಗೆ**

ನನ್ನನ್ನು ಹೆಚ್ಚಿನ ಬಹುಮತದಿಂದ ನಿರ್ದೇಶಕ ಸ್ಥಾನಕ್ಕೆ 'ಮಹಿಳಾ ಮೀಸಲು ಮತ ಕ್ಷೇತ್ರ'ದಿಂದ ಆಯ್ಕೆ ಮಾಡಿದ ಸರ್ವ ಸದಸ್ಯರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಹಾಗೂ ಸಹಕಾರ ಇಲಾಖೆ ಚುನಾವಣಾಧಿಕಾರಿಗಳಿಗೂ ಮತ್ತು ಬ್ಯಾಂಕಿನ ನೌಕರರಿಗೂ ಹೃತ್ಪೂರ್ವಕ ಕೃತಜ್ಞತೆಗಳು.



**ಉಮಾ ಡಿ.ಹೆಚ್.**
ನಿರ್ದೇಶಕರು, ಶಿವ ಸಹಕಾರಿ ಬ್ಯಾಂಕ್, ದಾವಣಗೆರೆ

# ಟೆಂಟ್ ಮುಕ್ತ ರಾಜ್ಯ : ಅಲೆಮಾರಿ ಅಭಿವೃದ್ಧಿ ನಿಗಮದ ಗುರಿ

## ಹೊನ್ನಾಳಿಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ



ಹೊನ್ನಾಳಿ, ಡಿ. 22- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಜನಾಂಗದವರು ಇನ್ನು ಟಂಟ್‌ಗಳಲ್ಲಿ ವಾಸಿಸುತ್ತಿದ್ದು, ಅಲೆಮಾರಿ ಜನಾಂಗಕ್ಕೆ ಸೂಕ್ತ ನಿವೇಶನದೊಂದಿಗೆ ವಾಸಿಸಲು ಮನೆ ನಿರ್ಮಾಣ ಮಾಡಿ ಕರ್ನಾಟಕವನ್ನು ಟೆಂಟ್‌ಮುಕ್ತ ರಾಜ್ಯವನ್ನಾಗಿ ಮಾಡುವ ಗುರಿ ಇದೆ ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಹೇಳಿದರು.

ಶುಕ್ರವಾರ ಪಟ್ಟಣದ ಸಮೀಪದಲ್ಲಿರುವ ದೇವನಾಯ್ಕಹಳ್ಳಿಯ ಖಾಸಗಿ ಸ್ಥಳದ ಟೆಂಟ್‌ನಲ್ಲಿ ವಾಸಿಸುವ ಅಲೆಮಾರಿ ಕುಟುಂಬಗಳ ಸ್ಥಿತಿಗತಿ ಪರಿಶೀಲಿಸಿದ ನಂತರ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಹೊನ್ನಾಳಿ ತಾಲೂಕು ಕೇಂದ್ರದ ಸಮೀಪದ ದೇವನಾಯ್ಕನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿಗಳ 45 ಕುಟುಂಬಗಳ 202 ಜನಸಂಖ್ಯೆ ಹೊಂದಿದೆ. ಕಳೆದ 30 ವರ್ಷಗಳಿಂದ ಯಾವುದೇ ನಾಗರಿಕ ಸೌಲಭ್ಯಗಳಿಲ್ಲದೆ ಹೀನಾಯ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿರುವುದು ನನ್ನ ಗಮನಕ್ಕೆ ಬಂದಿದ್ದು, ಈಗಾಗಲೇ ರಾಜ್ಯದ 12 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದು ರಾಜ್ಯ, ತಾಲ್ಲೂಕುಗಳಲ್ಲಿ ಈ ಜನಾಂಗದ ಸ್ಥಿತಿಗತಿ ಅಧ್ಯಯನ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಸಂಚರಿಸಿ ಅಲೆಮಾರಿ ಜನಾಂಗದ ಸಮಗ್ರ ಚಿತ್ರಣವನ್ನು ತಯಾರಿಸಿ, ವರದಿಯನ್ನು ಸರ್ಕಾರಕ್ಕೆ ತಲುಪಿಸಿ ಅವರಿಗೊಂದು ಸೂರಿನ ವ್ಯವಸ್ಥೆ ಕಲ್ಪಿಸುವುದು ನಿಗಮದ ಕಾರ್ಯವಾಗಿದೆ ಎಂದರು.

ನಿಗಮದ ಮೊದಲ ಅಧ್ಯಕ್ಷೆಯಾಗಿದ್ದು ಇದೇ ನಿಗಮದ ಜನಾಂಗಕ್ಕೆ ಒಳಪಡುವ ನಾನು ನಿಗಮದ ಬಗ್ಗೆ ಹೆಚ್ಚು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವೆ. ನಿಗಮದಲ್ಲಿ 51 ಪರಿಶಿಷ್ಠ, 23 ಪರಿಶಿಷ್ಠ ಪಂಗಡ, 25 ಆದಿವಾಸಿ ಅಲೆಮಾರಿಗಳು ಸೇರಿದಂತೆ 99 ಸಮುದಾಯಗಳು ನಿಗಮದಡಿ ಬರುತ್ತವೆ ಎಂದು ತಿಳಿಸಿದರು.

ದಕ್ಕಲಿಗ, ಬುಡ್ಗಜಂಗಮ, ಶಿಳ್ಳೆಕ್ಯಾತ, ಸುಡುಗಾಡ ಸಿದ್ದ, ಚನ್ನದಾಸರ ಸೇರಿದಂತೆ ಒಟ್ಟು 51 ಪರಿಶಿಷ್ಟ ಜಾತಿ ಅಲೆಮಾರಿಗಳು, ಹಕ್ಕಿಪಿಕ್ಕಿ, ಗೌಡಾಲು, ರಾಜಗೊಂಡ, ಹಸಲರು ಸೇರಿದಂತೆ ಒಟ್ಟು 23 ಪರಿಶಿಷ್ಟ ಪಂಗಡದ ಅಲೆ ಮಾರಿಗಳು ಹಾಗೂ ಜೇನುಕುರುಬ, ಕೊರಗ, ಸೋಲಿಗ, ಕಾಡು ಕುರುಬ ಸೇರಿದಂತೆ ಒಟ್ಟು 48 ಪರಿಶಿಷ್ಟ ಪಂಗಡದ ಅರಣ್ಯ ಆದಿ ವಾಸಿಗಳು ರಾಜ್ಯದುದ್ದಕ್ಕೂ ಟೆಂಟ್‌ನಲ್ಲಿ ಬದುಕುತ್ತಿದ್ದಾರೆ. ಸರ್ಕಾರ ಇವರ ಬದುಕಿನ ಬಂಡಿ ಸಾಗಿಸಲು ಸಹಾಯ ಮಾಡಲು ಸಿದ್ದವಾಗಿದೆ ಎಂದು ಹೇಳಿದರು.

ಅಲೆಮಾರಿ ಜನಾಂಗದಲ್ಲಿ ಶಿಕ್ಷಣ ಇಲ್ಲದೆ ಅಂಧಾಭಿಮಾನ, ಮೂಢನಂಬಿಕೆ ತುಂಬಿ ತುಳುಕುತ್ತಿದ್ದು, ಅಕ್ಷರಭ್ಯಾಸಕ್ಕಾಗಿ ರಾತ್ರಿ ವೇಳೆ ಅನೌಪಚಾರಿಕ ಶಿಕ್ಷಣ ವ್ಯವಸ್ಥೆ ಮಾಡಲಾಗುವುದು, ಅವರಿಗೆ ಶಾಶ್ವತ ಸೂರಿನ ವ್ಯವಸ್ಥೆಯಾದ ಮೇಲೆ ಅವರು ಒಂದು ಕಡೆ ನೆಲೆ ನಿಂತು ಕುಟುಂಬದ ಮಕ್ಕಳಿಗೆ ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

1871ರಲ್ಲಿ ಬ್ರಿಟೀಷರು ಈ ಅಲೆಮಾರಿ ಜನಾಂಗವನ್ನು ಬಯಲು ಬಂಧಿ ಖಾನೆಯಲ್ಲಿ ಇರಿಸಿದ್ದರು, ಇದಕ್ಕೆ ಕಾರಣ ಬ್ರಿಟಿಷರ ದಬ್ಬಾಳಿಕೆಯನ್ನು ಈ ಅಲೆಮಾರಿ ಜನಾಂಗ ವಿರೋಧಿಸಿತ್ತು ಎಂದ ಅವರು, ಪ್ರಕೃತಿ ಕಾಪಾಡುವವರು ಅಲೆಮಾರಿಗಳಾಗಿದ್ದರೆಂದರು.

ಅಲೆಮಾರಿ ಜನಾಂಗದ ಸಮಗ್ರ ಚಿತ್ರಣದ ಹೊತ್ತಿಗೆ ತಯಾರಿಸಿ ಡಿ.26, 27 ರಂದು ಬೆಳಗಾವಿ ನಗರದಲ್ಲಿ ನಡೆಯುವ ಎಐಸಿಸಿ ಸಭೆಯ ಮುಂದಿಟ್ಟು, ಕೆಪಿಸಿಸಿ ಅಧ್ಯಕ್ಷ ಹಾಗೂ ಎಐಸಿಸಿ ಅಧ್ಯಕ್ಷರುಗಳ ಗಮನ ಸೆಳೆದು ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ತಹಶೀಲ್ದಾರ್ ಪಟ್ಟರಾಜಗೌಡ, ತಾ.ಪಂ. ಇಒ ಪ್ರಕಾಶ್, ಸಮಾಜ ಕಲ್ಯಾಣಾಧಿಕಾರಿ ಉಮಾ, ಪುರಸಭೆ ಮುಖ್ಯಾಧಿಕಾರಿ ಲೀಲಾವತಿ, ಆರ್‌ಐ ರಮೇಶ್, ವಿ.ಎ. ಜಯಪ್ರಕಾಶ, ಭೋಜಾ ಇನ್ನಿತರರಿದ್ದರು.



# ನಗರದ ಧ.ರಾ.ಮ. ವಿಜ್ಞಾನ ಕಾಲೇಜು ಅಭಿವೃದ್ಧಿಗೆ ಕೈಜೋಡಿಸೋಣ

**ಧ.ರಾ.ಮ. ವಿಜ್ಞಾನ ಕಾಲೇಜಿನಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ ಹಿರಿಯ ವೈದ್ಯ ಡಾ. ಎ.ಎಂ. ಶಿವಕುಮಾರ್**

ದಾವಣಗೆರೆ, ಡಿ. 22- ಡಿಆರ್‌ಎಂ ಕಾಲೇಜಿಗೆ ತನ್ನದೇ ಆದ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಇದು ನಿರಂತರವಾಗಿ ವಿದ್ಯಾದಾನ ಮಾಡುತ್ತಿರುವ ಕಾಲೇಜಾಗಿದೆ. ಇದರ ಬೆಳವಣಿಗೆಗೆ ನಾವೆಲ್ಲರೂ ಕೈಜೋಡಿಸೋಣ ಎಂದು ಕಿವಿ, ಮೂಗು, ಗಂಟಲು ತಜ್ಞ ವೈದ್ಯ ಡಾ. ಎ.ಎಂ. ಶಿವಕುಮಾರ್ ಹೇಳಿದರು.

ನಗರದ ಧ.ರಾ.ಮ. ವಿಜ್ಞಾನ ಕಾಲೇಜಿನಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಆಯೋಜಿಸಿದ್ದ ವಾರ್ಷಿಕ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಡಾ. ಸ್ವಾಮಿ ತ್ರಿಭುವಾನಂದ ಮಾತನಾಡಿ, ಈ ಕಾಲೇಜಿನಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳು ಪುನಃ ಕಾಲೇಜಿಗೆ ಏನಾದರೂ ಕೊಡುಗೆ ನೀಡಬೇಕೆಂಬ ಪ್ರವೃತ್ತಿ ಬೆಳೆಸಿಕೊಳ್ಳ ಬೇಕೆಂದರು.

ಪ್ರೊ. ಹಾಲಪ್ಪ ಅವರು ತಮ್ಮ ಸೇವಾವಧಿಯ ಅನುಭವಗಳನ್ನು ಮೆಲುಕು ಹಾಕಿದರು. ಸಂಘದ ಉಪಾಧ್ಯಕ್ಷ ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅವರು, ಕಲಿತ ಕಾಲೇಜಿಗೆ ಏನಾದರೂ ತಮ್ಮಿಂದ ಸಹಾಯ ಮಾಡುವ ಗುಣ ಧರ್ಮಗಳನ್ನು ಅಳವಡಿಸಿಕೊಳ್ಳುವ ಮನೋಭಾವ ಪ್ರತಿಯೊಬ್ಬರಲ್ಲೂ ಬರಬೇಕು ಎಂದು ಸಲಹೆ ನೀಡಿದರು.

ಹಿರಿಯ ಮುಖಂಡ ಕೆ.ಬಿ. ಶಂಕರ ನಾರಾಯಣ, ಹಿರಿಯ ಸಾಹಿತಿ - ಪತ್ರಕರ್ತ ಬಾ. ಮ. ಬಸವರಾಜಯ್ಯ ಮತ್ತು ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕಾಲೇಜಿನ ಹಳೆಯ ವಿದ್ಯಾರ್ಥಿನಿ ತೇಜಸ್ವಿನಿ ಭರತನಾಟ್ಯ ಪ್ರದರ್ಶಿಸಿದರು. ಪ್ರಾಚಾರ್ಯರಾದ ಎಂ.ಪಿ. ರೂಪಶ್ರೀ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಹೆಚ್.ಬಿ.ವಿ. ಸೌಮ್ಯ ನಿರೂಪಿಸಿದರು. ಡಿ.ಸಿ. ಹರೀಶ ಕುಮಾರ್ ವಂದಿಸಿದರು. ವಿಶ್ರಾಂತ ಪ್ರಾಂಶುಪಾಲ ಪ್ರೊ. ಎನ್. ಶ್ರೀನಿವಾಸ್, ಪ್ರೊ. ಚಿಕ್ಕೇಗೌಡರ್, ಪ್ರೊ. ಎಸ್. ಜಿ.ಹಿರೇಮಠ್, ಪ್ರೊ ಶಂಕರಪ್ಪ, ಪ್ರೊ. ಗುರುಸಿದ್ಧಸ್ವಾಮಿ, ಪ್ರೊ. ಶಿವಣ್ಣ ಮತ್ತಿತರರು ಭಾಗವಹಿಸಿದ್ದರು.

# ಹರಿಹರದಲ್ಲಿ ನಾಳೆ ಮಹೇಶ್ವರ ಜಾತ್ರೆ



ಶ್ರೀ ಮಹೇಶ್ವರ ಸೇವಾ ಸಮಿತಿಯ ವತಿಯಿಂದ ತುಂಗಭದ್ರಾ ನದಿ ತಟದಲ್ಲಿರುವ ಶ್ರೀ ಸಂಗಮೇಶ್ವರ, ಶ್ರೀ ಮಹೇಶ್ವರ ದೇವಸ್ಥಾನದಲ್ಲಿ ನಾಳೆ ಮಂಗಳವಾರ ಮಹೇಶ್ವರ ಸ್ವಾಮಿ ಜಾತ್ರೆಯನ್ನು ಆಚರಿಸಲಾಗುವುದು ಎಂದು ಶ್ರೀ ಮಹೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಚೇತನ ಮೂರ್ಕಲ್ ಹಾಗೂ ಪ್ರಧಾನ ಕಾರ್ಯದರ್ಶಿ ಕೊಂಡಜ್ಜಿ ಈಶ್ವರಪ್ಪ ತಿಳಿಸಿದರು. ಇಂದು ಸಂಜೆ ಮಹೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವವು ಹಳೆಪೇಟೆ ಬಸವೇಶ್ವರ ದೇವಸ್ಥಾನದ ಆವರಣದಿಂದ ಆರಂಭಗೊಳ್ಳಲಿದೆ. ನಾಳೆ ಸ್ವಾಮಿಗೆ ಬ್ರಾಹ್ಮೀ ಮುಹೂರ್ತದಲ್ಲಿ ರುದ್ರಾಭಿಷೇಕ, ಅಲಂಕಾರ ಮಹಾಮಂಗಳಾರತಿ ನಂತರ ಬೆಲ್ಲ, ಬಾಳೆ ಹಣ್ಣು, ಅನ್ನ ಹಾಲು ಪ್ರಸಾದ ವಿತರಣೆ ನಡೆಯಲಿದೆ.

# ಮಾಧ್ವ ಯುವಕ ಸಂಘದ 44ನೇ ವಾರ್ಷಿಕೋತ್ಸವ

## ಇಂದಿನಿಂದ ಜ್ಞಾನ ಕಾರ್ಯ, ಸಾಂಸ್ಕೃತಿಕ ಸಿಂಚನ, ಪ್ರವಚನ, ಹರಿಕಥೆ, ಸಂಗೀತ, ಹೋಮ

ದಾವಣಗೆರೆ, ಡಿ. 22 - ಶ್ರೀ ಮಾಧ್ವ ಯುವಕ ಸಂಘದ 44ನೇ ವಾರ್ಷಿಕೋತ್ಸವ ನಾಳೆ ದಿನಾಂಕ 23ರ ಸೋಮವಾರದಿಂದ ಇದೇ ದಿನಾಂಕ 29ರ ವರೆಗೆ ನಗರದ ಲಾಯರ್ ರಸ್ತೆಯ ಸರ್ವಜ್ಞಾಚಾರ್ಯ ಸೇವಾ ಸಂಘದಲ್ಲಿ ನಡೆಯಲಿದೆ. ಪ್ರತಿ ದಿನ ಸಂಜೆ 6 ರಿಂದ 7.30ರ ವರೆಗೆ ವೇದ ಪಂಡಿತ ನರಹರಿ ಆಚಾರ್ಯ ಮುತ್ತಗಿ ಅವರಿಂದ 'ಸಮಾಜಕ್ಕೆ ರಾಮಾಯಣದ ಕೊಡುಗೆ' ವಿಷಯದ ಕುರಿತು ಪ್ರವಚನ ಹಮ್ಮಿಕೊಳ್ಳಲಾಗಿದೆ.

ಇದೇ ದಿನಾಂಕ 25 ರಂದು ಮಧ್ಯಾಹ್ನ 3 ಗಂಟೆಯಿಂದ, 6 ರಿಂದ 10 ವರ್ಷದ ಮಕ್ಕಳಿಗೆ ವೇಷಭೂಷಣ ಸ್ಪರ್ಧೆ, 11 ರಿಂದ 18 ವರ್ಷದ ಮಕ್ಕಳಿಗೆ 'ಸಮಾಜಕ್ಕೆ ರಾಮಾಯಣದ ಕೊಡುಗೆ' ಕುರಿತು ಪ್ರಬಂಧ ಸ್ಪರ್ಧೆ ಹಾಗೂ 18 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆಯರಿಗೆ ರಾಮಾಯಣದ ಬಗ್ಗೆ ಲಿಖಿತ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಲಿದೆ.

ಅದೇ ದಿನ (ಬುಧವಾರ) ಸಂಜೆ 7ಕ್ಕೆ ತುಮಕೂರಿನ ಅನಘಾ ಪ್ರಸಾದ್ ಅವರಿಂದ 'ಶ್ರೀನಿವಾಸ ಕಲ್ಯಾಣ' ಹರಿಕಥೆ ಹಮ್ಮಿಕೊಳ್ಳಲಾಗಿದೆ. ಡಿ. 27 ರಂದು ಸಂಜೆ 7 ಗಂಟೆಗೆ ಸಮ್ಮಿತಾ ಮುತಾಲಿಕ್ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ದಿನಾಂಕ 29 ರಂದು ಬೆಳಗ್ಗೆ 6 ಗಂಟೆಯಿಂದ ಶ್ರೀ ಪವಮಾನ ಹೋಮ ಹಾಗೂ ಶ್ರೀ ಧನ್ವಂತರಿ ಹೋಮ, 9 ಗಂಟೆಗೆ ಪೂರ್ಣಾಹುತಿ ನಡೆಯಲಿದೆ.

ಬೆಳಗ್ಗೆ 10 ಗಂಟೆಗೆ ಪ್ರವಚನ ಮಂಗಳ ಮಹೋತ್ಸವ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ, ಶ್ರೀ ಮಾಧ್ವ ಯುವಕ ಸಂಘದ ಸಂಸ್ಥಾಪಕ ಪದಾಧಿಕಾರಿಗಳಾದ ಗೋಪಾಲಾಚಾರ್ಯ ಮಣ್ಣೂರು, ಗುರುರಾಜಾಚಾರ್ಯ ಕಂಪ್ಲಿ ಮತ್ತು ವಿ. ಗೋಪಾಲಕೃಷ್ಣ ಅವರನ್ನು ಸನ್ಮಾನಿಸಲಾಗುವುದು. ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಈ ಕಾರ್ಯಕ್ರಮಗಳಿಗೆ ವಿಶ್ವಮಧ್ವ ಮಹಾ ಪರಿಷತ್, ಅಖಿಲ ಭಾರತ ಮಾಧ್ವ ಮಹಾಮಂಡಲ, ಕೆ.ಬಿ. ಬಡಾವಣೆ ಮತ್ತು ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ನಂದಕಿಶೋರ ಭಜನಾ ಮಂಡಳಿ, ಭಾರತಿ ಭಜನಾ ಮಂಡಳಿ, ಶ್ರೀಕೃಷ್ಣ ಮಿತ್ರ ವೃಂದ ಹಾಗೂ ಬ್ರಾಹ್ಮಣ ಸಮಾಜ ಸಹಕಾರ ನೀಡಿವೆ.

# ಶಾಸಕ ಶಿವಗಂಗಾ ಬಸವರಾಜ್ ನಡೆ ಖಂಡನೀಯ

ದಾವಣಗೆರೆ, ಡಿ.22- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಿರುದ್ಧ ಹೈಕಮಾಂಡ್‌ಗೆ ಪತ್ರ ಬರೆದು ಅಗೌರವದಿಂದ ನಡೆದುಕೊಂಡ ಶಾಸಕ ಶಿವಗಂಗಾ ಬಸವರಾಜ್ ಅವರ ನಡೆ ಖಂಡನೀಯವಾಗಿದ್ದು, ಕೂಡಲೇ ಅವರು ಸಚಿವರ ಬಳಿ ಕ್ಷಮೆಯಾಚಿಸಬೇಕು ಎಂದು ಉತ್ತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಎಸ್. ಮಲ್ಲಿಕಾರ್ಜುನ್ ಅವರ ಕೃಪೆಯಿಂದಲೇ ಶಿವಗಂಗಾ ಬಸವರಾಜ್ ಅವರು ಅಂದು ಪಾಲಿಕೆಯಲ್ಲಿ ಸದಸ್ಯರಾಗಿ, ಇಂದು ಚನ್ನಗಿರಿ ಶಾಸಕರಾಗಿದ್ದಾರೆ. ಇದನ್ನು ಅವರು ಮರೆಯಬಾರದು ಎಂದರು.

'ಸ್ವಪಕ್ಷದ ಹಿರಿಯರನ್ನು ಗೌರವದಿಂದ ಕಾಣುವುದನ್ನು ಮೊದಲು ಕಲಿಯಿರಿ. ಅದನ್ನು ಬಿಟ್ಟು ಹೈಕಮಾಂಡ್‌ಗೆ ಪತ್ರ ಬರೆದರೆ ನೀವೇನು ದೊಡ್ಡವರಾಗುವುದಿಲ್ಲ.' ಶಾಮನೂರು ಕುಟುಂಬ ಪಕ್ಷಕ್ಕೆ ಎಷ್ಟು ಸೇವೆ ಸಲ್ಲಿಸಿದೆ ಎಂಬುದು ಹೈಕಮಾಂಡ್‌ಗೆ ಗೊತ್ತಿದೆ ಎಂದು ಬಸವರಾಜ್ ವಿರುದ್ಧ ಕಿಡಿಕಾರಿದರು.

ಚನ್ನಗಿರಿ ಕ್ಷೇತ್ರದ ಜನತೆಯ ಆಶಯಕ್ಕೆ ಸ್ಪಂದಿಸದೇ ಯಾರದ್ದೋ ಕುಮ್ಮಕ್ಕಿನಿಂದ ಸಚಿವರ ವಿರುದ್ಧ ಮಾತನಾಡುತ್ತೀದ್ದಿರಿ ಎನ್ನಿಸುತ್ತಿದೆ. ಇಂತಹ ಬೆಳವಣಿಗೆಯನ್ನು ಕಾಂಗ್ರೆಸ್ ಪಕ್ಷ ಎಂದಿಗೂ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಯೂಬ್ ಪೈಲ್ವಾನ್, ಪಾಲಿಕೆ ಸದಸ್ಯರಾದ ಎ.ನಾಗರಾಜ್, ಗಡಿಗುಡಾಳ್ ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಮಂಜುಳಾ, ಮಂಜಮ್ಮ, ಎಲ್.ಹೆಚ್. ಸಾಗರ್ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ಕನ್ನಡ ಭಾಷೆಗೆ ಸಂತರಿಂದ ಮಹತ್ತರ ಕೊಡುಗೆ

**(1ನೇ ಪುಟದಿಂದ)** ಬಂದಾಗ ಯಾವ ಪಕ್ಷವೇ ಆಗಲಿ ಹೋರಾಟ ನಡೆಸುತ್ತೇವೆ. ವರ್ಷದಲ್ಲಿ ಆರು ತಿಂಗಳು ಕೋರ್ಟು-ಕಚೇರಿಗೆ ಅಲೆಯಬೇಕಾಗಿದೆ. ಆದಾಗ್ಯೂ ಹೆದರದೆ ಹೋರಾಟ ನಡೆಸುತ್ತಿದ್ದೇವೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಂಬರೀಶ್ ಎಸ್.ಹೆಚ್., ಎಂ.ವೈ. ಸತೀಶ್, ಮಧು ನಾಗರಾಜ್, ಹನುಮಂತರಾವ್, ಸಾಗರ್, ಜಯಲಕ್ಷ್ಮಿ ಹೆಗಡೆ, ಪರಮೇಶ್, ಡಿ.ಸಿ. ಶ್ರೀನಿವಾಸ ಚಿನ್ನಿಕಟ್ಟೆ, ಓ. ಮಹೇಶ್ವರಪ್ಪ, ಹೆಚ್.ಪಿ. ಗೋಪಾಲ್ ರಾಜ್ ಅವರುಗಳ್ನು ಸನ್ಮಾನಿಸಲಾಯಿತು.

ಪಾದಚಾರಿ ವ್ಯಾಪಾರಿ ಘಟಕದ ಅಧ್ಯಕ್ಷ ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಆಯುಕ್ತರಾದ ರೇಣುಕಾ, ಸದಸ್ಯರಾದ ಸವಿತಾ ಗಣೇಶ್ ಹುಲ್ಮನಿ, ಜಿ.ಎಸ್. ಮಂಜುನಾಥ್ ಗಡಿಗುಡಾಳ್, ಕರವೇ ಜಿಲ್ಲಾ ಗೌರವಾಧ್ಯಕ್ಷ ವಾಸುದೇವ ರಾಯ್ಕರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲುಮನಿ, ರಾಘವೇಂದ್ರ ಎಸ್.ಕಠಾರೆ, ಗೋಪಾಲ್ ದೇವರವಮನೆ, ಎನ್.ಟಿ. ಹನುಮಂತಪ್ಪ, ಲೋಕೇಶ್, ಮಂಜುಳಾ ಮಹಾಂತೇಶ್, ಮಂಜುಳಾ ಗಣೇಶ್ ಇತರರು ಈ ಸಂದರ್ಭದಲ್ಲಿದ್ದರು.

ಜ್ಯೂನಿಯರ್‌ಗಳಾದ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್ ನಾಗ್, ಪುನೀತ್ ರಾಜ್ ಕುಮಾರ್ ಹಾಗೂ ಕು.ಜೀವಿತಾ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಪ್ರಧಾನಿ ಮೋದಿಗೆ ಗೌರವ

**(1ನೇ ಪುಟದಿಂದ)** ಅಂತರರಾಷ್ಟ್ರೀಯ ಗೌರವ ಇದಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಪ್ರಧಾನಿ ಮೋದಿಯವರು ಭಾನುವಾರ ಎರಡು ದಿನಗಳ ಭೇಟಿಗಾಗಿ ಕುವೈತ್‌ಗೆ ತೆರಳಿದ್ದರು. 43 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಈ ದೇಶಕ್ಕೆ ಭೇಟಿ ನೀಡಿದ್ದಾರೆ.

# ಅರ್ಜುನ್ ಮನೆಗೆ ನುಗ್ಗಿ ಧ್ವಂಸ

**(1ನೇ ಪುಟದಿಂದ)** ಕೆಲವರು ಕಾಂಪೌಂಡ್ ಮೇಲೆ ನಿಂತು ಟೊಮ್ಯಾಟೊಗಳನ್ನು ಮನೆಯ ಒಳಗೆ ಎಸೆದಿದ್ದಾರೆ. ಕುಟುಂಬಕ್ಕೆ ಒಂದು ಕೋಟಿ ರೂ. ನೀಡಬೇಕೆಂದು ಒತ್ತಾಯಿಸಿದ್ದಾರೆ. ಘಟನೆ ನಡೆದಾಗ ನಟ ಮನೆಯಲ್ಲಿ ಇರಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರತಿಭಟನೆ ನಡೆಸಿದವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

# ಸ್ಕೇಟಿಂಗ್ ಚಾಂಪಿಯನ್‌ಶಿಪ್



ದಾವಣಗೆರೆ, ಡಿ. 22 - ಬಳ್ಳಾರಿ ಜಿಲ್ಲೆ ಸಿರಗುಪ್ಪದಲ್ಲಿ ಕಳೆದ ವಾರ ನಡೆದ ರಾಜ್ಯ ಮಟ್ಟದ ಮುಕ್ತ ರೋಲರ್ ಸ್ಕೇಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ನಗರದ ಸ್ಕೇಟರ್‌ಗಳಾದ ಫಲಕ್ ನಿಗಾರ್ 3 ಚಿನ್ನದ ಪದಕ, ಚಿರಂತ್ ಜಿ.ಎಸ್. 2 ಚಿನ್ನದ ಪದಕ, ಶ್ರೀಶಾನ್ 2 ಕಂಚಿನ ಪದಕ ಹಾಗೂ ಸೌರಬ್ 2 ಕಂಚಿನ ಪದಕ ಪಡೆದಿದ್ದಾರೆ.

# ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿ ಯಾಲ-ಹೊಸ ಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ. ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಹರಿಹರ ಎಂ.ಹೆಚ್. ಶಿವಯೋಗಿಶ್ವರ ಸ್ವಾಮಿ (94483 39424) ಅವರನ್ನು ಸಂಪರ್ಕಿಸಬಹುದು.

# ಚಳಿಗೆ ತತ್ತರಿಸಿದ ಬೆಣ್ಣೆನಗರಿ

**(1ನೇ ಪುಟದಿಂದ)** ಮತ್ತು ಯುವ ಸಮೂಹ ಮನೆಯ ಹೊರಕ್ಕೆ ಕಾಲಿಡಲು ಹಿಂಜರಿಯುತ್ತಿದ್ದಾರೆ.

ಅಧಿಕ ಚಳಿಯಿಂದಾಗಿ ಜಿಲ್ಲೆಯ ಜನ ನೆಗಡಿ, ಕೆಮ್ಮು, ಕಫ ಸಂಬಂಧಿತ ಕಾಯಿಲೆಗೆ ತುತ್ತಾಗುತ್ತಿದ್ದಾರೆ.

ಇದು ಡಿಸೆಂಬರ್ ತಿಂಗಳಾದ್ದರಿಂದ ಚಳಿಯ ತೀವ್ರತೆ ಹೆಚ್ಚಾಗಿದೆ. ಬರುವ ಸಂಕ್ರಾಂತಿ ಹಬ್ಬ ಕಳೆದ ಬಳಿಕ ಚಳಿಯ ಅಬ್ಬರ ಕಡಿಮೆ ಆಗಲಿದೆ. ಶಿವರಾತ್ರಿ ಸಮೀಪಿಸುತ್ತಿದ್ದಂತೆ ಚಳಿ, ಬಿಸಿಯಾಗಲಿದೆ.

**ಟೀ-ಕಾಫಿ ಅಂಗಡಿ ಮುಂದೆ ಜನವೋ ಜನ:** ಬಹುತೇಕ ಜನ, ಈ ಚಳಿಗೆ ಬಿಸಿ-ಬಿಸಿ ಕರಿದ ತಿಂಡಿಗಳ ಮೊರೆ ಹೋಗುತ್ತಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ದಿನವಿಡೀ ಟೀ, ಕಾಫಿ, ಮಿರ್ಚಿ, ಬೊಂಡಾ, ಪಕೋಡಾ ಮತ್ತು ಮಂಡಕ್ಕಿ ಸೇರಿದಂತೆ ಕರಿದ ತಿಂಡಿಗಳಿಗೆ ಡಿಮ್ಯಾಂಡ್ ಹೆಚ್ಚಿದೆ.

ಸಂಜೆ ಹೊತ್ತು ಕರಿದ ತಿಂಡಿಗಳನ್ನು ಹುಡುಕಿಕೊಂಡು ಹೋಗಿ ತಿನ್ನುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಟೀ-ಕಾಫಿ ಅಂಗಡಿಗಳ ಅಂಗಳ ತುಂಬಿರುತ್ತದೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಲಹೆ :** ಬೆಚ್ಚಗಿನ ಬಟ್ಟೆ ಧರಿಸಬೇಕು, ಬಿಸಿಯಾದ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು, ಶೀತಕಾರಿ ಆಹಾರ ಸೇವಿಸಬಾರದು, ಶುಚಿತ್ವ ಕಾಪಾಡಿಕೊಳ್ಳಬೇಕು ಮತ್ತು ನಿಯಮಿತವಾಗಿ ವ್ಯಾಯಾಮ ಮಾಡುವ ಜತೆಗೆ ಕುಡಿಯಲು ಶುದ್ಧ ನೀರು ಬಳಸಬೇಕೆಂದು ನಾಗರಿಕರಿಗೆ ಸಲಹೆ ನೀಡಿದೆ.

# ಮಹತ್ತರ ಕೊಡುಗೆ

**(1ನೇ ಪುಟದಿಂದ)** ಬಂದಾಗ ಯಾವ ಪಕ್ಷವೇ ಆಗಲಿ ಹೋರಾಟ ನಡೆಸುತ್ತೇವೆ. ವರ್ಷದಲ್ಲಿ ಆರು ತಿಂಗಳು ಕೋರ್ಟು-ಕಚೇರಿಗೆ ಅಲೆಯಬೇಕಾಗಿದೆ. ಆದಾಗ್ಯೂ ಹೆದರದೆ ಹೋರಾಟ ನಡೆಸುತ್ತಿದ್ದೇವೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಂಬರೀಶ್ ಎಸ್.ಹೆಚ್., ಎಂ.ವೈ. ಸತೀಶ್, ಮಧು ನಾಗರಾಜ್, ಹನುಮಂತರಾವ್, ಸಾಗರ್, ಜಯಲಕ್ಷ್ಮಿ ಹೆಗಡೆ, ಪರಮೇಶ್, ಡಿ.ಸಿ. ಶ್ರೀನಿವಾಸ ಚಿನ್ನಿಕಟ್ಟೆ, ಓ.ಮಹೇಶ್ವರಪ್ಪ, ಹೆಚ್. ಪಿ. ಗೋಪಾಲ್ ರಾಜ್ ಅವರುಗಳ್ನು ಸನ್ಮಾನಿಸಲಾಯಿತು.

ಪಾದಚಾರಿ ವ್ಯಾಪಾರಿ ಘಟಕದ ಅಧ್ಯಕ್ಷ ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಆಯುಕ್ತರಾದ ರೇಣುಕಾ, ಸದಸ್ಯರಾದ ಸವಿತಾ ಗಣೇಶ್ ಹುಲ್ಮನಿ, ಜಿ.ಎಸ್. ಮಂಜುನಾಥ್ ಗಡಿ ಗುಡಾಳ್, ಕರವೇ ಜಿಲ್ಲಾ ಗೌರವಾಧ್ಯಕ್ಷ ವಾಸುದೇವ ರಾಯ್ಕರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಕಾಂಗ್ರೆಸ್ ಮುಖಂಡ ಗಣೇಶ್ ಹು ಲ್ಲುಮನಿ, ರಾಘವೇಂದ್ರ ಎಸ್.ಕಠಾರೆ, ಗೋಪಾಲ್ ದೇವರ ಮನೆ, ಎನ್.ಟಿ. ಹನುಮಂತಪ್ಪ, ಲೋಕೇಶ್, ಮಂಜುಳಾ ಮಹಾಂತೇಶ್, ಮಂಜುಳಾ ಗಣೇಶ್ ಇತರರು ಈ ಸಂದರ್ಭದಲ್ಲಿದ್ದರು.

ಜ್ಯೂನಿಯರ್‌ಗಳಾದ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್ ನಾಗ್, ಪುನೀತ್ ರಾಜ್ ಕುಮಾರ್ ಹಾಗೂ ಕು.ಜೀವಿತಾ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



**ಶ್ರೀಮತಿ ಪಾರ್ವತಮ್ಮ ನಿಧನ**

ಹರಿಹರ ನಗರದ ಪ್ರಶಾಂತ ನಗರ ಶೇರಾಪುರ ರಸ್ತೆಯ ನಿವಾಸಿಗಳಾದ ದಿ. ಎಸ್. ಹನುಮಂತಪ್ಪನವರ ಧರ್ಮಪತ್ನಿ **ಶ್ರೀಮತಿ ಪಾರ್ವತಮ್ಮನವರು** (95) ದಿನಾಂಕ 22.12.2024ರ ಮಧ್ಯಾಹ್ನ 1.30ಕ್ಕೆ ಶಿವೈಕ್ಯರಾದರು.

ಮೃತರಿಗೆ ಐದು ಜನ ಗಂಡು ಮಕ್ಕಳಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.12.2024 ರಂದು ಸೋಮವಾರ ಮಧ್ಯಾಹ್ನ 1.30ಕ್ಕೆ ಹರಿಹರದ ಹಿಂದೂ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.



**43ನೇ ಪುಣ್ಯಸ್ಮರಣೆ**

**ಸೈಯದ್ ಅಬ್ಬಾಸ್ ಸಾಬ್**
Rtd. PSI, ದಾವಣಗೆರೆ
**ಜನನ: 1-7-1912 ಮರಣ : 23-12-1981**

ಪೇಶ್ ಇಮಾಮ್, ಜುಮ್ಮಾ ಮಸೀದಿ, 2ನೇ ಮೇನ್, 11ನೇ ಕ್ರಾಸ್, ವಿನೋಬನಗರ, ದಾವಣಗೆರೆ

ನೀವು ನಮ್ಮನ್ನಗಲಿ ಇಂದಿಗೆ 43 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಪುತ್ರ : **ಸೈಯದ್ ನಜೀರ್,**
**ನಿವೃತ್ತ ಹೆಲ್ತ್ ಇನ್ಸ್‌ಪೆಕ್ಟರ್, ವಿನೋಬನಗರ, ದಾವಣಗೆರೆ. ಮೊ: 95354 81951**
**ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳು.**

# ಶ್ರಮವಹಿಸಿ ವಿದ್ಯಾಭ್ಯಾಸದಲ್ಲಿ ತೊಡಗಿ

**(1ನೇ ಪುಟದಿಂದ)** ನೀಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಎಸ್.ಜೆ. ಶ್ರೀಧರ್ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿ. ಸುರೇಶ್ ಕುಮಾರ್, ಜಗನ್ ಮೋಹನ್, ಎಲ್.ವಿ ಪ್ರದೀಪ್ ಕುಮಾರ್, ಸೈಯದ್ ಸಂಶೀರ್, ಪದ್ಮನಾಭ, ಕಾಲೇಜಿನ ಸಿಬ್ಬಂದಿ, ಪಾಲಕರಿದ್ದರು.

**ಕೆ.ಎನ್. ಕಾಳಿಂಗಚಾರಿ ನಿಧನ**



ದಾವಣಗೆರೆ ಸಿಟಿ, ರಾಂ ಅಂಡ್ ಕೋ ಸರ್ಕಲ್, ಚರ್ಚ್ ಮೇನ್ ರೋಡ್, 6ನೇ ಕ್ರಾಸ್ ವಾಸಿ ಶ್ರೀಮತಿ ಉಷಾರವರ ಪತಿ ಅಕ್ಕಿ ವ್ಯಾಪಾರಸ್ಥರಾದ

**ಕೆ.ಎನ್. ಕಾಳಿಂಗಚಾರಿ**

ಇವರು, ದಿನಾಂಕ : 22.12.2024ರ ಭಾನುವಾರ ಮಧ್ಯಾಹ್ನ 2.51ಕ್ಕೆ ನಿಧನರಾದರು. ಮೃತರಿಗೆ 51 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.12.2024ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠ ಶಾಂತಿ ಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :
**98447 06161, 90367 10814**

**ಶ್ರೀ ಹೆಚ್. ಚಂದ್ರಪ್ಪ ನಿಧನ**



ದಾವಣಗೆರೆ ಸಿಟಿ, ಚೌಕಿಪೇಟೆಯ **ಶ್ರೀ ಹೆಚ್. ಚಂದ್ರಪ್ಪ** (ಮಾಲೀಕರು, ಶ್ರೀ ಆಂಜನೇಯ ಎಂಟರ್‌ಪ್ರೈಸಸ್) ಇವರು ದಿನಾಂಕ 21.12.2024ನೇ ಶನಿವಾರ ಬೆಳಿಗ್ಗೆ 6.15ಕ್ಕೆ ವೈಕುಂಠವಾಸಿಗಳಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಧರ್ಮಪತ್ನಿ, ಮೂವರು ಪುತ್ರಿಯರು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.12.2024ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹಳೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : ಶ್ರೀ ಹೆಚ್. ಮಾರುತೆಪ್ಪ, ಧರ್ಮಪತ್ನಿ ಶ್ರೀಮತಿ ವಿಜಯಲಕ್ಷ್ಮಿ, ಪುತ್ರಿಯರಾದ ಶಿಲ್ಪಾ, ಸೌಮ್ಯ, ಶ್ವೇತಾ ಹಾಗೂ ಅಳಿಯಂದಿರು, ಶ್ರೀಮತಿ ನಾಗಲಕ್ಷ್ಮಿ ಶ್ರೀ ಹೆಚ್. ಅಶೋಕ ಮತ್ತು ಮಕ್ಕಳು , ಶ್ರೀಮತಿ ಅನಿತಾ ಶ್ರೀ ಹೆಚ್. ಅನಂತ ಹಾಗೂ ಮಕ್ಕಳು ದಾವಣಗೆರೆ ಹಾಗೂ ಬಂಧುಗಳು, ಮಿತ್ರರು.**

**ಎಲೆಬೇತೂರು ವಡ್ನಳ್ಳಿ ಎನ್.ಬಸವರಾಜ್ ನಿಧನ**



ದಾವಣಗೆರೆ ತಾ|| ಜಿ|| ಎಲೆಬೇತೂರು ಗ್ರಾಮ ವಾಸಿಯಾದ ವಡ್ನಳ್ಳಿ ನಿಂಗಪ್ಪ ಇವರ ಮಗನಾದ ವಡ್ನಳ್ಳಿ ಎನ್. ಬಸವರಾಜ್ (56) ಇವರು ದಿನಾಂಕ 22.12.2024ನೇ ಭಾನುವಾರ ಸಂಜೆ 05:30ಕ್ಕೆ ನಿಧನರಾಗಿದ್ದಾರೆ. ಇವರು ಪತ್ನಿ, ಇಬ್ಬರು ಪುತ್ರರನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ದಿನಾಂಕ 23.12.2024ನೇ ಸೋಮವಾರ ಮಧ್ಯಾಹ್ನ 12 ಗಂಟೆಗೆ ಎಲೆಬೇತೂರಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

# ಚನ್ನಾಪುರ ಮಠದಲ್ಲಿ ಇಂದು ಕಾರ್ತಿಕ, ನಾಳೆ ಜಾತ್ರೆ

ಹರಪನಹಳ್ಳಿ ತಾಲ್ಲೂಕಿನ ಚನ್ನಾಪುರ ಗ್ರಾಮದ ಮಠದಲ್ಲಿ ಇಂದು ಶ್ರೀ ಮಹೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಹಾಗೂ ನಾಳೆ ಮಂಗಳವಾರ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನೆರವೇರಲಿದೆ.

ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳ ದಿವ್ಯಸಾನ್ನಿಧ್ಯಲ್ಲಿ ಈ ಕಾರ್ಯಕ್ರಮ ನೆರವೇರಲಿದ್ದು, ನಾಳೆ ಮಂಗಳವಾರ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಮಹೇಶ್ವರ ಸ್ವಾಮಿಗಂಗಾ ಪೂಜೆಯೊಂದಿಗೆ ಗುಡಿ ತುಂಬಿಕೊಳ್ಳುವುದು. ದಿನಾಂಕ 25ರ ಬುಧವಾರ ಬೆಳಿಗ್ಗೆ 11.30ಕ್ಕೆ ಉತ್ಸವ ಮೂಲಕ ಸ್ವಾಮಿ ಮೂಲ ಸ್ಥಳ ಸೇರಲಿದೆ.

# ಜಗಳೂರು : ಕೇಂದ್ರ ಸಚಿವ ಅಮಿತ್ ಷಾ ಹೇಳಿಕೆ ಖಂಡಿಸಿ ಡಿಎಸ್ ಎಸ್ ಮನವಿ




ಜಗಳೂರು, ಡಿ.22- ಸಂಸತ್ ಕಲಾಪದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಅವಹೇಳನಕಾರಿ ಹೇಳಿಕೆ ಖಂಡಿಸಿ ಡಿಎಸ್ ಎಸ್ ನೇತೃತ್ವದಲ್ಲಿ ತಹಶೀಲ್ದಾರ್ ಮುಖಾಂತರ ರಾಷ್ಟ್ರಪತಿಗೆ ಲಿಖಿತ ಮನವಿ ಸಲ್ಲಿಸಲಾಯಿತು.

ಸಂವಿಧಾನದಡಿಯಲ್ಲಿ ಆಯ್ಕೆಯಾದ ಕೇಂದ್ರ ಸಚಿವರು ನೀಡಿರುವ ಹೇಳಿಕೆ ಖಂಡನೀಯ. ಕೂಡಲೇ ರಾಜೀನಾಮೆ ಸಲ್ಲಿಸಬೇಕು. ಸುಮೋಟೋ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಡಿಎಸ್ ಎಸ್ ಹಿರಿಯ ಮುಖಂಡ ಶಂಭುಲಿಂಗಪ್ಪ ಆಗ್ರಹಿಸಿದರು.

ಪ್ರಗತಿಪರ ಹೋರಾಟಗಾರ ವಕೀಲ ಆರ್. ಓಬಳೇಶ್ ಮಾತನಾಡಿ, ಅಂಬೇಡ್ಕರ್ ಅವರು ಶೋಷಿತ ವರ್ಗಗಳ ಹೃದಯ, ಜೀವಾಳವಾಗಿದ್ದು, ಅನುಯಾಯಿಗಳಾಗಿ ಪ್ರತಿನಿತ್ಯ ಅಂಬೇಡ್ಕರ್ ಅವರನ್ನು ಜಪ ಮಾಡುವಲ್ಲಿ ತಪ್ಪೇನಿದೆ?.ಇದನ್ನು ಸಹಿಸಲಾರದೆ ಪ್ರಧಾನಿ ಮೋದಿ ನೇತೃತ್ವದ ಸಚಿವ ಸಂಪುಟದ ಕೆಲ ಮೂಲಭೂತ ವಾದಿಗಳು ದೇವರು, ಧರ್ಮದ ಹೆಸರಿನಲ್ಲಿ ಜನತೆಯನ್ನು ಒಡೆದಾಳುವ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ದಲಿತ ಸಂಘಟನೆ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ರಾಜಪ್ಪ, ಎಐವೈಎಫ್ ಮುಖಂಡ ಮಾದಿಹಳ್ಳಿ ಮಂಜುನಾಥ್, ದಲಿತ ಮುಖಂಡರಾದ ಮುನಿಯಪ್ಪ, ಭರಮಸಮುದ್ರ ಕುಮಾರ್, ಪಲ್ಲಾಗಟ್ಟೆ ರಂಗಪ್ಪ, ಮಲ್ಲೇಶ್, ತಿಪ್ಪೇಸ್ವಾಮಿ, ಹನುಮಂತಪ್ಪ, ನಿಂಗರಾಜ್, ಹನುಮಂತಪ್ಪ, ಯಲ್ಲಪ್ಪ, ಮಹಾಂತೇಶ್, ಶಿವಣ್ಣ, ಆಕನೂರು ನಿಂಗಪ್ಪ, ರಂಗಸ್ವಾಮಿ, ಉಮೇಶ್ ಸೇರಿದಂತೆ, ಮತ್ತಿತರರು ಭಾಗವಹಿಸಿದ್ದರು.



## ದಾವಣಗೆರೆ ಹಳೆ ಊರಿನ ಚಳಿಗಾಲದ ಸ್ವಾರಸ್ಯಗಳು...

# 'ಪ್ಯಾಟಿ ನೀಲವ್ವನ ಬೀಡಿ ?!!

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.



ಸುಮಾರು 58 ವರ್ಷಗಳ ಹಿಂದೆ ಚಳಿಗಾಲದ ಒಂದು ಬೆಳಿಗ್ಗೆ, ಗುಮ್ಮಿಗಂಗಣ್ಣ ಎಂಬುವವರು ಸಂಘವಿ ಗೇನ್ಮಲ್ ಬಿಕ್ಕಾಜಿಯವರ ಅಂಗಡಿಯಲ್ಲಿ ಕೆಲಸಕ್ಕೆ ಇದ್ದ ಧರ್ಮಣ್ಣ (ಧರ್ಮಚಾರ್) ಬಳಿ ಮಾತನಾಡುತ್ತಾ 'ಎಂಥಾ ಚಳಿ ಧರ್ಮಣ್ಣ, ಎಲ್ಡು ಬೈಟು ಚಾ ಕುಡುದು ನಾಕು ಬೀಡಿ ಧಮ್ ಎಳುದ್ರೂ ಚಳಿ ಬಿಡಾಕುವಲ್ದು, ಎಂಥಾ ಸುಡುಗಾಡು ಚಳಿ' ಎಂದರು.

ಅದಕ್ಕೆ ಧರ್ಮಣ್ಣ 'ನೀನು ಅಂತಿಂಥ ಬೀಡಿ ಧಮ್ ಎಳುದ್ರೆ ಆಗಲ್ಲ, ಪ್ಯಾಟಿ ನೀಲವ್ವನಂಥಾ ಬೀಡೀದು ಧಮ್ಮೆಳೀಬೇಕು' ಎಂದರು. ನನಗಾಗ ಆಶ್ಚರ್ಯವಾಯಿತು, ಯಾರದು ಪ್ಯಾಟಿ ನೀಲವ್ವ? ಏನದು ಆಕೆಯ ಬೀಡಿ? ಎಂದು. ಆಗೆಲ್ಲಾ ನಮಗೆ ಕೇಳಿ ಬರುತ್ತಿದ್ದುದು ಗಣೇಶ ಬೀಡಿ, ಇದರ ಏಜೆನ್ಸಿ ದಾವಣಗೆರೆಯಲ್ಲಿ ಯು ಡಿ ಶೆಣೈ ರವರಿಗೆ ಇತ್ತು, ಗಣೇಶ ಬೀಡಿಯ ಬಹಳಷ್ಟು ಪ್ರಚಾರ ಫಲಕಗಳನ್ನು ಕೀರ್ತಿಶೇಷ ಕಲಾವಿದ ನರಸಿಂಹ ರಾಯಚೂರು (ರಾಯಚೂರು ಪೇಂಟರ್) ನಗರಪಾಲಿಕಾ ಉಪಮೇಯರಾಗಿದ್ದ ಗಿರೀಶ್ ರಾಯಚೂರು ರವರ ತಂದೆ, ಅವರೇ ಸುಂದರವಾಗಿ ಎನಾಮಲ್ ಪೇಂಟ್ ಲ್ಲಿ ಮಾಡುತ್ತಾ ಇದ್ದರು. ಆಗ ಚಾಲ್ತಿಯಲ್ಲಿದ್ದ ಮತ್ತೊಂದು ಬೀಡಿ ಎಂದರೆ ಕಾರ್ಕಳದ ಮಂಜುನಾಥ ಪೈ ರವರ 30 ನಂಬರ್ ಬೀಡಿ, ದಾವಣಗೆರೆಯ ಸ್ಥಳೀಯವಾದ ಜಯದೇವ ಬೀಡಿ, ಫೈಜ್ ಬೀಡಿ ಮುಂತಾದವೂ ಇದ್ದವು. ಆದರೆ, ಯಾವುದಿದು ಪ್ಯಾಟಿ ನೀಲವ್ವನಬೀಡಿ?!!. ಧರ್ಮಣ್ಣರನ್ನು ಕೇಳಿದಾಗ ತಿಳಿಯಿತು.

ನಗರದ ಎಂ.ಜಿ.ರಸ್ತೆಯಲ್ಲಿ ಎಂ.ಸಿ. ಶರ್ಮಾರವರ ರೀಗಲ್ ವಾಚ್ ಕಂಪನಿ ಆಸು ಪಾಸಿನಲ್ಲಿದ್ದ ಸಾಲು ಮನೆಯೊಂದರಲ್ಲಿ ಪ್ಯಾಟಿ ನೀಲವ್ವ ಎಂಬುವವರು ವಾಸವಾಗಿದ್ದು ವಯೋವೃದ್ದೆಯಾಗಿದ್ದ ಆಕೆ ತುಂಬಾ ಗಡಸಾದ ಹೆಣ್ಣು ಮಗಳು, ತುಂಬಾ ಉದ್ದನಾದ ವಿಶೇಷ ಬೀಡಿಯನ್ನು ಆಕೆ ಸೇದುತ್ತಿದ್ದರು, ಸದಾ ಕೈಯಲ್ಲಿ ಅಂತಹ ಒಂದು ಕಟ್ಟು ಬೀಡಿ ಇರುತ್ತಿತ್ತು, ಬಹಳ ಜೋರಿನ ಹೆಣ್ಣುಮಗಳು, ಸಾಕಷ್ಟು ಅನುಕೂಲವೂ ಇತ್ತಾದರೂ ಆಕೆ ಮೈ ಮೇಲೆ ಒಡವೆಯನ್ನಾಗಲೀ ಕೈಗೆ ಬಳೆಯನ್ನಾಗಲೀ ಹಾಕಿಕೊಳ್ಳುತ್ತಿರಲಿಲ್ಲ. ಮಕ್ಕಳಿಲ್ಲದ ನೀಲವ್ವ ಹೆಣ್ಣು ಮಗಳನ್ನು ಸಾಕಿಕೊಂಡು ಜವಳಿ ವ್ಯಾಪಾರ ಮಾಡುವ ಈಶಪ್ಪನವರಿಗೆ ಮದುವೆ ಮಾಡಿಕೊಟ್ಟಿದ್ದರಂತೆ. ದಾವಣಗೆರೆಗೆ ಒಮ್ಮೆ ಬರ ಬಂದಾಗ ಪ್ಯಾಟಿ ನೀಲವ್ವ ನಿತ್ಯವೂ ಅನ್ನದಾನ ಮಾಡಿದ್ದಕ್ಕೆ ಮೈಸೂರು ಮಹಾರಾಜರು ಅರಮನೆಗೆ ಕರೆಸಿ ಶಾಲು ಹೊದಿಸಿ ಸನ್ಮಾನಿಸಿದ್ದಾರೆಂದೂ, ದಾವಣಗೆರೆಗೆ ಮಹಾರಾಜರು ಬಂದಾಗ ನೀಲವ್ವ ಅವರ ಮೆರವಣಿಗೆ ಮಾಡಿಸಿ ತಾನು ವಾಸಿಸುವ ಬೀದಿಗೆ'ಪ್ಯಾಟಿ ನೀಲವ್ವನ ಬೀದಿ' ಎಂದು ನಾಮಕರಣ ಮಾಡುವಂತೆ ಕೇಳಿಕೊಂಡರೆಂದೂ, ಆದರೆ ಅದು ಕೈಗೂಡಲಿಲ್ಲವೆಂದೂ ತಿಳಿಯಿತು. ಈ ಎಲ್ಲ ವಿಷಯಗಳು ಕೀರ್ತಿ ಶೇಷ ಸಾಹಿತಿ ಟಿ.ಗಿರಿಜಾ ರವರ ದಾವಣಗೆರೆ ಇದು ನಮ್ಮ ಜಿಲ್ಲೆ ಗ್ರಂಥದಲ್ಲೂ ದಾಖಲಾಗಿದೆ. ನಗರದ ಪಿಬಿ ರಸ್ತೆಯಲ್ಲಿರುವ ನೀಲಮ್ಮನ ತೋಟ ಎಂಬ ಪ್ರದೇಶವು ಈ ಪ್ಯಾಟಿ ನೀಲವ್ವನದ್ದೆ ಆಗಿದ್ದು, ಅಂತ್ಯಕಾಲದಲ್ಲಿ ಪ್ಯಾಟಿ ನೀಲವ್ವ ಪಾರ್ಶ್ವ ವಾಯು ಪೀಡಿತರಾಗಿದ್ದರೆಂದೂ ತಿಳಿಯಿತು.

ನನ್ನ ಬಾಲ್ಯದಲ್ಲಿ ನಾನು ಕಂಡಂತೆ ದಾವಣಗೆರೆಯಲ್ಲಿ ಬೀಡಿ ಸೇದುತ್ತಿದ್ದ ಮಹಿಳೆಯರು ಎಂದರೆ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಎದುರು ಮಡಿವಾಳಪ್ಪನವರ ಮನೆ ಪಕ್ಕದಲ್ಲಿ ಅಂದರೆ ಈಗಿನ ಕರಣ್ ರಾಜ್ ಸಜ್ಜನ್ ರಾಜ್ ರವರ ಪೇಂಟ್ ಅಂಗಡಿ ಹಾಗೂ ಕಚವಿ ಗಂಗಾಧರಪ್ಪನವರ ಬೆಳ್ಳಿ ಬಂಗಾರದ ಅಂಗಡಿ ಮಧ್ಯದಲ್ಲಿದ್ದ ತಿಂಡಿ ಗಾಡಿ ಭಯ್ಯಾನ ಹೆಂಡತಿ, ಇವರು ರಾಜಸ್ಥಾನದ ಕಡೆಯವರು, ದೊಡ್ಡಭಯ್ಯ ಸಣ್ಣ ಭಯ್ಯ ಅಂತ ಇಬ್ಬರು ಅಣ್ಣತಮ್ಮಂದಿರಿದ್ದರು, ಈ ಭಯ್ಯಾಗಳು ಉತ್ತರ ಭಾರತದ ಅನೇಕ ಸಿಹಿತಿಂಡಿಗಳನ್ನು ಮಾಡುತ್ತಿದ್ದರು. ವಿಶೇಷವಾಗಿ ಅವರ ಎಳೆ ಎಳೆಯಾದ ಅವರ ಬಿಳಿ 'ಸೋನ್ ಪಪ್ಪಡಿ', ಇದನ್ನು ಹಳೇ ಊರಿನ ಮಂದಿ 'ಅಜ್ಜಿ ಕೂದಲು' ಹಾಗೆಯೇ ಮತ್ತೊಂದು ಅಶ್ಲೀಲ ಹೆಸರಿನಿಂದಲೂ ಕರೆಯುತ್ತಿದ್ದರು. ಆ ಭಯ್ಯಾರ ಒಬ್ಬನ ಹೆಂಡತಿ ಈಕೆ, ಇವಳಿಗೆ ಗೀತಾ ಎಂಬ ಚಿಕ್ಕ ಮಗಳೂ ಇದ್ದಳು, ಚಳಿಗಾಲದಲ್ಲಿ ಭಯ್ಯಾನ ಹೆಂಡತಿ ಮನೆ ಒಳಗೆ ಗುಟ್ಟಾಗಿ ಬೀಡಿ ಸೇದುವುದನ್ನು ನಾವು ಬೀದಿ ಹುಡುಗರು ನೋಡಿದ್ದೆವು. ಹಾಗೆಯೇ ಚಿಗಟೇರಿ ಗಲ್ಲಿಯ ಕಡೆಯಲ್ಲಿದ್ದ ನೇಪಾಳಿ ಗೂರ್ಖಾರ ಪೈಕಿ ವಯಸ್ಸಾದ ಹೆಂಗಸೊಬ್ಬಳು ಬೀಡಿ ಸೇದುವುದನ್ನು ನಾವು ಆಶ್ಚರ್ಯದಿಂದ ನೋಡಿದ್ದೆವು.

ಧರ್ಮಣ್ಣ ನಿಂದ ಪ್ಯಾಟಿ ನೀಲವ್ವನ ಬೀಡಿ ವಿಷಯ ಕೇಳಿದ ನಾನು ಸಂಜೆ ಆಟವಾಡುವಾಗ ಸ್ನೇಹಿತರ ಜೊತೆಗೆ ಹಂಚಿಕೊಳ್ಳುತ್ತಿದ್ದಾಗ ಅಲ್ಲಿಗೆ ಬಂದ ವೀರಯ್ಯ ಮೇಷ್ಟ್ರು 'ಏನ್ ಮಾತಾಡಕ್ ಹತ್ತೀರಿ?' ಅಂತ ಕೇಳಿದರು. 'ಪ್ಯಾಟಿ ನೀಲವ್ವನ ಬೀಡಿ ವಿಷಯ' ಎಂದು ಪ್ರಕಾಶಿ ಹೇಳಿದ. ತಕ್ಷಣ ವೀರಯ್ಯ ಮೇಷ್ಟ್ರು 'ಸಣ್ಣ ಹುಡ್ರಾಗಿ ಬೀಡಿ ವಿಷಯ ಮಾತಾಡ್ತೀರ!!, ಕಿವಿ ಹಿಡ್ಕೊಂಡು ಹತ್ಸಲ ಕುಂತ್ ಏಳಲೇ ಪ್ರಕಾಶಿ' ಎಂದರು. ತಪ್ಪಗೆ ಕಿವಿ ಹಿಡಿದುಕೊಂಡು ಹತ್ತು ಸಲ ಕೂತು ಎದ್ದ ಪ್ರಕಾಶಿ.

# ಗೋಲ್ಡನ್ ಚಾರಿಯೇಟ್ ರೈಲು ಪ್ರವಾಸ ದಕ್ಷಿಣ ಭಾರತದ ಮುಕುಟ ಪ್ರಾಯ



ಬೆಂಗಳೂರು, ಡಿ. 22- ಗೋಲ್ಡನ್ ಚಾರಿಯೇಟ್ (ಸುವರ್ಣ ರಥ) ರೈಲು ಪ್ರವಾಸ ದಕ್ಷಿಣ ಭಾರತದ ಶ್ರೀಮಂತ ಸಂಸ್ಕೃತಿ, ಪರಂಪರೆ ಹಾಗೂ ಐತಿಹಾಸಿಕ ಸ್ಥಳಗಳ ಅನಾವರಣಕ್ಕೆ ಮುಕುಟಪ್ರಾಯವೆನಿಸಿದೆ ಎಂದು ಪ್ರವಾಸೋದ್ಯಮ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ನಗರದ ಯಶವಂತಪುರ ರೈಲು ನಿಲ್ದಾಣದ ಫ್ಲಾಟ್ ಫಾರಂ 6 ರಲ್ಲಿ ಗೋಲ್ಡನ್ ಚಾರಿಯೇಟ್ ಐಷಾರಾಮಿ ರೈಲು ಸೇವೆಗೆ ಚಾಲನೆ ನೀಡಿ ಮಾತನಾಡಿದ ಅವರು, ಗೋಲ್ಡನ್ ಚಾರಿಯೇಟ್ ರೈಲು ಸೇವೆಗಳು 2018 ರಿಂದ ತಾತ್ಕಾಲಿಕ ಸ್ಥಗಿತಗೊಂಡಿತ್ತು, ಈಗ ಮರುಚಾಲನೆಗೊಂಡಿದೆ.

ರೈಲಿನ ಮಾಲೀಕತ್ವವನ್ನು 50% ಭಾರತೀಯ ರೈಲ್ವೇ, 25% ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ಕೆಎಸ್‌ಟಿಡಿಸಿ 25% ರಷ್ಟು ಷೇರುಗಳನ್ನು ಹೊಂದಿದೆ. ರೈಲಿನ ಒಳಾಂ ಗಣವನ್ನು ಕಲಾತ್ಮಕವಾಗಿ ನಿರ್ಮಿಸಲಾಗಿದೆ, 18 ಬೋಗಿಗಳಿಗೆ ಕರ್ನಾಟಕವನ್ನು ಆಳಿದ ರಾಜವಂಶಸ್ಥರುಗಳಾದ ಕದಂಬ, ಹೊಯ್ಸಳ, ವಿಜಯನಗರ ಚಾಲುಕ್ಯರ ಹೆಸರನ್ನು ಇಡಲಾಗಿದೆ.

ಊಟ, ವಸತಿಗೆ ಐಷಾರಾಮಿ ವ್ಯವಸ್ಥೆ ಕಲ್ಪಿಸಲಾಗಿದೆ, ಗೋಲ್ಡನ್ ಚಾರಿಯೇಟ್ ಪ್ರವಾಸೋದ್ಯಮ ವಿಶ್ವದ ಪ್ರಸಿದ್ಧ ಪರಂಪರೆಯ ತಾಣಗಳ ಜೊತೆಗೆ ಪಶ್ಚಿಮ ಘಟ್ಟಗಳು, ಪ್ರಾಚೀನ ಕಡಲತೀರಗಳು, ಸಾಂಸ್ಕೃತಿಕ ತಾಣಗಳಿಗೆ ಪ್ರವಾಸಿಗರನ್ನು ಕರೆದೊಯ್ಯುತ್ತದೆ.

ಹೋಟೆಲ್‌ಗಳು, ಕುಶಲಕರ್ಮಿಗಳು, ಪ್ರವಾಸ ನಿರ್ವಾಹಕರಿಗೆ ಆದಾಯ ಕಲ್ಪಿಸಿದಂತಾಗಿದೆ, ವಿಶೇಷ ರೈಲು ಪ್ರವಾಸ ವಿಶ್ವದ ಏಳು ಅತ್ಯುತ್ತಮ ಐಷಾರಾಮಿ ರೈಲು ಪ್ರಯಾಣಗಳಲ್ಲಿ ಗುರುತಿಸಲಾಗಿದ್ದು, ಹಲವು ಪ್ರಶಸ್ತಿ ಪಡೆದುಕೊಂಡಿದೆ.

ರೈಲಿಗೆ 44 ಸುಸುಜ್ಜಿತ ಕ್ಯಾಬಿನ್‌ಗಳು, ಎನ್ ಸೂಟ್ ಸ್ನಾನ ಗೃಹ, ವೈಫೈ ಸಹ ಒಳಗೊಂಡಿದೆ, ರುಚಿ ಮತ್ತು ನಳಪಾಕ ಹೆಸರಿನ ಎರಡು ಹೋಟೆಲ್‌ಗಳು ಭಾರತೀಯ ಮತ್ತು ಅಂತರರಾಷ್ಟ್ರೀಯ ಪಾಕ ಪದ್ಧತಿ ಸೇವೆ ನೀಡುತ್ತವೆ, ಲಾಂಜ್ ಬಾರ್, ಫಿಟ್ನೆಸ್ ಸೆಂಟರ್ ಇತರೆ ಸೌಕರ್ಯವನ್ನೂ ಕಲ್ಪಿಸಲಾಗಿದೆ ಎಂದರು.

ಡಿಸೆಂಬರ್ 21 ರಿಂದ 26 ರವರೆಗೆ ಬೆಂಗಳೂರಿನಿಂದ ಆರಂಭಗೊಂಡು ಮೈಸೂರು, ಕಾಂಚೀಪುರಂ, ಮಹಾಬಲಿಪುರಂ, ತಂಜಾವೂರು, ಕೊಚ್ಚಿನ್, ಮರಾರಿಕುಲಂಗೆ ತೆರಳಿ ನಂತರ ಬೆಂಗಳೂರಿಗೆ ಹಿಂದಿರುಗಲಿದೆ.

ಜ್ಯೂವೆಲ್ ಆಫ್ ಸೌತ್ ರೈಲು ಪ್ರವಾಸ ಐದು ದಿನಗಳದ್ದಾಗಿದ್ದು, ಒಬ್ಬರಿಗೆ 4,07,700 ರೂ. ವೆಚ್ಚವಾಗಲಿದೆ, ಪ್ರೈಡ್ ಆಫ್ ಕರ್ನಾಟಕ ಪ್ರವಾಸ 01-02-2025 ರಿಂದ 06-02-2025ರವರೆಗೆ ಬೆಂಗಳೂರಿನಿಂದ ನಂಜನಗೂಡು, ಮೈಸೂರು, ಹಳೇಬೀಡು, ಚಿಕ್ಕಮಗಳೂರು, ಹೊಸಪೇಟೆ, ಗೋವಾ ಬೆಂಗಳೂರು ಒಳಗೊಂಡಿದ್ದು, ವೆಚ್ಚ 2,71,800 ರೂ. ಸೋಜರ್ನ್ ಆಫ್ ಸೌತ್ ಚಾರ್ಟರ್ಡ್ ಪ್ರವಾಸ 29-12-2024 ರಿಂದ 12-02-2025 ರವರೆಗೆ ಆಯೋಜಿಸಲಾಗಿದೆ.

ದಕ್ಷಿಣ ಭಾರತದ ಪ್ರವಾಸೋದ್ಯಮವನ್ನು ಜಾಗತಿಕವಾಗಿ ಗುರುತಿಸಲು ಈ ಪ್ರವಾಸ ಹೆಚ್ಚು ಸಹಕಾರಿಯಾಗಿದೆ, 2029ರ ವೇಳೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಿಸಲು ಭಾರತದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 3ನೇ ಸ್ಥಾನ ಪಡೆಯುವ ಗುರಿ ಸಹ ಹೊಂದಿದೆ, ಪ್ರವಾಸಿ ತಾಣದ ಮಹತ್ವ ಅರಿಯಲು ಸಹಕಾರಿಯಾಗಿದೆ ಎಂದರು.

# ತಕ್ಷಣ ಭದ್ರಾ ನೀರು ಹರಿಸಲು ಸತೀಶ್ ಆಗ್ರಹ



ದಾವಣಗೆರೆ, ಡಿ. 22 - ಜಿಲ್ಲೆಯಲ್ಲಿ ರೈತರು ಬೇಸಿಗೆ ಹಂಗಾಮಿಗಾಗಿ ಭತ್ತದ ಬೀಜ ಚೆಲ್ಲುವ ಭರಾಟೆ ಜೋರಾಗಿದೆ. ಕೆಲವು ರೈತರು ಭೂಮಿ ಉಳುಮೆ ಮಾಡಿಕೊಂಡು, ಹದಗೊಳಿಸಿ, ಬೀಜ ಉಗ್ಗುವ ಮೂಲಕ ನೇರ ಬಿತ್ತನೆ ಮಾಡುವ ಚೆಲ್ಲು ಭತ್ತದ ಬಿತ್ತನೆಗೆ ಸಜ್ಜಾಗಿದ್ದಾರೆ. ಆದರೆ ಇದುವರೆಗೂ ಜಿಲ್ಲಾಡಳಿತವಾಗಲಿ ಅಥವಾ ಭದ್ರಾ ನೀರಾವರಿ ಸಲಹಾ ಸಮಿತಿ (ಐ.ಸಿ.ಸಿ) ನೀರು ಬಿಡುವ ಬಗ್ಗೆ ಚಕಾರವೆತ್ತಿಲ್ಲ. ತಕ್ಷಣವೇ ಐ.ಸಿ.ಸಿ ಸಭೆ ಕರೆದು ನೀರು ಬಿಡುವ ವೇಳಾಪಟ್ಟಿಯನ್ನು ಪ್ರಕಟಿಸಬೇಕು ಎಂದು ಎಪಿಎಂಸಿ ಮಾಜಿ ಅಧ್ಯಕ್ಷರೂ ಆದ ರೈತ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ಆಗ್ರಹಿಸಿದ್ದಾರೆ.

ಪ್ರಸ್ತುತ ಡ್ಯಾಂ ತುಂಬಿದ್ದು, 183 ಅಡಿ ನೀರಿನ ಮಟ್ಟ ಇದೆ. ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮುಂದಿನ ದಿನಗಳಲ್ಲಿ ಇನ್ನು ಮಳೆಯಾಗುವ ಸಂಭವವಿದೆ. ಆದರೂ ಜಿಲ್ಲಾಡಳಿತ ಈ ಬಗ್ಗೆ ದಿವ್ಯ ಮೌನಕ್ಕೆ ಶರಣಾಗಿದೆ. ರೈತರಿಗೆ ತಕ್ಷಣ ನೀರು ಬೇಕು. ಕಾಲುವೆಯಲ್ಲಿ ನೀರು ಹರಿಸಿದ್ರೆ ಬೇಸಿಗೆ ಹಂಗಾಮಿನ ಭತ್ತದ ಬೆಳೆಗೆ ಅನುಕೂಲವಾಗುತ್ತದೆ ಎಂದವರು ಹೇಳಿದ್ದಾರೆ.

ಉತ್ತಮ ಮಳೆಯಾಗುವ ಹವಾಮಾನ ಇಲಾಖೆ ಮುನ್ಸೂಚನೆ ಇರುವುದರಿಂದ ಈ ಬಾರಿ ಬೇಸಿಗೆ ಹಂಗಾಮು ಭತ್ತದ ಕೃಷಿಗೆ ಪೂರಕವಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಉತ್ತೇಜನ ನೀಡುತ್ತಿದ್ದಾರೆ.

ಡ್ಯಾಂನಲ್ಲಿ ನೀರು ಸಂಗ್ರಹ ಇದ್ದರೂ ನೀರು ಹರಿಸಲು ವಿಳಂಬ ಧೋರಣೆ ಅನುಸರಿಸುತ್ತಿರುವುದು ರೈತ ವಿರೋಧಿ ಧೋರಣೆ ಎಂದು ಸತೀಶ್ ಖಂಡಿಸಿದ್ದಾರೆ.

## 108 ಲಿಂಗೇಶ್ವರ ದೇಗುಲದಲ್ಲಿ ಭಕ್ತಿಗೀತೆ ಸಂಗೀತ ಕಾರ್ಯಕ್ರಮ



**ಹರಿಹರ**

ಹರಿಹರ, ಡಿ.22- ನಗರದ ಭರಂಪುರ ಬಡಾವಣೆಯ 108 ಲಿಂಗೇಶ್ವರ ದೇವಸ್ಥಾನದಲ್ಲಿ 7ನೇ ದಿನದ ಗುಡ್ಡಾಪುರ ದಾನಮ್ಮದೇವಿಯ ಪ್ರವಚನ ಕಾರ್ಯಕ್ರಮ ಹರಿಹರದ ಚೌಡೇಶ್ವರಿ ಭಕ್ತ ಮಂಡಳಿಯಿಂದ ದೇವಿಯ ಭಕ್ತಿ ಗೀತೆಗಳು ಸಂಗೀತ ಕಾರ್ಯಕ್ರಮವನ್ನು ಪವನ್ ಆಚಾರ್ಯ, ನಾಗವೇಣಿ, ಮಂಜುಳಾ, ಭಾರತಿ, ಸುಜಾತ, ಇಂದ್ರಾಣಿ, ಜಾನಕಿ, ವೀಣಾ ಬಾಯಿ, ಆಶಾ ಕುಂಠೆ, ಚನ್ನಕೇಶವ, ಟಿ.ಸಿ ಪುಟ್ಟಪ್ಪ ಮತ್ತಿತರರು ನಡೆಸಿಕೊಟ್ಟರು.

## ನಿಟುವಳ್ಳಿ : ಇಂದು ಕಾರ್ತಿಕೋತ್ಸವ

ಹೊಸ ಬಡಾವಣೆ, ನಿಟುವಳ್ಳಿ ಶ್ರೀ ವಿನಾಯಕ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 6ಕ್ಕೆ ರುದ್ರಾಭಿಷೇಕ ಹೂವಿನ ಅಲಂಕಾರ, ಸಂಜೆ 7ಕ್ಕೆ ಕಾರ್ತಿಕೋತ್ಸವ ನಡೆಯಲಿದೆ.

## ಅಮಿತ್ ಶಾ ವಜಾಗೊಳಿಸಲು ಡಿಎಸ್ಸೆಸ್ ಆಗ್ರಹ




ದಾವಣಗೆರೆ, ಡಿ. 22- ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ವಜಾಗೊಳಿಸುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಷ್ಟ್ರಪತಿಗಳಿಗೆ ಒತ್ತಾಯಿಸಿದೆ.

ಶುಕ್ರವಾರ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಸಮಿತಿ ಸದಸ್ಯರು, ಸಂಸತ್ ಅವಧಿವೇಶನದಲ್ಲಿ ಅಮಿತ್ ಶಾ ಅವರು ಅಂಬೇಡ್ಕರ್ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಅವರು ಗೃಹ ಮಂತ್ರಿ ಸ್ಥಾನದಲ್ಲಿ ಮುಂದುವರೆಯಲು ಯಾವ ನೈತಿಕತೆಯೂ ಇಲ್ಲ ಎಂದು ಸಮಿತಿಯ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಹೇಳಿದರು.

ಷಾ ಅವರ ಹೇಳಿಕೆ ಇಡೀ ಪ್ರಜಾಪ್ರಭುತ್ವವನ್ನೇ ಅಣಕಿಸಿದಂತಾಗಿದೆ. ಹೀಗಾಗಿ ಕೂಡಲೇ ಅಮಿತ್ ಶಾ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬುಳ್ಳಸಾಗರ ಸಿದ್ದರಾಮಣ್ಣ, ವಿಜಯಲಕ್ಷ್ಮಿ, ಮಹಾಂದೇಶ್ ಹರಿಹರ, ತುರ್ಚಘಟ್ಟ ನಾಗರಾಜ್, ತುರ್ಚಘಟ್ಟ ಖಾಲಿದ್ ಅಲಿ, ಮಂಜುನಾಥ್, ಮಹಾಂತೇಶ್ ಹಾಲವರ್ತಿ, ಶಂಕರ್, ಮಂಜು ನಾಗಸನಹಳ್ಳಿ ಇತರರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆ ಉನ್ನತೀಕರಣಕ್ಕೆ ಗ್ರಾಮಸ್ಥರ ಶ್ರಮ ಅಗತ್ಯ



**ಜಿಗಳಿ: ಸರ್ಕಾರಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ತರಗತಿ ಉದ್ಘಾಟನೆಯಲ್ಲಿ ಡಯಟ್ ಉಪನ್ಯಾಸಕಿ ಪೂರ್ಣಿಮಾ**

ಮಲೇಬೆನ್ನೂರು, ಡಿ. 22- ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕೆ ಎಸ್‌ಡಿಎಂಸಿ, ಪೋಷಕರು ಮತ್ತು ಗ್ರಾಮಸ್ಥರು ಶ್ರಮವಹಿಸಬೇಕೆಂದು ದಾವಣಗೆರೆ ಡಯಟ್ ಉಪನ್ಯಾಸಕರು ಹಾಗೂ ಬೈಲಿಗಲ್ ಭಾಷಾ ಆಂಗ್ಲ ಮಾಧ್ಯಮ ಶಾಲೆಗಳ ಜಿಲ್ಲಾ ನೋಡಲ್ ಅಧಿಕಾರಿ ಶ್ರೀಮತಿ ಪೂರ್ಣಿಮಾ ಮನವಿ ಮಾಡಿದರು.

ಜಿಗಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಇಲಾಖೆ ವತಿಯಿಂದ 1ನೇ ತರಗತಿಯನ್ನು ಆಂಗ್ಲ ಮಾಧ್ಯಮ ತರಗತಿಯನ್ನಾಗಿ ಪ್ರಾರಂಭಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಖಾಸಗಿ ಶಾಲೆಗಳನ್ನು ಹಿಂದಿಕ್ಕಲು ಸರ್ಕಾರಿ ಶಾಲೆಗಳನ್ನು ಬೆಳೆಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ರಾಜ್ಯದಲ್ಲಿ ಒಂದು ಸಾವಿರ ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯನ್ನು ಆಂಗ್ಲ ಮಾಧ್ಯಮ ತರಗತಿಗಳನ್ನಾಗಿ ಮಾಡಿದೆ. ದಾವಣಗೆರೆ ಜಿಲ್ಲೆಯಲ್ಲಿ ಇದುವರೆಗೆ 34 ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿಗಳನ್ನು ಆರಂಭಿಸಿದ್ದೇವೆ ಎಂದು ಪೂರ್ಣಿಮಾ ತಿಳಿಸಿದರು.

ಕನ್ನಡ ನಮ್ಮ ಮಾತೃಭಾಷೆ ಮತ್ತು ಪ್ರಥಮ ಭಾಷೆಯಾಗಿದ್ದು, ಹಿಂದಿ ಮತ್ತು ಇಂಗ್ಲೀಷ್ ಅನ್ನು ದ್ವಿತೀಯ ಭಾಷೆಯಾಗಿ ಕಲಿಯುವುದು ಅತ್ಯವಶ್ಯಕವಾಗಿದೆ. ನಿಮ್ಮ ಗ್ರಾಮದಲ್ಲಿ ಆಂಗ್ಲ ಮಾಧ್ಯಮ ತರಗತಿ ಆರಂಭಿಸಿರುವ ಬಗ್ಗೆ ಪ್ರತಿ ಮನೆಗೂ ತಿಳಿಸಿ, ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಎಸ್‌ಡಿಎಂಸಿಯವರು ಶ್ರಮಿಸಬೇಕು ಎಂದು ಪೂರ್ಣಿಮಾ ಹೇಳಿದರು.

ಆಂಗ್ಲ ಮಾಧ್ಯಮ ತರಗತಿಗಾಗಿ ಸಿದ್ಧಪಡಿಸಿರುವ ವಿಶೇಷ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ದುರುಗಪ್ಪ ಅವರು, ಮಕ್ಕಳು ಶಾಲೆಯಲ್ಲಷ್ಟೇ ಓದಿದರೆ ಸಾಲದು, ಮನೆಯಲ್ಲೂ ಪೋಷಕರು ಮಕ್ಕಳ ಕಲಿಕೆ ಬಗ್ಗೆ ಕಾಳಜಿ ವಹಿಸಬೇಕೆಂದರು.

ಮಕ್ಕಳ ಉತ್ತಮ ಬೆಳವಣಿಗೆಯಲ್ಲಿ ತಾಯಿಯ ಸ್ಥಾನ ಬಹಳ ಮುಖ್ಯವಾಗಿದ್ದು, ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಪೋಷಕರು, ಶಿಕ್ಷಕರು ಒಟ್ಟಾಗಿ ಪ್ರಯತ್ನಿಸಬೇಕು. ಮಕ್ಕಳನ್ನು ಮೊಬೈಲ್‌ನಿಂದ ದೂರ ಇಡಬೇಕು. ಕ್ರಿಕೆಟ್ ಜೊತೆಗೆ ಗ್ರಾಮೀಣ ಕ್ರೀಡೆಗಳ ಬಗ್ಗೆ ಮಕ್ಕಳಿಗೆ ಹೇಳಿಕೊಡಬೇಕೆಂದ ದುರುಗಪ್ಪ ಅವರು, ಕಳೆದ 2 ವರ್ಷಗಳಿಂದ ಎಸ್‌ಡಿಎಂಸಿಯಿಂದಲೇ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ನಡೆಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹರಿಹರ ತಾಲ್ಲೂಕಿನ ಹನಗವಾಡಿ, ದೇವರಬೆಳಕೆರೆ, ನಂದಿತಾವರೆ, ಕೆ. ಬೇವಿನಹಳ್ಳಿ ಗ್ರಾಮಗಳಲ್ಲಿ ಈಗಾಗಲೇ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿದ್ದು, ಈ ದಿನ ಜಿಗಳಿ ಮತ್ತು ಕೆ.ಎನ್. ಹಳ್ಳಿಯಲ್ಲಿ ಪ್ರಾರಂಭವಾಗಿವೆ ಎಂದು ಬೈಲಿಗಲ್ ಆಂಗ್ಲ ಭಾಷಾ ಮಾಧ್ಯಮ ಶಾಲೆಗಳ ಹರಿಹರ ತಾ. ನೋಡಲ್ ಅಧಿಕಾರಿ ಭಾಗ್ಯಲಕ್ಷ್ಮಿ ತಿಳಿಸಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಬಡ ಮಕ್ಕಳೂ ಇಂಗ್ಲೀಷ್ ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಸರ್ಕಾರ ಸರ್ಕಾರಿ ಶಾಲೆಗಳ ಆಂಗ್ಲ ಮಾಧ್ಯಮ ತರಗತಿ ಆರಂಭಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಕರ್ತ ಪ್ರಕಾಶ್ ಮಾತನಾಡಿ, ಕನ್ನಡಕ್ಕೆ ಮೊದಲ ಆದ್ಯತೆ ಕೊಟ್ಟು ನಂತರ ಇಂಗ್ಲೀಷ್ ಕಲಿಸಬೇಕು. ನಮ್ಮ ಶಾಲೆಯ ಮಕ್ಕಳ ಪ್ರಗತಿ ನಮ್ಮಗ್ರಾಮಕ್ಕೆ ಹೆಮ್ಮೆ ಎಂದರು.


ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರಚಾರಿ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಇಸಿಓಗಳಾದ ಬಸವರಾಜಪ್ಪ, ಹರೀಶ್ ನೋಟಗಾರ್, ಸಿಆರ್‌ಪಿಗಳಾದ ನಂಜುಂಡಪ್ಪ, ಸತೀಶ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಜಿ.ಆರ್. ಚಂದ್ರಪ್ಪ, ಬಿ. ಪ್ರಭಾಕರ್, ವಿಜಯ ಭಾಸ್ಕರ್, ಎನ್. ಕಲ್ಲೇಶ್, ಟಿ. ನಾಗರಾಜ್, ಪಿಎಸಿಎಸ್ ಮಾಜಿ ಅಧ್ಯಕ್ಷ ಬಿ. ನಿಂಗಾಚಾರಿ, ಕಲಾವಿದ ಡಿ.ರಂಗನಾಥ್ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು, ಪೋಷಕರು ಭಾಗವಹಿಸಿದ್ದರು.

ಪ್ರಭಾರಿ ಮುಖ್ಯ ಶಿಕ್ಷಕ ಲಿಂಗರಾಜ್ ಸ್ವಾಗತಿಸಿದರು. ಶಿಕ್ಷಕ ಗುಡ್ಡಪ್ಪ ನಿರೂಪಿಸಿದರೆ, ಶಿಕ್ಷಕ ಮಲ್ಲಿಕಾರ್ಜುನ್ ವಂದಿಸಿದರು. ಶಿಕ್ಷಕರಾದ ಲೋಕೇಶ್, ಶ್ರೀನಿವಾಸ್ ರೆಡ್ಡಿ, ಜಯಶ್ರೀ, ಕರಿಬಸಮ್ಮ ಇದ್ದರು.

# ಕುಂಭಮೇಳಕ್ಕೆ ವಿಶೇಷ ಏಕಮುಖ ರೈಲು

ಕುಂಭಮೇಳದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು ನೈಋತ್ಯ ರೈಲ್ವೆಯು ಮೈಸೂರಿನಿಂದ ಪ್ರಯಾಗ್ ರಾಜ್‌ಗೆ ವಿಶೇಷ ಏಕಮುಖ ಎಕ್ಸ್ ಪ್ರೆಸ್ ರೈಲು (06215) ಓಡಿಸಲಿದೆ.



ರೈಲು ಸಂಖ್ಯೆ 06215 ಮೈಸೂರು-ಪ್ರಯಾಗ್ ರಾಜ್ ಒನ್-ವೇ ಕುಂಭ ವಿಶೇಷ ಏಕಮುಖ ಎಕ್ಸ್ ಪ್ರೆಸ್ ರೈಲು ಡಿಸೆಂಬರ್ 23, 2024 (ಸೋಮವಾರ) 00:30 ಗಂಟೆಗೆ ಮೈಸೂರಿನಿಂದ ಹೊರಟು, ಬುಧವಾರ 3 ಗಂಟೆಗೆ ಪ್ರಯಾಗ್ ರಾಜ್ ಜಂಕ್ಷನ್ ತಲುಪಲಿದೆ.

ಮಾರ್ಗ ಮಧ್ಯದಲ್ಲಿ, ಈ ರೈಲು ಮಂಡ್ಯ, ಕೆಎಸ್‌ಆರ್. ಬೆಂಗಳೂರು, ಯಶವಂತಪುರ, ತುಮಕೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಎಸ್‌ಎಂಎಂ ಹಾವೇರಿ, ಎಸ್‌ಎಸ್‌ಎಸ್. ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಘಟಪ್ರಭಾ, ಮೀರಜ್, ಸಾಂಗ್ಲಿ, ಕರಾಡ್, ಪುಣೆ, ದೌಂಡ್ ಚೋರ್ಡ್ ಲೈನ್, ಅಹಮ್ಮದ್ ನಗರ, ಮನ್ಮಡ, ಭುಸಾವಲ್, ಖಾಂಡ್ವಾ, ತಲ್ವಾಡಿಯಾ, ಥಾನೆರಾ, ಖಿರ್ಕಿಯಾ, ಹರ್ದಾ, ಬನಪುರ, ಇಟಾರ್ಸಿ, ಪಿಪರಿಯಾ, ನರಸಿಂಗಪುರ, ಜಬಲ್ಪುರ, ಕಟ್ನಿ, ಮೈಹಾರ್, ಸತ್ನಾ ಮತ್ತು ಮಾಣಿಕ್ಪುರ ನಿಲ್ದಾಣಗಳಲ್ಲಿ ನಿಲ್ಲಲಿದೆ.

ಈ ರೈಲಿನ ಆಗಮನ ಮತ್ತು ನಿರ್ಗಮನದ ಸಮಯವನ್ನು ತಿಳಿಯಲು, ಪ್ರಯಾಣಿಕರು ಭಾರತೀಯ ರೈಲ್ವೆಯ ವೆಬ್ ಸೈಟ್ (www.enquiry.indianrail.gov.in) ಭೇಟಿ ನೀಡಿ, 139 ನಂಬರಗೆ ಡಯಲ್ ಮಾಡಿ ಅಥವಾ NTES ಅಪ್ಲಿಕೇಶನ್‌ಅನ್ನುಡೌನ್ಲೋಡ್‌ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಎ.ಐ. ಅಪ್ಪಿಕೊಂಡ ಐರ್ಲ್ಯಾಂಡ್‌ಗೆ ಈಗ ಕರೆಂಟ್ ಶಾಕ್ !

ಕ್ಲೋಂಡಾಲ್ಕಿನ್ (ಐರ್ಲ್ಯಾಂಡ್), ಡಿ. 19- ಐರ್ಲ್ಯಾಂಡ್ ದೇಶದ ಡಬ್ಲಿನ್ ನಗರದ ಹೊರ ವಲಯ ಬೃಹತ್ ಗಾತ್ರದ ಡಾಟಾ ಸೆಂಟರ್‌ಗಳ ತಾಣವಾಗಿದೆ. ಇವುಗಳು ಐರ್ಲ್ಯಾಂಡ್ ದೇಶದ ನಗರ ಪ್ರದೇಶಗಳ ಒಟ್ಟು ಮನೆಗಳಿಗಿಂತ ಹೆಚ್ಚಿನ ವಿದ್ಯುತ್ ಬಳಸುತ್ತಿವೆ. ಇದರಿಂದಾಗಿ ಡಾಟಾ ಸೆಂಟರ್‌ಗಳು ಜನರಿಗೆ ಒಲ್ಲದ ಅತಿಥಿಗಳಾದಂತಾಗಿವೆ.

ಐರ್ಲ್ಯಾಂಡ್‌ನಲ್ಲಿ ಅಮೆಜಾನ್, ಗೂಗಲ್, ಮೆಟಾ, ಮೈಕ್ರೋಸಾಫ್ಟ್ ಹಾಗೂ ಟಿಕ್‌ಟಾಕ್ ಕಂಪನಿಗಳ ಕಂಪ್ಯೂಟಿಂಗ್ ಕಾರ್ಖಾನೆಗಳಿವೆ. ಮುಂದಿನ ಹಂತದ ಕೃತಕ ಬುದ್ಧಿ ವಂತಿಕೆ ಅಲೆಗಾಗಿ ಹೊಸ ಕಂಪ್ಯೂಟಿಂಗ್ ಕಾರ್ಖಾನೆಗಳನ್ನು ಐರ್ಲ್ಯಾಂಡ್ ಬದಲು ಬೇರೆ ದೇಶದಲ್ಲಿ ಸ್ಥಾಪಿಸುವುದು ಸೂಕ್ತವೇ ಎಂಬ ಚಿಂತನೆ ಈಗ ಕಂಪನಿಗಳಲ್ಲಿ ನಡೆದಿದೆ.

ಎ.ಐ. (ಕೃತಕ ಬುದ್ಧಿವಂತಿಕೆ) ಕಾರ್ಖಾನೆಗಳ ವಿದ್ಯುತ್ ಬೇಡಿಕೆ ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಎಂದರೆ ವಿದ್ಯುತ್ ಕಡಿತದ ಭೀತಿಯೂ ಉಂಟಾಗಿದೆ. ಹೀಗಾಗಿ 2028ರವರೆಗೆ ಡಬ್ಲಿನ್ ಬಳಿ ಯಾವುದೇ ಹೊಸ ಡಾಟಾ ಕೇಂದ್ರಗಳನ್ನು ತೆರೆಯುವಂತಿಲ್ಲ ಎಂದು ನಿರ್ಬಂಧ ಹೇರಲಾಗಿದೆ.

ಕಳೆದ ವರ್ಷ ಇಲ್ಲಿನ ಬೃಹತ್ ಡಾಟಾ ಕೇಂದ್ರಗಳು ದೇಶದ ಒಟ್ಟು ವಿದ್ಯುತ್‌ನ ಶೇ. 21ರಷ್ಟು ಬಳಸಿಕೊಂಡಿದ್ದವು ಎಂದು ಅಧಿಕೃತ ದಾಖಲೆಗಳು ತಿಳಿಸಿವೆ. ವಿಶ್ವದ ಯಾವುದೇ ದೇಶ ಇಷ್ಟು ದೊಡ್ಡ ಹೊರೆಯನ್ನು ಎದುರಿಸುತ್ತಿಲ್ಲ ಎಂದು ಹೇಳಲಾಗುತ್ತಿದೆ.

ಮುಂದಿನ ದಶಕಗಳಲ್ಲಿ ಬೇರೆ ದೇಶಗಳು ಯಾವ ಪರಿಸ್ಥಿತಿ ಎದುರಿಸಲಿವೆ ಎಂಬುದಕ್ಕೆ ಐರ್ಲ್ಯಾಂಡ್ ಕನ್ನಡಿಯಾಗಿದೆ ಎಂದು ಯೂನಿವರ್ಸಿಟಿ ಕಾಲೇಜ್ ಕಾರ್ಕ್‌ನ ಇಂಧನ ಸಂಶೋಧಕ ಪೌನ್ ಡಿನೇ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಡಬ್ಲಿನ್ ಕಾರ್ಯಕರ್ತ ಡರಾಗ್ ಅಡಿಲೇಡ್, ನಾವು ವಿರೋಧ ವ್ಯಕ್ತಪಡಿಸದೇ ಹೋಗಿದ್ದರೆ ಗೂಗಲ್ ತನ್ನ ಡಾಟಾ ಕೇಂದ್ರಗಳನ್ನು ಇನ್ನಷ್ಟು ವಿಸ್ತರಿಸುತ್ತಿತ್ತು. ಇಷ್ಟೊಂದು ಡಾಟಾ ಕೇಂದ್ರಗಳು ಇಲ್ಲಿ ಬಂದಿರುವುದು ಆಘಾತಕಾರಿಯಾಗಿದೆ ಎಂದಿದ್ದಾರೆ.

ಡಾಟಾ ಕೇಂದ್ರಗಳ ಕಾರಣದಿಂದಾಗಿ ವಿದ್ಯುತ್ ಬಳಕೆ, ವೆಚ್ಚ ಹೆಚ್ಚಾಗುತ್ತಿದೆ. ಇದು ಜನರ ಮೇಲೆ ಪರಿಣಾಮ ಬೀರುತ್ತಿದೆ ಎಂದವರು ಹೇಳಿದ್ದಾರೆ.

ಐರ್ಲ್ಯಾಂಡ್ ದೇಶವು ದೈತ್ಯ ಟೆಕ್ ಕಂಪನಿಗಳಿಗೆ ಆಕರ್ಷಣೀಯ ತಾಣವಾಗಿದೆ. ದೇಶದಲ್ಲಿನ ತೆರಿಗೆ ವಿನಾಯಿತಿ, ಕುಶಲ ಸಿಬ್ಬಂದಿ, ಇಂಗ್ಲಿಷ್ ಮಾತನಾಡುವ ಕೆಲಸಗಾರರು ಹಾಗೂ ಯೂರೋಪ್ ಒಕ್ಕೂಟದ ಸದಸ್ಯತ್ವ ಪಡೆದಿರುವುದು ಐರ್ಲ್ಯಾಂಡ್‌ನಲ್ಲಿ ಡಾಟಾ ಕೇಂದ್ರಗಳು ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಟೆಕ್ ವಲಯ ಈಗ ಐರ್ಲ್ಯಾಂಡ್ ಆರ್ಥಿಕತೆಯ ಕೇಂದ್ರವಾಗಿದೆ.

ಬಹುತೇಕ ಎಲ್ಲಾ ಡಾಟಾ ಕೇಂದ್ರಗಳು ಡಬ್ಲಿನ್ ಹೊರವಲಯದಲ್ಲಿವೆ. ಐರ್ಲ್ಯಾಂಡ್ ತಂಪು ವಾತಾವರಣ ಹೊಂದಿದೆ. ಇದರಿಂದಾಗಿ ಡಾಟಾ ಕೇಂದ್ರಗಳಲ್ಲಿನ ಕಂಪ್ಯೂಟರ್‌ಗಳು ಅತಿಯಾಗಿ ಬಿಸಿಯಾಗುವುದು ತಪ್ಪುತ್ತದೆ. ಡಾಟಾ ಕೇಂದ್ರಗಳು ಕಂಪ್ಯೂಟರ್ ಬಿಸಿಯಾಗುವ ಸಮಸ್ಯೆಗಳನ್ನು ವ್ಯಾಪಕವಾಗಿ ಎದುರಿಸುತ್ತವೆ. ಈ ಸಮಸ್ಯೆ ಎದುರಿಸಲು ಹೆಚ್ಚಿನ ನೀರು ಹಾಗೂ ವಿದ್ಯುತ್ ಬೇಕಾಗುತ್ತದೆ. ಐರ್ಲ್ಯಾಂಡ್ ವಾತಾವರಣವೇ ತಂಪಾಗಿರುವ ಕಾರಣ ಇಲ್ಲಿ ಕಂಪ್ಯೂಟರ್ ತಂಪುಗೊಳಿಸಲು ಆಗುವ ವೆಚ್ಚ ಕಡಿಮೆಯಾಗಿದೆ.

ಹಲವು ವರ್ಷಗಳ ಕಾಲ ಈ ಡಾಟಾ ಕೇಂದ್ರಗಳ ವಿದ್ಯುತ್ ಬೇಡಿಕೆ ಬಗ್ಗೆ ಜನರು ಗಮನ ಹರಿಸಿರಲಿಲ್ಲ. ಆದರೆ ಈಗ ಐರ್ಲ್ಯಾಂಡ್ ಜನತೆ ಯೂರೋಪ್ ವಲಯದಲ್ಲೇ ಅತಿ ಹೆಚ್ಚು ವಿದ್ಯುತ್ ಬಿಲ್ ಪಾವತಿಸುತ್ತಿದ್ದಾರೆ. ಡಾಟಾ ಕೇಂದ್ರಗಳು ಜನರೇಟರ್‌ಗಳನ್ನು ವ್ಯಾಪಕವಾಗಿ ಬಳಸುತ್ತಿವೆ. ಇದರಿಂದಾಗಿ ಡಬ್ಲಿನ್ ಬಳಿ ವಾಯುಮಾಲಿನ್ಯದ ಅಪಾಯ ಹೆಚ್ಚಾಗಿದೆ ಎಂದು ಐರ್ಲ್ಯಾಂಡ್‌ನ ಪರಿಸರ ರಕ್ಷಣಾ ಸಂಸ್ಥೆ ಎಚ್ಚರಿಕೆ ನೀಡಿದೆ.

2021ರ ವೇಳೆ ಐರ್ಲ್ಯಾಂಡ್ ಒಟ್ಟು ವಿದ್ಯುತ್‌ನ ಶೇ. 33ರಷ್ಟನ್ನು ಡಾಟಾ ಕೇಂದ್ರಗಳು ಬಳಸಲು ಆರಂಭಿಸಿದಾಗ ಮೊದಲ ಬಾರಿಗೆ ಎಚ್ಚರಿಕೆ ಗಂಟೆ ಬಾರಿಸಲಾಗಿತ್ತು.

ಡಬ್ಲಿನ್ ನಗರದ ಮಿತಿ ತಲುಪಲಾಗಿದೆ. ಇನ್ನಷ್ಟು ಡಾಟಾ ಕೇಂದ್ರಗಳಿಗೆ ಇಲ್ಲಿ ಅವಕಾಶ ಇಲ್ಲ ಎಂದು ನಿಯಂತ್ರಕರು ತಿಳಿಸಿದರು. ರಾಜಧಾನಿ ಹೊರಗಡೆ ಎಲ್ಲಾದರು ಟೆಕ್ ಕಂಪನಿಗಳು ತಮ್ಮ ಘಟಕ ಸ್ಥಾಪಿಸಬೇಕು ಎಂದು ಸರ್ಕಾರ ತಿಳಿಸಿತ್ತು.

ಇಂತಹ ನಿರ್ಬಂಧಗಳ ಕಾರಣದಿಂದಾಗಿ ಡಾಟಾ ಕೇಂದ್ರಗಳು ಸಮಸ್ಯೆ ಎದುರಿಸುವಂತಾಗಿದೆ. ನಾವು ಹೆಚ್ಚು ಗ್ರಾಹಕರನ್ನು ಪಡೆಯಲು ಅವಕಾಶ ಇಲ್ಲದಂತಾಗಿದೆ ಎಂದು ಡಿಜಿಟಲ್ ರಿಯಾಲ್ಟಿ ಡಾಟಾ ಕೇಂದ್ರದ ನಿರ್ದೇಶಕ ಡರ್ಮೋಟ್ ಲಹೆ ತಿಳಿಸಿದ್ದಾರೆ.

ಡಾಟಾ ಕೇಂದ್ರಗಳು ಈಗ ಡಬ್ಲಿನ್ ಆಚೆಗೆ ತಾಣಗಳ ಹುಡುಕಾಟ ನಡೆಸಿವೆ. ಕೌಂಟಿ ಅಫಾಲೆ ರೀತಿಯ ತಾಣಗಳು ಈಗ ಡಾಟಾ ಸೆಂಟರ್‌ಗಳನ್ನು ಸೆಳೆಯುತ್ತಿವೆ. ಆದರೆ ಡಾಟಾ ಸೆಂಟರ್‌ಗಳ ಕಾರಣದಿಂದಾಗಿ ಪರಿಸರದ ಮೇಲೆ ಹಾನಿಯಾಗುವ ಬಗ್ಗೆ ಸ್ಥಳೀಯರು ಕಳವಳ ಹೊಂದಿದ್ದಾರೆ. ಇದೆಲ್ಲದರ ನಡುವೆ ಅಮೆಜಾನ್ ತನ್ನ ಡಾಟಾ ಸೆಂಟರ್ ಅನ್ನು ಬೇರೆಡೆ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿದೆ.

ಡಾಟಾ ಸೆಂಟರ್‌ಗಳನ್ನು ಉಳಿಸಿಕೊಳ್ಳಲು ಹಾಗೂ ಇದೇ ವೇಳೆ ಪರಿಸರ ರಕ್ಷಿಸಲು ಪವನ ವಿದ್ಯುತ್ ಅಳವಡಿಸಿಕೊಳ್ಳುವ ಚಿಂತನೆಗಳು ನಡೆದಿವೆ. ಆದರೆ ಪವನ ವಿದ್ಯುತ್ ಮೂಲಕ ಅಗತ್ಯ ಬೇಡಿಕೆ ಈಡೇರಿಸಲು ಸಾಧ್ಯವೇ ಎಂದು ಅನುಮಾನ ವ್ಯಕ್ತಪಡಿಸುವವರೂ ಇದ್ದಾರೆ.

ಡಾಟಾ ಕೇಂದ್ರಗಳು ಇಲ್ಲಿನ ಸಾಕಷ್ಟು ಜನರಿಗೆ ಉದ್ಯೋಗಗಳನ್ನು ಒದಗಿಸಿವೆ. ಡಾಟಾ ಕೇಂದ್ರಗಳ ವಿಸ್ತರಣೆ ನಿಂತರೆ ಇಲ್ಲವೇ ಸ್ಥಳಾಂತರಗೊಂಡರೆ ಉದ್ಯೋಗ ಕಳೆದುಕೊಳ್ಳುವ ಭೀತಿಯೂ ಸ್ಥಳೀಯರಲ್ಲಿದೆ. ಮುಂದಿನ ವರ್ಷ ಐರ್ಲ್ಯಾಂಡ್ ನೂತನ ರಾಷ್ಟ್ರೀಯ ಸರ್ಕಾರವನ್ನು ಪಡೆದುಕೊಳ್ಳಲಿದೆ. ಹೊಸ ಸರ್ಕಾರ ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಲು ಸಿದ್ಧವಾಗಬೇಕಿದೆ.

# ತವರಿಗೆ ಮರಳಿದ ಸಿರಿಯನ್ ನಿರಾಶ್ರಿತರಿಗೆ ವಾಸ್ತವದ ಆಘಾತ

ಅಲೆಪ್ಪೋ(ಸಿರಿಯಾ), ಡಿ. 22 - ಸಿರಿಯಾದಲ್ಲಿ ಆಂತರಿಕ ಸಂಘರ್ಷ ಉಂಟಾದ ನಂತರ ಟರ್ಕಿಗೆ ಸಾವಿರಾರು ಸಂಖ್ಯೆಯಲ್ಲಿ ಜನರು ತೆರಳಿದ್ದರು. ಸಿರಿಯಾ ಅಧ್ಯಕ್ಷ ಬಷರ್ ಅಸಾದ್ ಪದಚ್ಯುತವಾದ ನಂತರ ಇವರು ತಮ್ಮ ತವರಿಗೆ ವಾಪಾಸ್ಸಾಗಿದ್ದಾರೆ. ಆದರೆ ಈ ರೀತಿ ವಾಪಾಸ್ ಬಂದವರಿಗೆ ಕಟು ವಾಸ್ತವದ ಅರಿವಾಗಿದೆ. ಯುದ್ಧದಿಂದ ತತ್ತರಗೊಂಡ ನಗರದಲ್ಲಿ ಹೊಸದಾಗಿ ಬದುಕು ಕಟ್ಟಿಕೊಳ್ಳುವ ದೊಡ್ಡ ಸವಾಲು ಎದುರಾಗಿದೆ.



ಅಲೆಪ್ಪೋದಂತಹ ನಗರಗಳು ಯುದ್ಧದಿಂದ ಸಂಪೂರ್ಣ ಹಾನಿಗೆ ಗುರಿಯಾಗಿದ್ದು, ನೀರು ಹಾಗೂ ವಿದ್ಯುತ್ ರೀತಿಯ ಮೂಲಭೂತ ಸೌಲಭ್ಯಗಳಿಗೂ ಪರದಾಡುವಂತಾಗಿದೆ.

ಹತ್ತಾರು ವರ್ಷಗಳಿಂದ ಟರ್ಕಿಯಲ್ಲಿ ಬದುಕು ಕಟ್ಟಿಕೊಂಡಿದ್ದ ಜನರು ಈಗ ತಮ್ಮ ತವರು ನಗರದಲ್ಲಿ ಹೊಸದಾಗಿ ಜೀವನ ಆರಂಭಿಸಬೇಕಿದೆ.

ಟರ್ಕಿ ಅಷ್ಟೇ ಅಲ್ಲದೇ ಮತ್ತೊಂದು ನೆರೆ ದೇಶ ಲೆಬೆನಾನ್‌ನಿಂದಲೂ ಸಾವಿರಾರು ಜನರು ಸಿರಿಯಾಗೆ ವಾಪಾಸ್ ಬರುತ್ತಿದ್ದಾರೆ. ಇವರೆಲ್ಲರೂ ಈಗ ಅತಂತ್ರ ಭವಿಷ್ಯ ಎದುರಿಸುತ್ತಿದ್ದಾರೆ.

ಟರ್ಕಿಗೆ ವಲಸೆ ತೆರಳಿದವರು ಅಲ್ಲಿ ತಾತ್ಕಾಲಿಕವಾಗಿ ಉಳಿದುಕೊಳ್ಳುವ ಅನುಮತಿ ಪಡೆದುಕೊಂಡಿದ್ದರು. ಸಿರಿಯಾಗೆ ಮರಳುವಾಗ ಅವರು ತಮ್ಮ ತಾತ್ಕಾಲಿಕ ವಸತಿ ಅನುಮತಿಯನ್ನು ವಾಪಾಸ್ ನೀಡಿದ್ದಾರೆ. ಈಗ ಟರ್ಕಿಗೆ ವಾಪಾಸ್ ತೆರಳುವ ಮಾರ್ಗ ಮುಚ್ಚಿದೆ. ಏನೇ ಕಷ್ಟ ಎದುರಾದರೂ ಸಿರಿಯಾದಲ್ಲೇ ಅವರು ತಮ್ಮ ಜೀವನ ಕಂಡುಕೊಳ್ಳಬೇಕಿದೆ.

ಈ ರೀತಿ ಟರ್ಕಿಯಿಂದ ಸಿರಿಯಾಗೆ ಮರಳಿದವರಲ್ಲಿ ಅಹ್ಮದ್ ಅಲ್ - ಕಸೇಮ್ ಸಹಾ ಒಬ್ಬರಾಗಿದ್ದಾರೆ. ಸಿರಿಯಾದಲ್ಲಿ ಅವರು ಈಗ ತಮ್ಮ ಸಹೋದರಿ ಮನೆಯಲ್ಲಿ ಉಳಿದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಲೆಪ್ಪೋ ನಗರದಲ್ಲಿದ್ದ ತಮ್ಮ ಹಳೆಯ ಮನೆ ಸಂಪೂರ್ಣ ಹಾನಿಯಾಗಿದೆ. ಅಲ್ಲಿ ಬದುಕಲು ಸಾಧ್ಯವಿಲ್ಲ. ಟರ್ಕಿಯಿಂದ ನಾನು, ನನ್ನ ಹೆಂಡತಿ ಹಾಗೂ ಮಕ್ಕಳು ಬಂದಿದ್ದೇವೆ. ಇಲ್ಲಿನ ಪರಿಸ್ಥಿತಿ ಈ ರೀತಿ ಇದೆ ಎಂದು ಗೊತ್ತಾಗಿದ್ದರೆ ನಾನೆಂದೂ ಬರುತ್ತಿರಲಿಲ್ಲ. ಟರ್ಕಿಯಲ್ಲಿ ನಮ್ಮ ಜೀವನ ಉತ್ತಮವಾಗೇನೂ ಇರಲಿಲ್ಲ. ಆದರೆ ಇಲ್ಲಿನ ಪರಿಸ್ಥಿತಿ ವಿನಾಶಕಾರಿಯಾಗಿದೆ ಎಂದು 38 ವರ್ಷದ ಅಲ್ -ಕಸೇಮ್ ಹೇಳಿದ್ದಾರೆ.

ಅಲ್- ಕಸೇಮ್ ರೀತಿಯಲ್ಲೇ ಸಾವಿರಾರು ಸಿರಿಯಾ ನಿರಾಶ್ರಿತರು ವಾಪಾಸ್ ತೆರಳಿದ್ದಾರೆ ಎಂದು ಟರ್ಕಿ ಅಧಿಕಾರಿಗಳು ಹೇಳಿದ್ದಾರೆ. ಕಳೆದ ಡಿಸೆಂಬರ್ 9ರಂದು ಅಸಾದ್ ಸರ್ಕಾರ ಪತನಗೊಂಡ ನಂತರ ಸಿರಿಯಾ ಮತ್ತೆ ಮುಕ್ತವಾಗುವ ಆಶಾಭಾವನೆ ನಿರಾಶ್ರಿತರಲ್ಲಿ ಮೂಡಿತ್ತು.

ಡಿಸೆಂಬರ್ 13ರಂದು ಅಲ್ ಕಸೇಮ್ ಕುಟುಂಬ ಟರ್ಕಿಯಿಂದ ಲಾರಿಗಳಲ್ಲಿ ತಮ್ಮ ಸರಕುಗಳನ್ನು ಹೇರಿಕೊಂಡು ಅಲೆಪ್ಪೋಗೆ ವಾಪಾಸ್ಸಾಗಿತ್ತು. ಈ ನಗರ ಅಂತರ್ಯುದ್ಧದಿಂದ ತೀವ್ರ ಹಾನಿಗೀಡಾಗಿದೆ.

ಕಳೆದ 11 ವರ್ಷಗಳಿಂದ ಅಲ್ -ಕಸೇಮ್ ಟರ್ಕಿಯಲ್ಲಿ ಉಳಿದುಕೊಂಡಿದ್ದರು. ಅವರ ಐದು ಮಕ್ಕಳ ಪೈಕಿ ನಾಲ್ವರು ಟರ್ಕಿಯಲ್ಲೇ ಜನಿಸಿದ್ದರು. ವೀಡಿಯೋ ಚಾಟ್ ಮೂಲಕ ಮಾತ್ರ ಅವರು ಸಿರಿಯಾದಲ್ಲಿರುವ ತಮ್ಮ ಸಂಬಂಧಿಗಳ ಜೊತೆ ಮಾತನಾಡಲು ಸಾಧ್ಯವಾಗಿತ್ತು. ಅವರ ಮಕ್ಕಳು 7 ರಿಂದ 14 ವಯಸ್ಸಿನವರಾಗಿದ್ದಾರೆ. ಅವರೀಗ ಸಿರಿಯಾದಲ್ಲಿ ಸಂಪೂರ್ಣ ಹೊಸ ಜಗತ್ತಿಗೆ ಕಾಲಿಟ್ಟಂತಾಗಿದೆ. ಟರ್ಕಿ ಅವರನ್ನು ವಾಪಾಸ್ ಕರೆದುಕೊಳ್ಳುವ ಬಾಗಿಲು ಮುಚ್ಚಿದೆ.

ಟರ್ಕಿಯ ಆಂಕ್ಯುಪೈನರ್ ಗಡಿ ದಾಟಲು ಅವರು ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಯಿತು. ವಾಪಾಸ್ ಬರುವ ವೇಳೆ ಟರ್ಕಿ ಅಧಿಕಾರಿಗಳು ತಾತ್ಕಾಲಿಕ ವಸತಿ ದಾಖಲೆಗಳನ್ನು ವಾಪಾಸ್ ಪಡೆದಿದ್ದರು. ಈ ದಾಖಲೆ ಹೊಂದಿದ್ದವರು ಮಾತ್ರ ಟರ್ಕಿಯಲ್ಲಿ ನಿರಾಶ್ರಿತರ ಸ್ಥಾನ ಪಡೆಯಲು ಹಾಗೂ ಉಳಿದುಕೊಳ್ಳಲು ಅವಕಾಶವಿದೆ.

ಆದರೆ ಅಲೆಪ್ಪೋ ನಗರದಲ್ಲಿ ಬಂದಾಗ ಅವರಿಗೆ ತಮ್ಮ ಹಳೆಯ ಮನೆ ಸಂಪೂರ್ಣ ಹಾಳಾಗಿರುವುದು ಗೊತ್ತಾಯಿತು. ರಾತ್ರಿ ವಿದ್ಯುತ್ ಇಲ್ಲದೇ ನಗರ ಸಂಪೂರ್ಣವಾಗಿ ಕತ್ತಲಿನಿಂದ ಆವೃತವಾಗಿತ್ತು. ಅಂತರ್ಯುದ್ಧದ ಕಾರಣದಿಂದಾಗಿ ಇಲ್ಲಿನ ಸಾಕಷ್ಟು ಮನೆಗಳಿಗೆ ಹಾನಿಯಾಗಿದೆ.

ಇದರಿಂದಾಗಿ ಅಲ್- ಕಸೇಮ್ ಕುಟುಂಬ ಅವರ ಸಹೋದರಿಯ ಮನೆಯ ಆಶ್ರಯ ಪಡೆಯಬೇಕಾಯಿತು. ಇಲ್ಲಿಯೂ ಸಹ ವಿದ್ಯುತ್ ಇಲ್ಲವಾದರೂ ಮನೆ ಗಟ್ಟಿಯಾಗಿತ್ತು.

ಮೂರು ದಿನಗಳ ನಂತರ ಅಲ್- ಕಸೇಮ್ ಅವರು ತಮ್ಮ ಮಕ್ಕಳನ್ನು ಇನ್ನೊಬ್ಬರು ಸಂಬಂಧಿಕರ ಮನೆಗೆ ಕಳುಹಿಸಿದ್ದಾರೆ. ಇಲ್ಲಿ ವಿದ್ಯುತ್ ಇಲ್ಲವೇ ನೀರಿನ ಸೌಲಭ್ಯ ಇಲ್ಲ. ಹೀಗಾಗಿ ಕುಟುಂಬದವರು ಉಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಂಬಂಧಿಕರ ಮನೆಯಲ್ಲಿ ದಿನಕ್ಕೆ ಕೆಲವು ಗಂಟೆಗಳಾದರೂ ವಿದ್ಯುತ್ ಸಿಗುತ್ತಿದೆ ಎಂದವರು ಹೇಳಿದ್ದಾರೆ.

ಯುದ್ಧ ನಿಂತ ತಕ್ಷಣವೇ ಕುಟುಂಬದವರನ್ನು ವಾಪಾಸ್ ಕರೆಸಿಕೊಂಡಿದ್ದು ತಪ್ಪಾಯಿತೇ ಎಂಬ ಭಾವನೆ ಈಗ ಅಲ್- ಕಸೇಮ್ ಅವರಲ್ಲಿ ಮೂಡಿದೆ.

ಟರ್ಕಿಯಲ್ಲಿ ಜೀವನ ಉತ್ತಮವಾಗಿತ್ತು ಎಂದೇನೂ ಅಲ್ಲ. ಆದರೆ ಅಲ್ಲಿ ನೀರು, ವಿದ್ಯುತ್, ಇಂಟರ್‌ನೆಟ್ ಇತ್ತು. ಜೀವನದ ಅಗತ್ಯ ವಸ್ತುಗಳು ಲಭ್ಯವಿದ್ದವು. ಸಿರಿಯಾದಲ್ಲಿ ಹಲವು ದಿನಗಳವರೆಗೆ ನೀರು ಸಿಗುತ್ತಿಲ್ಲ. ನಾನು ಮಕ್ಕಳ ಜೊತೆ ಇರಲು ಸಾಧ್ಯವಾಗುತ್ತದೆಯೋ ಎಂಬುದು ಗೊತ್ತಿಲ್ಲ ಎಂದು ಅಲ್ -ಕಸೇಮ್ ಹೇಳಿದ್ದಾರೆ.

ಅವರ 14 ವರ್ಷಗಳ ಮಗಳಾದ ರವಿಯಾ ಮಾತನಾಡಿ, ಸಂಬಂಧಿಕರ ಜೊತೆ ಬಂದಿರುವುದಕ್ಕೆ ಸಂತೋಷವಾಗುತ್ತಿದೆ. ಆದರೆ ಅಲೆಪ್ಪೋದಲ್ಲಿ ವಿದ್ಯಾಭ್ಯಾಸ ಮುಂದುವರಿಸುವ ಬಗ್ಗೆ ಚಿಂತೆ ಇದೆ. ನಾನು ಇಷ್ಟು ವರ್ಷ ಟರ್ಕಿ ಶಾಲೆಗಳಲ್ಲಿ ಅಭ್ಯಾಸ ಮಾಡಿದ್ದೆ. ನನಗೆ ಅರೇಬಿಕ್ ಮಾತನಾಡಲು ಬರುತ್ತದೆಯಾದರೂ ಬರೆಯಲು ಬರುವುದಿಲ್ಲ. ಹೊಸದಾಗಿ ಅರೇಬಿಕ್ ಬರೆಯುವುದು ಕಲಿಯಲು ಕಷ್ಟವಾಗಲಿದೆ. ಇಷ್ಟಾದರೂ ಸಿರಿಯಾಗೆ ಬಂದಿದ್ದು ಸಂತೋಷ ತಂದಿದೆ ಎಂದವರು ಹೇಳಿದ್ದಾರೆ.

2013ರಲ್ಲಿ ಬಂಡುಕೋರರು ಅಲೆಪ್ಪೋ ನಗರವನ್ನು ಆಕ್ರಮಿಸಿಕೊಂಡಾಗ ಅಲ್ -ಕಸೇಮ್ ಕುಟುಂಬ ಅಲ್ಲಿಂದ ಪಲಾಯನ ಮಾಡಿತ್ತು. ಅವರ ಮನೆಯ ಮೇಲೆ ಶೆಲ್ ದಾಳಿ ನಡೆದಿದ್ದು ಕುಟುಂಬಕ್ಕೆ ಆಘಾತ ನೀಡಿತ್ತು. ಇದೆ ಅವರು ಅಲ್ಲಿಂದ ಪಲಾಯನ ಮಾಡಲು ಕಾರಣವಾಗಿತ್ತು.

ಟರ್ಕಿಯ ಕಹಾರಮನ್‌ಮಾರಸ್ ಎಂಬ ನಗರದಲ್ಲಿ ಅವರ ಕುಟುಂಬ ಆಶ್ರಯ ಪಡೆದಿತ್ತು. ನಂತರ ಅಲ್ಲಿ ಹುಟ್ಟಿದ ನಾಲ್ಕು ಮಕ್ಕಳು ಟರ್ಕಿ ಭಾಷೆಯನ್ನೇ ಕಲಿತಿದ್ದರು. ಅರೇಬಿಕ್ ಮಾತನಾಡಲು ಸ್ವಲ್ಪ ಮಾತ್ರ ಬರುತ್ತಿದೆ.

ಅಲೆಪ್ಪೊ ಒಂದು ಕಾಲದಲ್ಲಿ ಸಿರಿಯಾದ ಆರ್ಥಿಕ ನಗರವಾಗಿತ್ತು. ಆದರೆ ಹಲವು ವರ್ಷಗಳ ಸಂಘರ್ಷದ ಕಾರಣದಿಂದ ನಗರ ಸಂಪೂರ್ಣ ಹಾಳಾಗಿದೆ. 2016ರಲ್ಲಿ ರಷ್ಯಾ ಹಾಗೂ ಇರಾನ್ ಬೆಂಬಲಿತ ಪಡೆದು ಈ ನಗರವನ್ನು ಸಂಪೂರ್ಣವಾಗಿ ವಶಕ್ಕೆ ತೆಗೆದುಕೊಂಡಿದ್ದವು. ಆದರೆ ನಗರ ಪೂರ್ವಭಾಗ ಸಂಪೂರ್ಣ ನಾಶವಾಗಿದೆ. ಹಲವಾರು ಕಟ್ಟಡಗಳು ಅವಶೇಷಗಳ ರೀತಿ ನಿಂತಿವೆ.

ಟರ್ಕಿಯಲ್ಲಿನ ತಮ್ಮ ಜೀವನದ ಬಗ್ಗೆ ಮಾತನಾಡಿರುವ ಅಲ್ -ಕಸೇಮ್, ಅಲ್ಲಿದ್ದಾಗ ನಾನು ಕೊರೊನಾ ಮಹಾಮಾರಿ ಎದುರಿಸಬೇಕಾಯಿತು. 2023ರಲ್ಲಿ ಭೀಕರ ಭೂಕಂಪ ಅಪ್ಪಳಿಸಿತ್ತು. ಈಗ ಸಿರಿಯಾಗೆ ವಾಪಾಸ್ಸಾಗುವಂತರ ಕಠಿಣ ಪರಿಸ್ಥಿತಿ ಎದುರಿಸಬೇಕಾಗಿದೆ. ಆದರೆ ನಾನು ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಗಿದೆ. ಇದು ನನ್ನ ತವರು ನೆಲೆ ಹಾಗೂ ಇಲ್ಲಿರುವವರು ನನ್ನ ಜನ ಎಂದು ಹೇಳಿದ್ದಾರೆ.

## ಕಡಲೆಯಲ್ಲಿ ಯಾಂತ್ರೀಕೃತ ಕಟಾವಿಗೆ ಸೂಕ್ತ ತಳಿಗಳ ಪ್ರಯೋಗ




**ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್**

ಚನ್ನಗಿರಿ, ಡಿ. 22 - ಕಡಲೆ ಪ್ರಮುಖವಾದ ದ್ವಿದಳ ಧಾನ್ಯ ಬೆಳೆಯಾಗಿದ್ದು, ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಕಡಲೆ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅನೇಕ ಅಧಿಕ ಇಳುವರಿ ಕೊಡುವ ತಳಿಗಳ ಪರಿಚಯ ಅಗತ್ಯವಿದೆ ಎಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಅಭಿಪ್ರಾಯಪಟ್ಟರು.

ಚನ್ನಗಿರಿ ತಾಲ್ಲೂಕು ಭೀಮನೆರೆ ಗ್ರಾಮದಲ್ಲಿ ಕಡಲೆ ಬೆಳೆಯಲ್ಲಿ ಯಾಂತ್ರೀಕೃತ ಕಟಾವಿಗೆ ವಿವಿಧ ತಳಿಗಳ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಯಾಂತ್ರೀಕೃತ ಕಟಾವಿಗೆ ಸೂಕ್ತವಾದ ತಳಿಯಾದ NBeG-776 ಮತ್ತು ಪುಲೆ ವಿಕ್ರಂ ಬಿತ್ತನೆ ಮಾಡಲಾಗಿದ್ದು, ಬೆಳೆ ಹೂ ವಾಡುವ ಹಂತದಲ್ಲಿದ್ದು, ಸ್ಥಳೀಯ ತಳಿಗಳಿಗೆ ಹೋಲಿಕೆ ಮಾಡಿದರೆ ಬೆಳೆಯು ಎತ್ತರವಾಗಿ ಬೆಳೆದಿದೆ. ಈ ಸಂದರ್ಭದಲ್ಲಿ ನೀರಿನಲ್ಲಿ ಕರಗುವ ರಸಗೊಬ್ಬರವಾದ 19:19:19 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು ಹಾಗೂ ಕಾಯಿ ಕೊರಕದ ಕೀಟ ನಿರ್ವಹಣೆಗಾಗಿ ಇಮಾಮೆಕ್ಕಿನ್ ಬೆಜೋಯೇಟ್ 0.5 ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಲ್ ಮಾಡಬೇಕು ಎಂದು ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ ಕ್ಷೇತ್ರ ಭೇಟಿ ಸಂದರ್ಭದಲ್ಲಿ ರೈತರಿಗೆ ತಿಳಿಸಿದರು.

ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಸ್ತರಣಾ ತಜ್ಞ ರಘುರಾಜ್, ರುದ್ರೇಶ್, ವಿಶ್ವನಾಥ್ ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಬಸವೇಶ್ವರ ಕಾರ್ತಿಕೋತ್ಸವ

ಬಸವರಾಜ ಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ವೀರೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 7.30ಕ್ಕೆ ಕಡೇ ಕಾರ್ತಿಕ ಮಹೋತ್ಸವ ನಡೆಯಲಿದೆ.

# ಕನ್ನಡ ಮನಸುಗಳ ಏಕೀಕರಣವಾಗಬೇಕು



**ಮಿಟ್ಲಕಟ್ಟೆಯ ವಿಬಿಪಿ ಫೌಂಡೇಶನ್ನಿನ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಘುವೇಂದ್ರ ನಾಯರಿ**

ದಾವಣಗೆರೆ, ಡಿ.22- ಭೌಗೋಳಿಕವಾಗಿ, ಆಡಳಿತಾತ್ಮಕವಾಗಿ ಏಕೀಕರಣವಾದರೆ ಸಾಲದು. ಕನ್ನಡ ಮನಸ್ಸುಗಳ ಏಕೀಕರಣ ಮೊದಲು ಆಗಬೇಕು. ನಾಡಿನಲ್ಲಿ ಇರುವ ನಾವೆಲ್ಲರೂ ಒಂದೇ ಎಂಬ ಭಾವನೆ ಎಲ್ಲರಲ್ಲೂ ಬರಬೇಕು. ಸಂಗೀತ, ಸಾಹಿತ್ಯ, ಕಲೆ, ಶೈಕ್ಷಣಿಕ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಕ್ಕೆ ಕರ್ನಾಟಕದ ಕೊಡುಗೆ ಅಪಾರವಾಗಿದೆ. ಕನ್ನಡ ಸಾಹಿತ್ಯಕ್ಕೆ ಸಿಕ್ಕ 8 ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯ ದ್ಯೋತಕವಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಹೇಳಿದರು.

ಇಲ್ಲಿಗೆ ಸಮೀಪದ ಮಿಟ್ಲಕಟ್ಟೆ ಗ್ರಾಮದಲ್ಲಿ ವಿಬಿಪಿ ಫೌಂಡೇಶನ್ ವತಿಯಿಂದ ಈಚೆಗೆ ಆಯೋಜಿಸಿದ್ದ 69 ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕನ್ನಡ ನಾಡು, ನುಡಿಗೆ ಮಹತ್ವ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಬೇಕು. ಕರ್ನಾಟಕ ರಾಜ್ಯೋತ್ಸವ ಸಮಾರಂಭವು ಕನ್ನಡ ನಾಡಿನಲ್ಲಿ ನೆಲೆಸಿರುವ ಪ್ರತಿಯೊಬ್ಬರ ಮನೆ ಹಬ್ಬವಾಗಬೇಕು ಹಾಗೂ ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗದೇ ನಿತ್ಯೋತ್ಸವವಾಗಬೇಕು.

ಹೃದಯದ ಭಾಷೆ ಎನ್ನಿಸಿಕೊಂಡ ಮಾತೃಭಾಷೆಯನ್ನು ಎಂದಿಗೂ ಮರೆಯಬಾರದು. ಕನ್ನಡ ಯಾವುದೇ ಮತ ಪಂಥದ ಭಾಷೆಯಲ್ಲ. ಅದು ನಮ್ಮ ಮಣ್ಣಿನ ಭಾಷೆ. ಎಲ್ಲಾ ಹಂತದಲ್ಲಿ ಕನ್ನಡ ಭಾಷೆ ಬಳಕೆಮಾಡುವುದರ ಮೂಲಕ ಕನ್ನಡ ನಾಡುನುಡಿಯ ವೈಭವೀಕರಣ ಕನ್ನಡಿಗರಾದ ನಾವೇ ಮಾಡಬೇಕು. ಕನ್ನಡ ನಾಡು, ನುಡಿ, ಸಾಹಿತ್ಯದ ಹಿರಿಮೆ ಗರಿಮೆಯನ್ನು ಯುವ ಜನತೆಗೆ ತಲುಪಿಸಬೇಕು ಎಂದು ನಾಯರಿ ಅಭಿಪ್ರಾಯಪಟ್ಟರು.

ಅತಿಥಿಯಾಗಿ ಆಗಮಿಸಿದ್ದ ಆಶಾಕಿರಣ ಟ್ರಸ್ಟ್ ಸಂಸ್ಥಾಪಕ ಪೋಪತ್‌ಲಾಲ್ ಜೈನ್ ಮಾತನಾಡಿ, ಕನ್ನಡ ನಾಡಿನ ಬದುಕುಕಟ್ಟಿಕೊಂಡವರೆಲ್ಲರೂ ಕನ್ನಡ ನಾಡು ನುಡಿಯ ಸೇವೆಯನ್ನು ನಿಸ್ವಾರ್ಥತೆ ಯಿಂದ ಮಾಡಬೇಕು ಎಂದರು. ಇದೇ ಸಂದರ್ಭ ದಲ್ಲಿ ವಿಬಿಪಿ ಫೌಂಡೇಶನ್‌ನ ವಿದ್ಯಾರ್ಥಿಗಳಿಗೆ ಕನ್ನಡ ಶಾಲು ಹಾಗೂ ಸಿಹಿ ವಿತರಿಸಿದರು.

ವಿಬಿಪಿ ಫೌಂಡೇಶನ್ ಮುಖ್ಯಸ್ಥ ಶಿವಕುಮಾರ್ ಮೇಗಳಮನೆ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡವು ಸಮೃದ್ಧವಾದ ಭಾಷೆ, ಸುಲಭವಾಗಿ ಅರ್ಥವಾಗುತ್ತದೆ. ಉದ್ಯೋಗ, ಉದ್ಯಮ ಸೇರಿದಂತೆ ವಿವಿಧ ಉದ್ದೇಶಕ್ಕಾಗಿ ಬಂದು ನಮ್ಮ ನೆಲದಲ್ಲಿ ಬದುಕುತ್ತಿರುವ ಎಲ್ಲರಿಗೂ ಅದರಲ್ಲೂ ಬೇರೆ ಭಾಷೆಯವರಿಗೆ ಕನ್ನಡವನ್ನು ಕಲಿಸುವ ಕಾರ್ಯವಾಗಬೇಕು. ಇಲ್ಲಿನ ಸೌಲಭ್ಯಗಳನ್ನೆಲ್ಲಾ ಬಳಸಿಕೊಳ್ಳುತ್ತಿರುವ ನೀವು ನಮ್ಮ ಭಾಷೆಯನ್ನು ಕಲಿತುಕೊಳ್ಳಿ ಎಂದು ಹೇಳುವಂತಹ ದಕ್ಷತೆ ನಮ್ಮಲ್ಲೂ ಬರಬೇಕು ಎಂದರು.

ಸಮಾರಂಭದಲ್ಲಿ ಸಂಸ್ಥೆಯ ಹಿತೈಷಿಗಳಾದ ಹೋಟೆಲ್ ಉದ್ಯಮಿ ಸುರೇಶ್, ನಗೆಕೂಟದ ರಾಮಚಂದ್ರ ಶೆಟ್ಟರ್, ಗಣಪತಿ ಕಾಗಲ್‌ಕರ್, ವಿಬಿಪಿ ಫೌಂಡೇಶನ್ ಕಾರ್ಯದರ್ಶಿ ಪ್ರಭು ಎ ಎ.ಎನ್., ಚೌಡಪ್ಪ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಅನನ್ಯ ಸೇವೆ



**ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎನ್.ಟಿ. ಎರ್ರಿಸ್ವಾಮಿ ಅವರಿಗೆ ಗೌರವಾರ್ಪಣೆ**

ಬ್ಯಾಂಕಿನ ಕೆಲಸವೆಂದರೆ ಕೂಡಿ-ಕಳೆಯುವ ವ್ಯಾವಹಾರಿಕ ಕಾಯಕ ಎನ್ನುವಂತಾಗಿರುವ ಇಂದಿನ ದಿನಮಾನದಲ್ಲಿ ಬ್ಯಾಂಕು ಹಾಗೂ ಅಲ್ಲಿನ ಸಿಬ್ಬಂದಿ ಮನಸ್ಸು ಮಾಡಿದರೆ ಜನರ, ದೇಶದ ಆರ್ಥಿಕ - ಸಾಮಾಜಿಕ ಬದುಕನ್ನು ಸಮಗ್ರವಾಗಿ ಬದಲಾಯಿಸಬಲ್ಲರು ಎಂಬುದಕ್ಕೆ ಇಂದಿಗೂ ಅಲ್ಲಲ್ಲಿ ಬೆರಳೆಣಿಕೆಯಷ್ಟು ಉದಾಹರಣೆಗಳು ಸಿಗಬಲ್ಲವು. ಅಂತಹ ಸಾಧಕರೊಬ್ಬರು ದಾವಣಗೆರೆ ಜಿಲ್ಲೆ, ಜಗಳೂರಿನಲ್ಲಿದ್ದಾರೆ. ಅವರೇ ಕೆನರಾ ಬ್ಯಾಂಕಿನ ವಿಶ್ರಾಂತ ವಿಭಾಗೀಯ ವ್ಯವಸ್ಥಾಪಕ ಎನ್.ಟಿ. ಎರ್ರಿಸ್ವಾಮಿ.

ಹಾಲೇಹಳ್ಳಿ ಎನ್ನುವ ಕುಗ್ರಾಮದಲ್ಲಿ ಹುಟ್ಟಿದ, ಹಳ್ಳಿಹೈದ ಎರ್ರಿಸ್ವಾಮಿ ಬ್ಯಾಂಕಿನ ಮೂಲಕ ಗ್ರಾಮೀಣಾಭಿವೃದ್ಧಿ, ಸ್ವಯಂ ಉದ್ಯೋಗ ತರಬೇತಿ, ನಿರುದ್ಯೋಗ ನಿವಾರಣೆ, ಗ್ರಾಮಗಳ ದತ್ತು ಸ್ವೀಕಾರ, ಕೃಷಿ, ಗುಡಿ ಕೈಗಾರಿಕೆ, ಮಹಿಳಾ ಸಬಲೀಕರಣ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟದ ಸಾಧನೆಗಳನ್ನು ಮಾಡಿ ಹೆಸರಾಗಿದ್ದಾರೆ.

ತಾವು ಕೆಲಸ ಮಾಡಿದ ಕರ್ನಾಟಕದ 14 ಜಿಲ್ಲೆಗಳು ಹಾಗೂ ಆಂಧ್ರದಲ್ಲಿ ಇವರು ರಚಿಸಿದ ಮಹಿಳಾ ಸ್ವ-ಸಹಾಯ ಸಂಘಗಳು ಒಂದೆರಡಲ್ಲ. ಬರೋಬ್ಬರಿ 8 ಸಾವಿರ ಗುಂಪುಗಳು. ಸುಮಾರು ಒಂದೂವರೆ ಲಕ್ಷ ಮಹಿಳೆಯರನ್ನು ಒಗ್ಗೂಡಿಸಿ ಇವರು ರಚಿಸಿದ ಸಂಘಗಳು ಕರ್ನಾಟಕದಲ್ಲಿ ಮಾತ್ರವಲ್ಲ ಹೊರ ರಾಜ್ಯಗಳು ಹಾಗೂ ಹೊರದೇಶದ ಗಮನ ಸೆಳೆಯುವಂತಾಗಿರುವುದು ಒಂದು ವಿಶೇಷ. ರಾಜ್ಯದಲ್ಲಿ ಸ್ತ್ರೀ-ಶಕ್ತಿ ಯೋಜನೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಅಂಗನವಾಡಿ ಶಿಕ್ಷಕಿಯರ ಮೂಲಕ ಬ್ಯಾಂಕು ಪರಿಧಿಯ ಹಳ್ಳಿಗಳಲ್ಲಿ ನೂರಾರು ಮಹಿಳಾ ಸ್ವ-ಸಹಾಯ ಸಂಘ ಗಳನ್ನು ರಚಿಸಿ ಸ್ತ್ರೀ-ಶಕ್ತಿ ಯೋಜನೆಗೆ ಪ್ರೇರಕರಾದವರು ಎರ್ರಿಸ್ವಾಮಿಯವರು.

ಮಹಿಳೆಯರು ಸಂಘಟನಾತ್ಮಕವಾಗಿ ಸಮರ್ಥರಾಗಲು ಆರ್ಥಿಕ ಶಕ್ತಿಯೂ ಕೂಡ ಮುಖ್ಯ ಎಂಬುದನ್ನು ಅರಿತ ಎರ್ರಿಸ್ವಾಮಿಯವರು ತಾನಿದ್ದ ಕೆನರಾ ಬ್ಯಾಂಕಿನ ಮೂಲಕ ನೂರಾರು ಕೋಟಿ ರೂಪಾಯಿಗಳ ಆರ್ಥಿಕ ಸೌಲಭ್ಯವನ್ನು ಒದಗಿಸಿದ್ದು ಅಲ್ಲದೆ ಮಹಿಳೆಯರು ಶೇಕಡಾ 100% ರಷ್ಟು ಮರುಪಾವತಿ ಮಾಡುವಂತೆಯೂ ನೋಡಿಕೊಂ ಡರು. 1500 ಮಹಿಳಾ ಸ್ವ-ಸಹಾಯ ಸಂಘಗಳು ಒಂದೇ ದಿನ 41 ಕೋಟಿ ಸಾಲ ಸೌಲಭ್ಯವನ್ನು ಹೊಂದಲು ಕಾರಣರಾದವರು ಇವರು.

ಆಂಧ್ರದ ನಂದ್ಯಾಲದಲ್ಲಿ ಒಂದು ಸಾವಿರ ವಿಶೇಷಚೇತನರನ್ನು ಒಗ್ಗೂಡಿಸಿ ಅವರದೇ ಸ್ವ-ಸಹಾಯ ಗುಂಪುಗಳನ್ನು ರಚಿಸಿ ಮುನ್ನಡೆಸಿ ಅವರ ಸ್ವಾಭಿಮಾನದ ಬದುಕಿಗೆ ನೆರವಾದ ರೀತಿ ಆಂಧ್ರದಲ್ಲಿ ಇವರಿಗೆ ಅಪಾರ ಕೀರ್ತಿಯನ್ನು ತಂದು ಕೊಟ್ಟಿದೆ. ಅದೇ ರೀತಿ 400 ಜನ ಮಹಿಳೆಯರಿಗೆ ಒಂದೇ ಶಾಖೆಯಲ್ಲಿ 'ಮನೆ ಸಾಲ'ಗಳನ್ನು ಮಂಜೂರು ಮಾಡಿ, ಅವರು ಸೂರು ಹೊಂದಲು ನೆರವಾದದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಒಂದು ದಾಖಲೆಯಾಗಿದೆ.

ಹೀಗೆ ಹತ್ತು ಹಲವು ರೀತಿಯಲ್ಲಿ ಮಹಿಳಾ ಉನ್ನತಿಗಾಗಿ ಶ್ರಮಿಸಿದ ಎನ್.ಟಿ. ಎರ್ರಿಸ್ವಾಮಿಯವರನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಮಂಡ್ಯದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಸಬಲೀಕರಣದ ಸಾಧನೆಗಾಗಿ ಸನ್ಮಾನಿಸಿರುವುದು ಸಂತಸವನ್ನುಂಟು ಮಾಡಿದೆ. ಅವರ ಸಾಹಿತ್ಯಿಕ ಸಾಧನೆಯೂ ಕೂಡ ಅಮೋಘವಾದುದು. ಇವರು ಬ್ಯಾಂಕಿಗರಾಗಿದ್ದು ಇದುವರೆಗೆ ಕನ್ನಡದಲ್ಲಿ 36 ಕೃತಿಗಳನ್ನು ರಚಿಸಿ 28 ಕೃತಿಗಳನ್ನು ಹೊರತಂದಿದ್ದಾರೆ.



**- ಶ್ರೀಮತಿ ಗೀತಾ ಮಂಜು**
ಕವಿ, ಸಹ ಶಿಕ್ಷಕಿ,
ಬೆಣ್ಣೆಹಳ್ಳಿ, ಜಗಳೂರು ತಾಲ್ಲೂಕು

# ತುರ್ಚಘಟ್ಟ : ಮಕ್ಕಳಿಗೆ ನಗದು ಠೇವಣಿ ಪತ್ರಗಳ ವಿತರಣೆ



ದಾವಣಗೆರೆ, ಡಿ. 22- ಸಮೀಪದ ತುರ್ಚಘಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ನಗದು ಠೇವಣಿ ಪತ್ರಗಳ ವಿತರಣೆ ಸಮಾರಂಭವನ್ನು ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಲಯನ್ ಅಧ್ಯಕ್ಷ ಎಸ್.ಜಿ. ಉಳವಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ದೊರೆಯುತ್ತಿರುವ ಶಿಕ್ಷಣದ ವ್ಯವಸ್ಥೆಯನ್ನು ಕೊಂಡಾಡಿದರು. ಮುಖ್ಯ ಅತಿಥಿಗಳಾಗಿ ಮಹಾಂತೇಶ್ ಒಣರೊಟ್ಟಿ, ಕಾರ್ಯದರ್ಶಿ ಸಿ. ಅಜಯ್ ನಾರಾಯಣ್, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್, ಗ್ರಾಮದ ಹಿರಿಯ ಸಿದ್ದಲಿಂಗಯ್ಯ, ಮುಖ್ಯೋಪಾಧ್ಯಾಯರಾದ ಶ್ರೀಮತಿ ಕಲ್ಪನಾ ಭಾಗವಹಿಸಿದ್ದರು. ಶಿಕ್ಷಕಿ ಶ್ರೀಮತಿ ಸುಮಿತ್ರ ಕಾರ್ಯಕ್ರಮ ನಿರೂಪಿಸಿದರು.

## ಕೆಟಿಜೆ ನಗರದಲ್ಲಿ ಶ್ರೀ ಮಲ್ಲಿಕಾರ್ಜುನ, ಶ್ರೀ ಕಂಠಿದುರ್ಗಮ್ಮ ಕಾರ್ತಿಕೋತ್ಸವ

ಕೆ.ಟಿ.ಜೆ. ನಗರದ 10ನೇ ತಿರುವಿನಲ್ಲಿರುವ ಗಾಂಧೀಜಿ ಹರಿಜನ ಯುವಕ ಸಂಘದಿಂದ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿದುರ್ಗಮ್ಮ ದೇವಸ್ಥಾನದಲ್ಲಿ ಇಂದು -ನಾಳೆ ಸಂಜೆ 7.30ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಕಾರ್ತಿಕೋತ್ಸವ ನೆರವೇರಿಸಲಾಗುವುದು ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ.

## ನಾಳೆ ಶ್ರೀ ಗಾಳಿ ದುರ್ಗಾಂಬಿಕಾ ಕಾರ್ತಿಕೋತ್ಸವ

ದಾವಣಗೆರೆ, ಡಿ. 22 - ನಗರದ ವೆಂಕಾಭೋವಿ ಕಾಲೋನಿಯ ಶಕ್ತಿ ದೇವತೆ ಶ್ರೀ ಗಾಳಿ ದುರ್ಗಾಂಬಿಕಾ ದೇವಿಯ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 24ರ ಮಂಗಳವಾರ ನಡೆಯಲಿದೆ.

## ಆಂಜನೇಯ ಬಡಾವಣೆಯಲ್ಲಿ ಶ್ರೀ ಬನ್ನಿಮಹಾಂಕಾಳಿ ದೇವಿ ಕಾರ್ತಿಕ



ದಾವಣಗೆರೆ, ಡಿ.22- ನಗರದ ಆಂಜನೇಯ ಬಡಾವಣೆ ಬಿಐಇಟಿ ಕಾಂಪೌಂಡ್‌ನ ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನ ಅಭಿವೃದ್ಧಿ ಸಮಿತಿಯಿಂದ 12ನೇ ವರ್ಷದ ಶ್ರೀ ಬನ್ನಿಮಹಾಂಕಾಳಿ ದೇವಿಯ ಕಡೇ ಕಾರ್ತಿಕ ಮತ್ತು ದೀಪೋತ್ಸವ ಜರಿಗಿತು. ಶ್ರೀಮತಿ ಶೀಲಾ, ಅನಿಲ್ ಗೌಡ್ರು (ಪ್ರೇರಣ ಹೆಲ್ತ್‌ಕೇರ್ ಕ್ಲಿನಿಕಲ್ ಲ್ಯಾಬೋರೇಟರಿ) ಅವರು ಕಾರ್ತಿಕ, ದೀಪೋತ್ಸವದ ಸೇವಾರ್ಥಿಗಳಾಗಿದ್ದರು.


**ಸೈಟ್, ಮನೆ, ಜಮೀನು**
ನೇರ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನನ್ನದು. ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
**ಕಿರಣ್ ಬೂಸ್ನೂರ್ (ಏಜೆಂಟ್)**
98440 63409, 97315 63409
(ದಯವಿಟ್ಟು ನಿಮ್ಮ ಗೆಳೆಯರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
**ಸ್ವಾಮಿ ಏಜೆಂಟ್, ವಿದ್ಯಾನಗರ**
97421 44715

**ವೃದ್ಧಾಶ್ರಮ**
**ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ**
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ॥, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
97400 98047

**ಬೇಕಾಗಿದ್ದಾರೆ**
ಶಿವ ಸೈಬರ್ ಕೆಫೆ ದಾವಣಗೆರೆ ಕನ್ನಡ & ಇಂಗ್ಲಿಷ್ ಟೈಪಿಸ್ಟ್ ಬೇಕಾಗಿದ್ದಾರೆ.
98808 23450

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**CARS FOR SALE**
KIA SONET Diesel
I20 Petrol
New Hyundai Creta
Renault Duster
Contact : Daivik Iynahalli
99456 43223

**ಸೈಟುಗಳು ಮಾರಾಟಕ್ಕಿವೆ**
ವಿನೋಬನಗರ 4ನೇ ಮೇನ್‌ನಲ್ಲಿ ಒಂದು ಸೈಟು, ಜಯ ನಗರದಲ್ಲಿ ಒಂದು ಸೈಟು, ಶಿವಪ್ಪ ಸರ್ಕಲ್ 1st ಫ್ಲೋರ್‌ನಲ್ಲಿ 3BHK ಮನೆ / ಆಫೀಸ್ ಬಾಡಿಗೆಗೆ ಇದೆ.
97317 46168

**ಅಡಿಕೆ ತೋಟ ಮಾರಾಟಕ್ಕೆ**
ಅಡಿಕೆ ತೋಟ ಮಾರಾಟಕ್ಕೆ ಇದೆ, ಫಸಲಿಗೆ ಬಂದಿರುವ ಮೇನ್ ರೋಡ್ ಅಟ್ಯಾಚ್ಡ್ ಇರುವ ಎರಡೂವರೆ (2.5) ಎಕರೆ. ಸಂಪರ್ಕಿಸಿ :
88612 84178

**ನೇರ ಸಂದರ್ಶನ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ಸರ್ವೀಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಸಂಜೆ 6 ರಿಂದ ರಾತ್ರಿ 11 ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
94489 80070, 88847 04025

**ಆಫೀಸ್ ಬಾಡಿಗೆಗಿದೆ**
1ನೇ ಫ್ಲೋರ್‌ನಲ್ಲಿ ಶಿವಪಾರ್ವತಿ ದೇವಸ್ಥಾನದ ಎದುರು, ವಿದ್ಯಾನಗರ ಮುಖ್ಯರಸ್ತೆಯಲ್ಲಿ 1400 ಚ.ಅಡಿ ಜೊತೆಗೆ ಇಂಟೀರಿಯರ್ ಇದೆ.
72047 48919, 98444 43242

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಮನೆಗೊಂದು ಮರ ಊರಿಗೊಂದು ವನ**

**ಗೋಡೌನ್ ಬಾಡಿಗೆಗೆ ಇದೆ**
ಚನ್ನಗಿರಿ ರಸ್ತೆ ಪಕ್ಕದಲ್ಲಿರುವ ತ್ಯಾವಣಿಗೆ ಚನ್ನಗಿರಿ ರೋಡ್ 84x88 ಅಳತೆಯ ಗೋಡೌನ್ 64 ಹೆಚ್.ಪಿ. ಪವರ್ ಇರುವ, ಅಡಿಕೆ ಪ್ಲೇಟ್ ತಯಾರು ಮಾಡಲು, ಭತ್ತ, ಮೆಕ್ಕೆಜೋಳ, ಕಲ್ಯಾಣ ಮಂಟಪಕ್ಕೆ ಉಪಯೋಗಿಸಿಕೊಳ್ಳಲು ಅನುಕೂಲಕರವಾಗಿದೆ.
99451 59582, 98451 51179

**ಬಾಡಿಗೆಗೆ ಇದೆ**
ಪುಷ್ಪಾಂಜಲಿ ಟಾಕೀಸ್ ರೋಡ್ ರೈಲ್ವೆ ಟ್ರ್ಯಾಕ್ ಪಕ್ಕ ಉತ್ತರಾಭಿಮುಖವಾಗಿ 16x36 3 ಮಳಿಗೆ. 1 ಮಳಿಗೆ 32x36 ಪೂರ್ವಾಭಿಮುಖ L ಶೇಪ್ ಕಾರ್ನರ್, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪಾರ್ಕಿಂಗ್ ಇರುತ್ತದೆ. ಪ್ಲೈವುಡ್ ಶಾಪ್, ಹಗ್ಗದ ಅಂಗಡಿ, ಬಳೆ ಶಾಪ್, ಪೈಪ್ ಅಂಗಡಿ, ಫಸ್ಟ್ ಫ್ಲೋರ್ 80x36 ಅಳತೆಯ ಲಿಫ್ಟ್ ವ್ಯವಸ್ಥೆ ಇರುವ, ಬಾತ್ ರೂಂ ವ್ಯವಸ್ಥೆ ಇರುತ್ತದೆ. ಹಾಸ್ಪಿಟಲ್ ಮತ್ತು ಸ್ಕೂಲ್ ಯೋಗ್ಯವಾಗಿದೆ.
99451 59582
99451 99770

**ಬೇಕಾಗಿದ್ದಾರೆ**
ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ. ವಸತಿ ಸೌಲಭ್ಯ ಇರುತ್ತದೆ ಸಂಪರ್ಕಿಸಿ. :
77230 46988

**ಗೋಡೌನ್ ಮತ್ತು ಮಳಿಗೆಗಳು ಬಾಡಿಗೆಗೆ ಇವೆ**
ದಾವಣಗೆರೆ APMC ಸೈಟ್ ನಂ. 20 'F' ಬ್ಲಾಕ್‌ನಲ್ಲಿ ಕಾರ್ನರ್ ಸೈಟ್ ಮಳಿಗೆ: 22x10, 22x10, 22x22, 28x22 ಮತ್ತು ಗೋಡೌನ್ 84x28 ಎತ್ತರ 30 ಅಡಿ ಬಾಡಿಗೆಗೆ ಇವೆ. ಸಂಪರ್ಕಿಸಿ :
98866 74409, 94489 29493

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮನೆ ಲೀಜ್‌ಗಿದೆ**
# 3100/51, ನೂತನ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟುಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81235 13157, 91108 97420

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಸೇಲ್ಸ್ ಮೆನ್ ಬೇಕಾಗಿದ್ದಾರೆ.
93414 58505

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್, ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

# ಜಿಲ್ಲಾ ಆಸ್ಪತ್ರೆ ಶಿಥಿಲ ಕಟ್ಟಡ ವೀಕ್ಷಿಸಿದ ಶಾಸಕ ಕೆ.ಎಸ್. ಬಸವಂತಪ್ಪ



ದಾವಣಗೆರೆ, ಡಿ. 22 - ಜಿಲ್ಲಾ ಸಾರ್ವಜನಿಕ ಚಿಗಟೇರಿ ಆಸ್ಪತ್ರೆಯಲ್ಲಿ ಈಚೆಗೆ ಮೇಲ್ಚಾವಣಿಯ ಪದರು ಕಳಚಿ ಬಿದ್ದು ಮೂವರು ಗಾಯಗೊಂಡ ಹಿನ್ನೆಲೆಯಲ್ಲಿ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಶನಿವಾರ ರಾತ್ರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಳೆದ ಡಿ. 17 ರಂದು ಆಸ್ಪತ್ರೆಯ ಮೇಲ್ಚಾವಣಿಯ ಪದರು ಕಳಚಿ ಬಿದ್ದು, ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕಿನ ಹಲವಾಗಲು ಗ್ರಾಮದ ಕಾವೇರಿ, ಪ್ರೇಮಾ ಹಾಗೂ ಎರಡೂವರೆ ವರ್ಷದ ಮಗು ಗಾಯಗೊಂಡಿದ್ದರು. ಅಲ್ಲದೇ ಕಳೆದ ಮಾರ್ಚ್ ತಿಂಗಳಲ್ಲಿ ಇದೇ ರೀತಿ ಪದರು ಕಳಚಿ ಬಿದ್ದು ವಾರ್ಡ್ ನಂಬರ್ 72 ರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಂಜುನಾಥ್ ಎಂಬ ರೋಗಿ ಗಾಯಗೊಂಡಿದ್ದರು.

ಜಿಲ್ಲಾ ಆಸ್ಪತ್ರೆಯ ಕಟ್ಟಡ ಶಿಥಿಲಗೊಂಡು ಆಸ್ಪತ್ರೆಗೆ ದಾಖಲಾಗುವ ರೋಗಿಗಳು ಜೀವ ಭಯದಲ್ಲಿ ಚಿಕಿತ್ಸೆ ಪಡೆಯುವಂತಾಗಿದೆ ಎಂದು ಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟಗೊಂಡಿತ್ತು.

ಈ ಹಿನ್ನೆಲೆಯಲ್ಲಿ ಶಾಸಕ ಬಸವಂತಪ್ಪ ಭೇಟಿ ನೀಡಿ ಆಸ್ಪತ್ರೆಯ ಕಟ್ಟಡವನ್ನು ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಈಚೆಗೆ ದಾವಣಗೆರೆಗೆ ಆಗಮಿಸಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹಾಗೂ ತಾವು ಹೊಸ ಕಟ್ಟಡ ನಿರ್ಮಿಸುವಂತೆ ಮನವಿ ಮಾಡಲಾಗಿತ್ತು. ಮುಂದಿನ ದಿನಗಳಲ್ಲಿ ಜಿಲ್ಲಾ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಮೇಲೆ ಒತ್ತಡ ಹಾಕುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ಜಿಲ್ಲಾ ಸರ್ಜನ್ ನಾಗೇಂದ್ರಪ್ಪ ಅವರೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಆಸ್ಪತ್ರೆಯ ಕಟ್ಟಡ ಹಾಗೂ ವಾರ್ಡ್‌ಗಳಲ್ಲಿ ಎಲ್ಲೆಲ್ಲಿ ಪದರುಗಳು ಕಳಚಿ ಬೀಳುವಂತಹ ಸ್ಥಿತಿಯಲ್ಲಿವೆ. ಅವುಗಳನ್ನು ಗುರುತಿಸಿ ತಾತ್ಕಾಲಿಕವಾಗಿ ತೆರವುಗೊಳಿಸಲು ಸಂಬಂಧಪಟ್ಟ ಇಂಜಿನಿಯರ್‌ಗೆ ಸೂಚನೆ ನೀಡಿದರು. ಹೊಸ ನಿರ್ಮಾಣಕ್ಕೆ ತಾವು ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಾಕೀತು ಮಾಡಿದರು. ಈ ವೇಳೆ ಕೆಲವು ಅಧಿಕಾರಿಗಳು ಭಾಗವಹಿಸಿದ್ದರು.

# ಮುಂದಿನ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಬಳ್ಳಾರಿಯಲ್ಲಿ

## ಹರಪನಹಳ್ಳಿ : ಸುದೀರ್ಘ 66 ವರ್ಷದ ಬಳಿಕ ಗಡಿನಾಡಿಗೆ ನುಡಿ ತೇರು ಎಳೆಯುವ ಭಾಗ್ಯ

ಹರಪನಹಳ್ಳಿ, ಡಿ. 22 - 88ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಗಡಿನಾಡು ಬಳ್ಳಾರಿಯಲ್ಲಿ ಆಯೋಜಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಅಖಂಡ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ತಿಳಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಬಳ್ಳಾರಿ, ಕೋಲಾರ, ಯಾದಗಿರಿ, ಚಿಕ್ಕಮಗಳೂರು, ದೆಹಲಿಯಲ್ಲಿ ಸಮ್ಮೇಳನ ನಡೆಸುವ ಕುರಿತು ಚರ್ಚೆಗಳು ಸಾಗಿದ್ದವು. ಆದರೆ ಅಂತಿಮವಾಗಿ ಮುಂದಿನ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡೆಸಲು ಅವಿರೋಧವಾಗಿ ತೀರ್ಮಾನಿಸಿರುವುದು ಸಂತಸ ತಂದಿದೆ ಎಂದರು.

1926 ಹಾಗೂ 1938ರಲ್ಲಿ ಬಳ್ಳಾರಿಯಲ್ಲಿ ಸಮ್ಮೇಳನ ನಡೆದಿತ್ತು. ಸ್ವಾತಂತ್ರ್ಯಾ ನಂತರ 1958ರಲ್ಲಿ ವಿ.ಕೃ.ಗೋಕಾಕ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿಯ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ ಸಮ್ಮೇಳನ ಅರ್ಥಪೂರ್ಣವಾಗಿ ನಡೆದಿತ್ತು. ಸುದೀರ್ಘ 66 ವರ್ಷಗಳ ಬಳಿಕ ಬಳ್ಳಾರಿಗೆ ಸಾಹಿತ್ಯ ಸಮ್ಮೇಳನದ ಅವಕಾಶ ದಕ್ಕಿದ್ದು, ಸಮ್ಮೇಳನ ನಡೆಸಲು ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ, ನಾಡೋಜ ಡಾ.ಮಹೇಶ ಜೋಶಿ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.



ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಮಾತನಾಡಿ, ಆಂಧ್ರ ಪ್ರದೇಶ ರಾಜ್ಯದ ಗಡಿಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದು 66 ವರ್ಷಗಳು ಸಂದಿವೆ. ಗಡಿನಾಡಿನಲ್ಲಿ ಕನ್ನಡವನ್ನು ಜಾಗೃತವಾಗಿ ಇರಿಸುವ ನಿಟ್ಟಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವುದು ಸೂಕ್ತವಾಗಿದೆ.

ಬಳ್ಳಾರಿ ನಗರವು ಸ್ವಾತಂತ್ರ್ಯ ಪೂರ್ವದಿಂದಲೂ ಜಿಲ್ಲಾ ಕೇಂದ್ರವಾಗಿರುವುದರಿಂದ ಸಮ್ಮೇಳನಕ್ಕೆ ಬರುವ ಅತಿಥಿಗಳಿಗೆ ಮತ್ತು ಪ್ರತಿನಿಧಿಗಳಿಗೆ ಊಟ ಮತ್ತು ವಸತಿ ಸೌಲಭ್ಯ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ರಾಜ್ಯದ ಎಲ್ಲಾ ಭಾಗಗಳಿಂದ ಬಳ್ಳಾರಿಗೆ ಸಂಪರ್ಕ ಕಲ್ಪಿಸುವ ಬಸ್, ರೈಲು ಮತ್ತು ವಿಮಾನಗಳ ಸೌಲಭ್ಯವಿದೆ. 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗಲು ಎಲ್ಲರ ಸಹಕಾರ ಅಗತ್ಯ ವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಂಜುನಾಥಯ್ಯ, ಹರಪನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಚ್. ಮಲ್ಲಿಕಾರ್ಜುನ, ಚಿಗಟೇರಿ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ಸಿ.ರಾಮನಗೌಡ, ತೆಲಿಗಿ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ. ಕೆ.ಎಸ್. ವೀರಭದ್ರಪ್ಪ, ಅರಸೀಕೆರೆ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ಎಂ.ಸುರೇಶ ಸೇರಿದಂತೆ ಇತರರು ಇದ್ದರು.

# ಜ. 5 ರಂದು ನಗರದಲ್ಲಿ ಅದ್ಧೂರಿ ಕನಕ ದಾಸರ ಜಯಂತ್ಯೋತ್ಸವಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ

ದಾವಣಗೆರೆ, ಡಿ. 22- ದಾವಣಗೆರೆ ಕುರುಬ ಸಮಾಜದ ವತಿಯಿಂದ ಬರುವ ಜನವರಿ 5 ರಂದು ಬೆಳಿಗ್ಗೆ 11.30 ಕ್ಕೆ ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಜಿಲ್ಲಾ ಮಟ್ಟದ 537ನೇ ಕನಕದಾಸರ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಎಸ್. ರಾಮಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಸಚಿವರಾದ ಭೈರತಿ ಸುರೇಶ್, ಸತೀಶ್ ಜಾರಕಿಹೊಳಿ, ಜಮೀರ್ ಅಹಮ್ಮದ್, ಹೆಚ್.ಸಿ. ಮಹಾದೇವಪ್ಪ ಭಾಗವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ ಆಗಮಿಸಲಿದ್ದಾರೆ.

ಸಮಾಜದ ಮಠಾಧೀಶರು ಸಾನ್ನಿಧ್ಯ ವಹಿಸಲಿದ್ದು, ಸುಮಾರು 45 ರಿಂದ 50 ಸಾವಿರ ಜನ ಸೇರುವ ನಿರೀಕ್ಷೆ ಇದೆ. ಪಕ್ಷಾತೀತವಾಗಿ ಈ ಕಾರ್ಯಕ್ರಮ ನಡೆಯಲಿದೆ ಎಂದರು.

ಜ. 4 ರಂದು ಬೆಳಿಗ್ಗೆ 9.30 ಕ್ಕೆ ಎಸ್.ಎಸ್. ಹೈಟೆಕ್ ರಸ್ತೆಯ ಶ್ರೀ ಬೀರೇಶ್ವರ ಬಡಾವಣೆಯ ಶ್ರೀ ಕಾಳಿದಾಸ ವೃತ್ತದಿಂದ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ.

ಜ.5 ರಂದು ಬೆಳಿಗ್ಗೆ 9.30 ಕ್ಕೆ ನಗರ ದೇವತೆ ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದಿಂದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದವರೆಗೆ ಮೆರವಣಿಗೆ ಜರುಗಲಿದೆ. ವಬೆಳಿಗ್ಗೆ 11.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ನಂತರ ಶ್ರೀ ಬೀರಲಿಂಗೇಶ್ವರ ದೇವ ಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಜೆ.ಎನ್. ಶ್ರೀನಿವಾಸ್, ಹೆಚ್.ಬಿ. ಗೋಣೆಪ್ಪ, ಹೆಚ್. ಜಯಣ್ಣ, ಬಿ.ಬಿ. ಸಕ್ರಿ, ಮಲ್ಲಿಕಾ ರ್ಜುನ್, ಬಿ.ಹೆಚ್.ಪರಶುರಾಮಪ್ಪ, ಇಟ್ಟಿಗುಡಿ ಮಂಜುನಾಥ್, ಲಿಂಗರಾಜ್, ಹಾಲೇಕಲ್ಲು ಎಸ್.ಟಿ. ಅರವಿಂದ್, ಪಾಲಾಕ್ಷಪ್ಪ, ಶಿವಣ್ಣ, ಓಮಣ್ಣ, ಹಾಲೇಶಪ್ಪ, ಪುರಂದರ್ ಲೋಕಿಕೆರೆ ಮುಂತಾದವರು ಉಪಸ್ಥಿತರಿದ್ದರು.

# ಕುಟುಂಬದ ಪ್ರೀತಿ ಪರೀಕ್ಷೆಗಾಗಿ ಅಪಹರಣದ ನಾಟಕ: ಬಂಧನ

ಲಕ್ನೌ,ಡಿ. 22-, ತನ್ನ ಕುಟುಂಬದವರು ತನ್ನನ್ನು ಎಷ್ಟು ಪ್ರೀತಿಸುತ್ತಾರೆ ಎಂಬುದನ್ನು ಪತ್ತೆ ಮಾಡಲು ಅಪಹರಣದ ನಾಟಕ ನಡೆಸಿದ 22 ವರ್ಷದ ಉತ್ತರ ಪ್ರದೇಶದ ಯುವಕನೋರ್ವ ಈಗ ಪೊಲೀಸರ ಅತಿಥಿಯಾಗಿದ್ದಾನೆ.

ಡಿಸೆಂಬರ್ 20ರಂದು ಪೊಲೀಸರಿಗೆ ದೂರವಾಣಿ ಕರೆಯೊಂದು ಬಂದಿತ್ತು. ಅನುಪ್ ಪಟೇಲ್ ಎಂದು ಹೇಳಿಕೊಳ್ಳುವ ಯುವಕನೋರ್ವ, ಗೋಮತಿನಗರ ರೈಲ್ವೆ ಠಾಣೆ ಬಳಿ ತನ್ನ ಅಪಹರಣ ನಡೆದಿದೆ ಎಂದು ಹೇಳಿದ್ದ. ಆಟೋ ಚಾಲಕ ಹಾಗೂ ಆತನ ಜೊತೆಗಿದ್ದವರು ಅಪಹರಣ ನಡೆಸಿದ್ದಾರೆ ಎಂದು ಆತ ಹೇಳಿದ್ದ.

ಗೋಮತಿನಗರದ ಪೊಲೀಸರು ತಕ್ಷಣವೇ ಸ್ಥಳಕ್ಕೆ ತೆರಳಿದರು. ಪಟೇಲ್ ಮೊಬೈಲ್ ಸಂಖ್ಯೆ ಗುರುತಿಸಿ ಆತನನ್ನು ಪತ್ತೆ ಮಾಡಲಾಯಿತು.

ಆದರೆ ಪಟೇಲ್ ಅಲ್ಲಿ ಚಿಂತೆ ಇಲ್ಲದೆ ಕುಳಿತಿದ್ದ. ಪೊಲೀಸರು ವಿಚಾರಣೆ ನಡೆಸಿದಾಗ ಅಪಹರಣ ಎಂದು ಸುಳ್ಳು ಹೇಳಿದ್ದು ಪತ್ತೆಯಾಯಿತು.

ಆತ ರೈಲ್ವೆ ಟೆಕ್ನಿಷಿಯನ್ ಪರೀಕ್ಷೆಗಾಗಿ ಲಕ್ನೌದಿಂದ ಖುಷಿ ನಗರಕ್ಕೆ ಬಂದಿದ್ದ. ಗೋಮತಿ ನಗರದಲ್ಲಿದ್ದಾಗ ನನ್ನ ಮೇಲೆ ಕುಟುಂಬದವರಿಗೆ ಎಷ್ಟು ಪ್ರೀತಿ ಇದೆ ಎಂಬುದನ್ನು ತಿಳಿಯಲು ಅಪಹರಣದ ನಾಟಕ ನಡೆಸಿದ.

ಆದರೆ ಆತನ ಈ ಕೃತ್ಯ ಕಾನೂನು ಉಲ್ಲಂಘನೆಯಾಗಿದೆ ಎಂದಿರುವ ಪೊಲೀಸರು, ಯುವಕನನ್ನು ಬಂಧಿಸಿದ್ದಾರೆ. ಕಾನೂನು ಪ್ರಕಾರ ಮುಂದಿನ ಕ್ರಮ ತೆಗೆದುಕೊಂಡಿದ್ದಾರೆ.

# ಶ್ಯಾಬನೂರಿನಲ್ಲಿ ಆಂಜನೇಯ ಸ್ವಾಮಿ ಕಾರ್ತಿಕ, ಸಾಮೂಹಿಕ ವಿವಾಹ



ದಾವಣಗೆರೆ, ಡಿ.22- ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕ ದೀಪೋತ್ಸವದ ಪ್ರಯುಕ್ತ ನಿನ್ನೆ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ ನೂತನ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾಮೂಹಿಕ ವಿವಾಹ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

# ಹದಡಿಯಲ್ಲಿ ಇಂದು ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವವು ಇಂದು ರಾತ್ರಿ ಜರುಗಲಿದೆ. ಬೆಳಿಗ್ಗೆ 8.30 ರಿಂದ 10.30 ರವರೆಗೆ ಜವಳ ಕಾರ್ಯಕ್ರಮ ನಡೆಯಲಿದೆ.

ನಾಳೆ ಮಂಗಳವಾರ ಬೆಳಿಗ್ಗೆ 8.30 ಕ್ಕೆ ಕೆಂಡದ ಗದ್ದಿಗೆಗೆ ಪೂಜೆ ನಡೆಯಲಿದೆ. ನಂತರ ಮುಳ್ಳು ಗದ್ದಿಗೆಯಿಂದ ಬೀರದೇವರು ಮೆರವಣಿಗೆ ಮೂಲಕ ಕೆಂಡದ ಗದ್ದುಗೆಗೆ ತೆರಳಿ ಸಂಜೆ 5.30 ಕ್ಕೆ ಕೆಂಡದಾರ್ಚನೆ ನಡೆಯಲಿದೆ. ಮುಳ್ಳು ಗದ್ದುಗೆಯ ಮೇಲೆ ಸ್ವಾಮಿಯ ಪ್ರದರ್ಶನವಾಗುವುದು.

# ನಗರದಲ್ಲಿ ಇಂದಿನಿಂದ ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 29ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಶ್ರೀ ವೇಮನಾನಂದ ಸ್ವಾಮೀಜಿ ಜನ್ಮದಿನ



ಮಲೇಬೆನ್ನೂರು, ಡಿ. 22 - ವೇಮನಾನಂದ ಶ್ರೀಗಳು ಸರಳತೆ, ಮುಂದಾಲೋಚನೆ, ಮಾತೃತ್ವ ಭಾವನೆ ಹೊಂದಿರುವಂತಹ ಸೌಮ್ಯ ಸ್ವಭಾವದ ಗುರುಗಳಾಗಿದ್ದಾರೆ ಎಂದು ಯಲವಟ್ಟಿ ಸಿದ್ದಾಶ್ರಮದ ಯೋಗಾನಂದ ಶ್ರೀಗಳು ಅಭಿಪ್ರಾಯಪಟ್ಟರು.

ಅವರು ಸಮೀಪದ ಎರೆಹೊಸಳ್ಳಿಯ ಮಹಾಯೋಗಿ ವೇಮನ ಸಂಸ್ಥಾನ ಮಠದಲ್ಲಿ ಏರ್ಪಡಿಸಿದ್ದ ಶ್ರೀ ವೇಮನಾನಂದ ಸ್ವಾಮೀಜಿಯವರ 47ನೇ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತಾ, ಮಠದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ಮಕ್ಕಳಿಗೆ ಜ್ಞಾನ ದಾಸೋಹ, ಅನ್ನ ದಾಸೋಹ ಮತ್ತು ವಸತಿ ಸೌಕರ್ಯವನ್ನು ಸುಮಾರು 10 ವರ್ಷಗಳಿಂದ ಸೇವೆ ಮಾಡುತ್ತಿರುವುದು ಸಾಮಾನ್ಯವಾದುದಲ್ಲ ಎಂದರಲ್ಲದೇ ಶ್ರೀಗಳವರ ಜನ್ಮದಿನದ ಪ್ರಯುಕ್ತ ಸಾಮಾಜಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು.

ಶ್ರೀಗಳವರ ಜನ್ಮ ದಿನದ ಪ್ರಯುಕ್ತ ಮಠದ ಶ್ರೀಗಳಾದ ಡಾ. ಬಸವಕುಮಾರ ಸ್ವಾಮೀಜಿಗಳ ನೇತೃತ್ವದಲ್ಲಿ ದಾವಣಗೆರೆಯ ಪ್ರೀತಿ ಆರ್ಕೆ ಟ್ರಸ್ಟ್ ಹಾಗೂ ಜಿಲ್ಲಾ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ಶಿಬಿರ ಮತ್ತು ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಗಂಗಾಪುರದ ಶ್ರೀಗಳಾದ ಮರುಳಶಂಕರ ಸ್ವಾಮೀಜಿ, ಪ್ರೀತಿ ಆರ್ಕೆ ಟ್ರಸ್ಟ್‌ನ ಕಾರ್ಯದರ್ಶಿ ಡಾ. ಟಿ.ಜೆ. ರವಿಕುಮಾರ್ ಮತ್ತು ಸಿಬ್ಬಂದಿಗಳು, ಹೇಮ ವೇಮ ಸದ್ಬೋದನಾ ವಿದ್ಯಾಪೀಠದ ಆಡಳಿತಾಧಿಕಾರಿ ಹೆಚ್.ಪಿ. ಸುಭಾಶ್, ಪಿ.ಯು. ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ಕುಂಜುರಾಣಿ, ಸಿಬ್ಬಂದಿ ಅಜುರುದ್ಧೀನ್, ಶಿವಕುಮಾರ್, ಸ್ವಾಮಿ, ಗಂಗಾಧರ್, ಹನುಮಂತ ರೆಡ್ಡಿ, ಕಾರ್ತಿಕ್ ಹಾಗೂ ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಶ್ರೀ ಮಾರ್ಕಂಡೇಶ್ವರ ಸ್ವಾಮಿಯ ಕಾರ್ತಿಕ ದೀಪೋತ್ಸವ

ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ವತಿಯಿಂದ ಇಂದು ಬೆಳಿಗ್ಗೆ 6.30 ಕ್ಕೆ ಏಕದಶ ರುದ್ರಾಭಿಷೇಕ ಹಾಗೂ ಪಂಚಾಮೃತ ಅಭಿಷೇಕ, ಸಂಜೆ 5.30 ಕ್ಕೆ ಏಕದಶ ರುದ್ರಾಭಿಷೇಕ ಹಾಗೂ ಪಂಚಾಮೃತ ಅಭಿಷೇಕ, ಮಹಾಪೂಜೆ ಮುಗಿದ ನಂತರ ರಾತ್ರಿ 7 ಗಂಟೆಗೆ ಕುಲದೇವರಾದ ಮಾರ್ಕಂಡೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಎಸ್.ಟಿ.ಪಿ. ತಿಪ್ಪೇಶ್ ತಿಳಿಸಿದ್ದಾರೆ.

# ಬಾಹ್ಯಾಕಾಶದಲ್ಲಿ ಬೆಳೆಗಾಗಿ ಇಸ್ರೋ ಪ್ರಯೋಗ

ನವದೆಹಲಿ,ಡಿ. 22- ಬಾಹ್ಯಾಕಾಶದಲ್ಲಿ ಬೀಜಗಳು ಕುಡಿ ಒಡೆಯಲು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಪ್ರಯೋಗ ನಡೆಸಲಿದೆ. ಇಸ್ರೋದ ಪಿಎಸ್‌ಎ ಲ್‌ವಿ ರಾಕೆಟ್ ಮೂಲಕ ಈ ಪ್ರಯೋಗ ಮಾಡಲಾಗುವುದು.

ವರ್ಷಾಂತ್ಯದಲ್ಲಿ ಪಿಎಸ್‌ಎಲ್‌ವಿ - ಸಿ 60 ಉಡಾ ವಣೆ ನಡೆಸಲಾಗುವುದು. ಇದರ ಮೂಲಕ ಚೇಜರ್ ಹಾಗೂ ಟಾರ್ಗೆಟ್ ಎಂಬ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗುವುದು. ಭಾರತೀಯ ಬಾಹ್ಯಾಕಾಶ ಕೇಂದ್ರ ಸ್ಥಾಪನೆಗೆ ಈ ಉಡಾವಣೆ ಮಹತ್ವದ್ದಾಗಿದೆ.

ಈ ಉಡಾವಣೆ ವೇಳೆ ಪಿಎಸ್‌ಎಲ್‌ವಿ ಆರ್ಬಿಟಲ್ ಎಕ್ಸ್‌ಪಿರಿಮೆಂಟಲ್ ಮೊಡ್ಯೂಲ್ 24 ಉಪಕರಣಗಳನ್ನು ಸಾಗಿಸಲಿದೆ. ಇವುಗಳಲ್ಲಿ 14 ಇಸ್ರೋ ಪ್ರಯೋಗಾಲಯಕ್ಕೆ ಸೇರಿದವು ಹಾಗೂ ಉಳಿದ 10 ಖಾಸಗಿ ವಿಶ್ವವಿದ್ಯಾಲಯ ಹಾಗೂ ನವೋದ್ಯಮಗಳಿಗೆ ಸಂಬಂಧಿಸಿದವು.

ಈ ರಾಕೆಟ್‌ನ ನಾಲ್ಕನೇ ಹಂತ ಬಾಹ್ಯಾಕಾಶದಲ್ಲೇ ಉಳಿಯಲಿದೆ. ಇದನ್ನು ಬಳಸಿಕೊಂಡು ಬಾಹ್ಯಾಕಾಶದಲ್ಲಿ ಬೀಜಗಳು ಕುಡಿ ಒಡೆಯುವ ಸಾಧ್ಯತೆ ಬಗ್ಗೆ ಪ್ರಯೋಗ ನಡೆಸಲಾಗುವುದು. ಇದೇ ವೇಳೆ ಇತರೆ ಸಮಾನಾಂತರ ಪ್ರಯೋಗಗಳು ನಡೆಯಲಿವೆ. ಬಾಹ್ಯಾಕಾಶದ ಅವಶೇಷಗಳನ್ನು ಹಿಡಿಯುವ ರೋಬೋಟ್ ಪ್ರಯೋಗ ಸಹ ನಡೆಸಲಾಗುವುದು.

# ನೈಜೀರಿಯಾದಲ್ಲಿ ಕ್ರಿಸ್‌ಮಸ್ ಕೊಡುಗೆ ಪಡೆಯಲು ನೂಕು ನುಗ್ಗಲು : 32 ಸಾವು

ಅಬುಜ, ಡಿ. 22- ನೈಜೀರಿಯಾದಲ್ಲಿ ನಡೆದ ಎರಡು ಕ್ರಿಸ್ಮಸ್ ಆಹಾರ ವಸ್ತು ವಿತರಣೆ ಸಂಬಂಧದ ಘಟನೆಗಳಲ್ಲಿ 32 ಜನ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕ್ರಿಸ್ಮಸ್ ಹಿನ್ನೆಲೆಯಲ್ಲಿ ಆಹಾರ ವಸ್ತುಗಳನ್ನು ಪಡೆಯಲು ಜನರು ನೂಕುನುಗ್ಗಲು ನಡೆಸಿದಾಗ ಈ ಅವಘಡಗಳು ಸಂಭವಿಸಿವೆ. ನೈಜೀರಿಯಾದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟಿನ ಸಮಸ್ಯೆ ಇದೆ.

ಒಕಿಜಾ ಎಂಬ ನಗರದಲ್ಲಿ ಶನಿವಾರ ಆಹಾರ ವಿತರಣೆ ವೇಳೆ ಕಾಲ್ತುಳಿತ ಸಂಭವಿಸಿ 22 ಜನ ಸಾವನ್ನಪ್ಪಿದ್ದಾರೆ. ರಾಜಧಾನಿ ಅಬುಜದಲ್ಲಿ ಇದೇ ರೀತಿಯ ಘಟನೆ ನಡೆದು ಹತ್ತು ಜನ ಸಾವನಪ್ಪಿದ್ದಾರೆ.

ಕೆಲ ದಿನಗಳ ಹಿಂದಷ್ಟೇ ಇದೇ ರೀತಿಯ ನೂಕುನುಗ್ಗಲು ಉಂಟಾಗಿ ಹಲವು ಮಕ್ಕಳು ಸಾವನ್ನಪ್ಪಿದ್ದರು.

ನೈಜೀರಿಯಾ ಆಫ್ರಿಕಾದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿದೆ. ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಉಲ್ಬಣಿಸಿ ದೈನಂದಿನ ಜೀವನ ಕಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಹಲವಾರು ಸಂಘಟನೆಗಳು ಹಾಗೂ ವ್ಯಕ್ತಿಗಳು ನೆರವು ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ.

ಅಬುಜದಲ್ಲಿ ಕೆಲ ಹಿರಿಯರು ರಾತ್ರಿಯಿಂದಲೇ ಆಹಾರಕ್ಕಾಗಿ ಸರದಿಯಲ್ಲಿ ಕಾಯುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಅಮಿತ್ ಷಾ ವಿರುದ್ಧ ಪ್ರತಿಭಟನೆ

ದಾವಣಗೆರೆ, ಡಿ.22- ಬಾಬಾ ಸಾಹೇಬ್ ಅಂಬೇಡ್ಕರ್‌ವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಸಚಿವ ಸಂಪುಟದಿಂದ ತೆಗೆದು ಹಾಕಬೇಕು ಮತ್ತು ಅವರು ಬಹಿರಂಗವಾಗಿ ಕ್ಷಮೆಯಾಚಿಸುವಂತೆ ಆಗ್ರಹಿಸಿ, ಡಿ.23ರ ಬೆಳಗ್ಗೆ 10.30ಕ್ಕೆ ಸಂವಿಧಾನ ರಕ್ಷಣಾ ವೇದಿಕೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಿದೆ.

ಅಂದು ಅಂಬೇಡ್ಕರ್ ವೃತ್ತದಲ್ಲಿನ ಸಂವಿಧಾನ ಶಿಲ್ಪಿಯ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಬಳಿಕ, ಪ್ರತಿಭಟನಾ ಮೆರವಣಿಗೆಯು ಜಯದೇವ ವೃತ್ತ ಹಾಗೂ ಗಾಂಧಿ ವೃತ್ತದ ಮುಖೇನ ಮಹಾನಗರ ಪಾಲಿಕೆ ತಲುಪಲಿದೆ, ಅಲ್ಲಿಂದ ಪುನಃ ಅಂಬೇಡ್ಕರ್ ವೃತ್ತಕ್ಕೆ ಮರಳಿ, ಸಭಾ ಕಾರ್ಯಕ್ರಮ ನಡೆಸಲಿದ್ದೇವೆ ಎಂದು ವೇದಿಕೆಯ ಸಂಚಾಲಕ ರವಿ ನಾರಾಯಣ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಅಮಿತ್-ಷಾ ನೀಡಿದ ಅಂಬೇಡ್ಕರ್ ಕುರಿತಾದ ಹೇಳಿಕೆ, ಅವರ ಅಂತರಾಳದಲ್ಲಿನ ಅಂಬೇಡ್ಕರ್ ಮೇಲಿನ ದ್ವೇಷ ಭಾವನೆಯನ್ನು ಎತ್ತಿ ತೋರಿಸುತ್ತಿದೆ ಎಂದು ದೂರಿದರು.

ಅಂಬೇಡ್ಕರ್ ಅವರನ್ನು ಶೋಷಿತ ಸಮುದಾಯಗಳು ದೇವರ ರೀತಿಯಲ್ಲಿ ಪೂಜಿಸುತ್ತಿದ್ದು, ಗೃಹ ಸಚಿವರ ಹೇಳಿಕೆಯಿಂದ ಈ ಸಮುದಾಯಗಳ ಪೂಜ್ಯ ಭಾವನೆಗೆ ಧಕ್ಕೆಯಾಗಿದೆ. ಹಾಗಾಗಿ ಅಮಿತ್ ಷಾ ಅವರನ್ನು, ಕೇಂದ್ರ ಸಚಿವ ಸಂಪುಟದಿಂದ ಪದಚ್ಯುತಿಗೊಳಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ವೇದಿಕೆಯ ಸಂಚಾಲಕರಾದ ಎನ್. ರುದ್ರಮುನಿ, ಬಿ.ಎಂ. ಹನುಮಂತಪ್ಪ, ಅನಿಸ್ ಪಾಷಾ, ಶೇಖರಪ್ಪ, ಅಬ್ದುಲ್, ನಾಗಭೂಷಣ್, ಬಿ. ವೀರಣ್ಣ, ಹೆಗ್ಗೆರೆ ರಂಗಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

# ಉತ್ತರ ಪ್ರದೇಶದ ದಟ್ಟ ಅರಣ್ಯದಲ್ಲಿ ಅತಂತ್ರರಾದ ನೂರಕ್ಕೂ ಹೆಚ್ಚು ಮಕ್ಕಳು

ಬಹರೇಚ್, ಡಿ. 22- ಪ್ರವಾಸಕ್ಕೆ ತೆರಳಿದ್ದ ಉತ್ತರ ಪ್ರದೇಶದ ಶಾಲಾ ಮಕ್ಕಳು ಕರ್ತರ್ನಿಯಾಘಾಟ್ ಎಂಬಲ್ಲಿನ ದಟ್ಟ ಅರಣ್ಯ ಪ್ರದೇಶದಲ್ಲಿ ಸಿಲುಕಿದ ಘಟನೆ ನಡೆದಿದೆ.

14 ರಿಂದ 18 ವರ್ಷದ ಮಕ್ಕಳು ಆಹಾರ, ನೀರು ಹಾಗೂ ಸೂಕ್ತ ಬಟ್ಟೆಗಳಿಲ್ಲದೆ ಅರಣ್ಯದ ಚಳಿ ಪ್ರದೇಶದಲ್ಲಿ ಬಳಲಿದ್ದಾರೆ. ಸುರಕ್ಷಿತ ಸ್ಥಳದಲ್ಲಿ ಉಳಿದುಕೊಳ್ಳಿ ಎಂದು ಸ್ಥಳೀಯರು ಹೇಳಿದ್ದನ್ನು ಲೆಕ್ಕಿಸದ ಶಾಲೆಯ ಅಧಿಕಾರಿಗಳು ಮಕ್ಕಳ ಸಂಕಷ್ಟಕ್ಕೆ ಕಾರಣರಾಗಿದ್ದಾರೆ.

ಪ್ರವಾಸಕ್ಕೆ 155 ಜನ ತೆರಳಿದ್ದರು, ಇವರ ಪೈಕಿ 130 ಮಕ್ಕಳಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧನೇಪುರದ ನ್ಯೂ ಸ್ಟ್ಯಾಂಡರ್ಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ವತಿಯಿಂದ ಗೊಂಡ ಜಿಲ್ಲೆಯ ಶಾಲಾ ಮಕ್ಕಳಿಗಾಗಿ ಅಧ್ಯಯನ ಪ್ರವಾಸ ಆಯೋಜಿಸಲಾಗಿತ್ತು.

ಇವರನ್ನು ಒಳಗೊಂಡ ಬಸ್ಸುಗಳು ರೂಪೈಡಿಹ ಗಡಿ ಮೂಲಕ ನೇಪಾಳಕ್ಕೆ ತೆರಳಲು ಮುಂದಾಗಿದ್ದವು. ಆದರೆ ಗಡಿ ನಿರ್ಬಂಧಗಳ ಕಾರಣದಿಂದ ಅವಕಾಶ ದೊರೆಯಲಿಲ್ಲ. ಆಗ ಪ್ರವಾಸದ ಆಯೋಜಕರು ದಟ್ಟ ಅರಣ್ಯ ಇರುವ ಕರ್ತರ್ನಿಯಾಘಾಟ್ ವನ್ಯಜೀವಿ ಅಭಯಾರಣ್ಯದ ಕಡೆ ತೆರಳಲು ನಿರ್ಧರಿಸಿದರು.

ಅರಣ್ಯದ ಕಡೆ ತೆರಳದಂತೆ ಸ್ಥಳೀಯರು ಹಾಗೂ ಅಧಿಕಾರಿಗಳು ತಿಳಿಸಿದರು. ಆದರೂ ಮಕ್ಕಳನ್ನು ಕರೆದುಕೊಂಡು ಅಲ್ಲಿಯೇ ತೆರಳಲಾಯಿತು. ಆನಂತರ ಮತ್ತೆ ನೇಪಾಳದ ಕಡೆ ತೆರಳುವ ಮತ್ತೊಂದು ವಿಫಲ ಪ್ರಯತ್ನ ನಡೆಸಲಾಯಿತು.

ಅಂತಿಮವಾಗಿ ಪ್ರವಾಸದ ಆಯೋಜಕರು ಮಕ್ಕಳನ್ನು ಬಿಚ್ಚಿಯಾ ರೈಲ್ವೆ ನಿಲ್ದಾಣಕ್ಕೆ ಕರೆ ತಂದರು. ಇದು ದಟ್ಟ ಅರಣ್ಯದ ಮಧ್ಯಭಾಗದಲ್ಲಿತ್ತು. ಆ ವೇಳೆಗೆ ತಾಪಮಾನ ತೀವ್ರವಾಗಿ ಕುಸಿಯಿತು.

ಮಕ್ಕಳು ಗುಂಪುಗಟ್ಟಿ ಚಳಿಯಿಂದ ಬಚಾವಾಗುವ ಪ್ರಯತ್ನ ನಡೆಸಿದರು.

ಮಕ್ಕಳ ಈ ಪರಿಸ್ಥಿತಿ ಕುರಿತು ಮಾಹಿತಿ ಪಡೆದ ಜಿಲ್ಲಾಧಿಕಾರಿ ಮೋನಿಕಾ ರಾಣಿ, ಅಧಿಕಾರಿಗಳು ನೆರವಾಗಬೇಕೆಂದು ಸೂಚನೆ ನೀಡಿದರು. ಆಗ ಸ್ಥಳಕ್ಕೆ ತೆರಳಿದ ಪೊಲೀಸರು ಹಾಗೂ ಅರಣ್ಯಾಧಿಕಾರಿಗಳು ಮಕ್ಕಳಿಗೆ ಆಹಾರದ ವ್ಯವಸ್ಥೆ ಮಾಡಿದರು. ಕಟ್ಟಿಗೆ ರಾಶಿಯಿಂದ ಬೆಂಕಿ ಹಚ್ಚಿ ಮಕ್ಕಳಿಗೆ ರಕ್ಷಣೆ ನೀಡಿದರು. ನಂತರ ಮಕ್ಕಳು ಹಾಗೂ ಸಿಬ್ಬಂದಿಯನ್ನು ಮಧ್ಯರಾತ್ರಿ ವೇಳೆ ಗೊಂಡಗೆ ಕರೆತರಲಾಯಿತು. ಆಗ ಮಧ್ಯರಾತ್ರಿ ವೇಳೆ ಮಕ್ಕಳ ಸಂಕಷ್ಟ ಅಂತ್ಯವಾಯಿತು.

# ಕನ್ನಡ ಸಾಹಿತ್ಯ ಸಮ್ಮೇಳನ ಶೀಘ್ರ ನಡೆಸಲಿ



(1ನೇ ಪುಟದಿಂದ) ತಡೆಯಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರ್ಕಾರ ಸಮರ್ಪಕವಾಗಿ ಎದುರಿಸಬೇಕು. ಸರೋಜಿನಿ ಮಹಿಷಿ ವರದಿಯನ್ನು ಶಾಸನಬದ್ಧ ಗೊಳಿಸಿ ಅನುಷ್ಠಾನಗೊಳಿಸಬೇಕು.

❒ ದಾವಣಗೆರೆಯಲ್ಲಿ ನಡೆಯಬೇ ಕಿರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ವನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಅತಿ ಶೀಘ್ರದಲ್ಲಿ ನಡೆಸಬೇಕು.

❒ ಕರ್ನಾಟಕ ಸರ್ಕಾರವು ರಾಷ್ಟ್ರಕವಿಯನ್ನು ಅತಿ ಶೀಘ್ರದಲ್ಲಿ ಘೋಷಿಸಬೇಕು.

❒ ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಗೊಳಿಸಲು ಕಾರಣರಾದ ಸ್ವಾಗತ ಸಮಿತಿಯ ಅಧ್ಯಕ್ಷರಾದಿಯಾಗಿ ಎಲ್ಲ ಸದಸ್ಯರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯ ಸಮಿತಿಯ ಸರ್ವ ಸದಸ್ಯರು ವೇದಿಕೆಯ ಮೇಲಿದ್ದು, ಸರ್ವ ಕನ್ನಡಿಗರ ಸಹ ಮತದೊಂದಿಗೆ ಅವರು ಸಹ ಒಪ್ಪಿಗೆಯ ಧ್ವನಿಗೂಡಿಸಿದರು ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ತಿಳಿಸಿದ್ದಾರೆ.

ಆರು ನಿರ್ಣಯಗಳಲ್ಲಿ ದಾವಣಗೆರೆಯಲ್ಲಿ ರಾಜ್ಯ ಸರ್ಕಾರ ನಡೆಸಲುದ್ದೇಶಿಸಿರುವ ವಿಶ್ವ ಕನ್ನಡ ಸಮ್ಮೇಳನವನ್ನು ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಅತಿ ಶೀಘ್ರದಲ್ಲಿ ನಡೆಸುವಂತೆ ಸರ್ಕಾರದ ಮೇಲೆ ಒತ್ತಡ ತರಲು ನಿರ್ಣಯವನ್ನು ಕೈಗೊಳ್ಳಲಾಗಿದೆ.

ಈ ನಿರ್ಣಯವನ್ನು ಕೈಗೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರಿಗೂ, ಕಾರ್ಯಕಾರಿ ಸಮಿತಿ ಎಲ್ಲಾ ಸದಸ್ಯರಿಗೂ.. ಒಪ್ಪಿಗೆಯನ್ನು ಸೂಚಿಸಿದ ಸರ್ವರಿಗೂ ಕಸಾಪ ದಾವಣಗೆರೆ ಜಿಲ್ಲಾಧ್ಯಕ್ಷ ವಾಮದೇವಪ್ಪ ಧನ್ಯವಾದ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಮಾಚಿದೇವ ಕಾರ್ತಿಕ

ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘ, ಮಡಿಕಟ್ಟೆ ಸಮಿತಿ ಹಾಗೂ ಮಾಚಿದೇವ ಮಹಿಳಾ ಸಂಘದಿಂದ ಇಂದು ಸಂಜೆ 6.30ಕ್ಕೆ ಮಡಿವಾಳ ಮಾಚಿದೇವ ಸ್ವಾಮಿ ಕಾರ್ತಿಕೋತ್ಸವ ನಡೆಯಲಿದೆ.

ANVAYA
ಅನ್ವಯ ಆಯುರ್ವೇದ ಮತ್ತು ಪಂಚಕರ್ಮ ತರಬೇತಿ ಸಂಸ್ಥೆ
#1288, ಹಂಜಿ ನಿಲಯ, 8ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.
ಎಸ್.ಟಿ.ಇ.ಡಿ-ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಪ್ರಮಾಣಿಕೃತಗೊಂಡಿದೆ
2025-26ರ ಶೈಕ್ಷಣಿಕ ವರ್ಷದ ಪ್ರವೇಶಾತಿ ಪ್ರಾರಂಭ
ಕೋರ್ಸ್‌ಗಳ ವಿವರ :
✦ ಪಂಚಕರ್ಮ ಮತ್ತು ಮಸಾಜ್ ಥೆರಪಿಯಲ್ಲಿ ಡಿಪ್ಲೋಮಾ.
✦ ಆಯುರ್ವೇದ, ಪಂಚಕರ್ಮ ಮತ್ತು ನರ್ಸಿಂಗ್‌ನಲ್ಲಿ ವೃತ್ತಿಪರ ಡಿಪ್ಲೋಮಾ.
✦ ಆಯುರ್ವೇದ ಫಾರ್ಮಸಿಯಲ್ಲಿ ಸುಧಾರಿತ ಡಿಪ್ಲೋಮಾ.
✦ ಆಯುರ್ವೇದ ಸಾಮಾನ್ಯ ಔಷಧಿಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ.
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿ.ಯು.ಸಿ., ಬಿ.ಎ.ಎಮ್.ಎಸ್.
ಅವಧಿ : 6 ತಿಂಗಳು / 1 ವರ್ಷ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
☎ : 08192-452312, 63643 21664

# ಡಿಹೆಚ್‌ಯುಎಸ್ ಎಂಪ್ಲಾಯೀಸ್ ಯೂನಿಯನ್ ನೇತೃತ್ವದಲ್ಲಿ ಕ್ರಿಕೆಟ್ ಪಂದ್ಯಾವಳಿ

## ದಾವಣಗೆರೆ ಅರ್ಬನ್ ಬ್ಯಾಂಕ್ ಪ್ರಥಮ, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ದ್ವಿತೀಯ, ಬಾಪೂಜಿ ಸಹಕಾರಿ ಬ್ಯಾಂಕ್ ತೃತೀಯ


ಪ್ರಥಮ ಸ್ಥಾನ ಪಡೆದ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್


ದ್ವಿತೀಯ ಸ್ಥಾನ ಪಡೆದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್


ತೃತೀಯ ಸ್ಥಾನ ಪಡೆದ ಬಾಪೂಜಿ ಸಹಕಾರಿ ಬ್ಯಾಂಕ್

ದಾವಣಗೆರೆ, ಡಿ. 22- ಇಂದಿಲ್ಲಿ ಮುಕ್ತಾಯಗೊಂಡ ಸ್ಥಳೀಯ ಸಹಕಾರ ಬ್ಯಾಂಕುಗಳ, ಉದ್ಯೋಗಿಗಳ ಸಹಕಾರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ತಂಡ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಪಂದ್ಯಾವಳಿಯ ಆಯೋಜಕರಾಗಿದ್ದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ತಂಡವು ದ್ವಿತೀಯ ಸ್ಥಾನ ಗಳಿಸಿದರೆ, ಬಾಪೂಜಿ ಸಹಕಾರ ಬ್ಯಾಂಕಿನ ತಂಡ ತೃತೀಯ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ತೃಪ್ತಿಪಟ್ಟುಕೊಂಡಿತು.

ದಾವಣಗೆರೆ ಅರ್ಬನ್ ಬ್ಯಾಂಕ್, ಶ್ರೀ ಕನ್ನಕಾ ಪರಮೇಶ್ವರಿ ಬ್ಯಾಂಕ್, ದಾವಣಗೆರೆ -ಹರಿಹರ ಅರ್ಬನ್ ಬ್ಯಾಂಕ್ ಮತ್ತು ಬಾಪೂಜಿ ಬ್ಯಾಂಕುಗಳ ತಂಡಗಳು ಸೆಮಿಫೈನಲ್ ತಲುಪಿದಾಗ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಮತ್ತು ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ತಂಡಗಳು ಅಂತಿಮ ಪಂದ್ಯಕ್ಕೆ ಅಣಿಯಾದವು.

ಈ ಎರಡೂ ತಂಡಗಳ ನಡುವೆ ನಡೆದ ಪಂದ್ಯವು ಅತ್ಯಂತ ರೋಚಕತೆಯಲ್ಲಿ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಅಂತಿಮ ಪಂದ್ಯದಲ್ಲಿ ದಾವಣಗೆರೆ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್ ತಂಡ ಗೆದ್ದು, ಪ್ರಥಮ ಸ್ಥಾನದೊಂದಿಗೆ ಕಪ್ ಅನ್ನು ತನ್ನದಾಗಿಸಿಕೊಂಡಿತು.

ಹತ್ತು ಸಾವಿರ ರೂ. ನಗದು ಹಣದ ಜೊತೆಗೆ, ಆಕರ್ಷಕ ಟ್ರೋಫಿಯನ್ನು ಈ ತಂಡ ಪಡೆಯಿತು.

ರನ್ನರ್ ಅಪ್ ತಂಡ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ದ್ವಿತೀಯ ಸ್ಥಾನದೊಂದಿಗೆ 7,500 ರೂ. ನಗದು ಮತ್ತು ಆಕರ್ಷಕ ಟ್ರೋಫಿ ಗಳಿಸಿತು.

ಅದೇ ರೀತಿ ತೃತೀಯ ಸ್ಥಾನ ಪಡೆದ ಬಾಪೂಜಿ ಸಹಕಾರಿ ಬ್ಯಾಂಕ್ ತಂಡ 5 ಸಾವಿರ ರೂ. ನಗದು ಹಣದೊಂದಿಗೆ ಆಕರ್ಷಕ ಟ್ರೋಫಿ ಪಡೆಯಿತು.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ತಂಡದ ಮಹೇಶ್ ಉತ್ತಮ ಬೌಲರ್ ಆಗಿ, ವಿಶ್ವನಾಥ್ ಉತ್ತಮ ಬ್ಯಾಟ್ಸ್‌ಮನ್ ಆಗಿ, ಟಿ.ಆರ್. ರುದ್ರೇಶ್ ಮತ್ತು ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಲೋಕೇಶ್ ಉತ್ತಮ ಆಲ್‌ರೌಂಡರ್ ಆಗಿ ವೈಯಕ್ತಿಕ ಬಹುಮಾನಗಳನ್ನು ಪಡೆದುಕೊಂಡರು. ಸಿಕ್ಸರ್ ಬಾರಿಸಿದ ಎಲ್ಲಾ ತಂಡದ 16 ಆಟಗಾರರಿಗೆ ತಲಾ 500 ರೂ. ಬಹುಮಾನವನ್ನು ದಾವಣಗೆರೆ - ಹರಿಹರ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ವೈಯಕ್ತಿಕವಾಗಿ ನೀಡಿದರು.

**ಬಹುಮಾನ ವಿತರಣೆ :** ಪಂದ್ಯಾವಳಿಯ ನಂತರ ಏರ್ಪಾಡಾಗಿದ್ದ ಸಮಾರೋಪ ಸಮಾರಂಭದಲ್ಲಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಬಿ.ಸಿ. ಉಮಾಪತಿ, ಶ್ರೀ ಕನ್ನಕಾ ಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ವಿಕಾಸ್ ಬ್ಯಾಂಕ್‌ನ ಹಿರೇಮಠ ಅವರುಗಳು ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಮಾಡಿದರು.

ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿರ್ದೇಶಕರುಗಳಾದ ಎ.ಹೆಚ್. ಕುಬೇರಪ್ಪ, ಕಿರುವಾಡಿ ಸೋಮಶೇಖರ್, ಪ್ರಭು ಪ್ರಸಾದ್, ಬಿ. ಚಿದಾನಂದಪ್ಪ, ಕಿರಣ್, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರುಗಳಾದ ಹೆಚ್.ಎಂ. ರುದ್ರಮುನಿ ಸ್ವಾಮಿ, ಇ.ಎಂ. ಮಂಜುನಾಥ ಅವರುಗಳಲ್ಲದೇ ವಿವಿಧ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ತಮ್ಮ ಬ್ಯಾಂಕ್ 50ನೇ ವರ್ಷಾಚರಣೆಯ ಸಂಭ್ರಮದಲ್ಲಿದ್ದು, ಈ ಹಿನ್ನೆಲೆಯಲ್ಲಿ ತಮ್ಮ ಬ್ಯಾಂಕಿನ ನೌಕರರ ನೇತೃತ್ವದಲ್ಲಿ ಇದೇ ಪ್ರಪ್ರಥಮ ಬಾರಿಗೆ ಸಹಕಾರ ಬ್ಯಾಂಕಿನ ಉದ್ಯೋಗಿಗಳಿಗಾಗಿ ಈ ಪಂದ್ಯಾವಳಿಯನ್ನು ನಡೆಸಿರುವುದು ತಮಗೆ ಸಂತಸ ವನ್ನುಂಟು ಮಾಡಿದೆ. ಮುಂಬರುವ ದಿನಗಳಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪಂದ್ಯವನ್ನು ನಡೆಸುವುದಾಗಿ ತಿಳಿಸಿದರು.

ಡಿಸಿಸಿ ಬ್ಯಾಂಕಿನ ಮಂಜುನಾಥ್ ಮತ್ತು ಡಿಹೆಚ್‌ಯುಎಸ್ ಬ್ಯಾಂಕಿನ ಪಿ.ಆರ್. ಪ್ರಕಾಶ್ ಅವರು ಜಂಟಿಯಾಗಿ ಪಂದ್ಯದ ವಿಶ್ಲೇಷಣೆ ಮಾಡಿದರು. ಡಿಹೆಚ್‌ಯುಎಸ್ ಬ್ಯಾಂಕಿನ ತಾಂತ್ರಿಕ ವಿಭಾಗದ ಪಿ.ಆರ್.ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.


## ನಾಳೆ ನಗರ ದೇವತೆ ದುರ್ಗಾಂಬಿಕಾ ದೇವಿ ಕಾರ್ತಿಕ



ದಾವಣಗೆರೆ, ಡಿ. 22- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 24ರ ಮಂಗಳವಾರ ರಾತ್ರಿ 8.30 ಗಂಟೆಗೆ ನೆರವೇರಲಿದೆ. ಟ್ರಸ್ಟ್‌ನ ಗೌರವ ಅಧ್ಯಕ್ಷರೂ ಆದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಕಾರ್ಯಾಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕಾರ್ತಿಕೋತ್ಸವಕ್ಕೆ ಚಾಲನೆ ನೀಡುವರು.

ಅಂದು ಬೆಳಿಗ್ಗೆ 6 ಕ್ಕೆ ಶ್ರೀ ದುರ್ಗಾಂಬಿಕಾ ದೇವಿಗೆ ಪಂಚಾಮೃತ ಅಭಿಷೇಕ ನಂತರ ಬೆಳಿಗ್ಗೆ 9 ರಿಂದ ಹೂವಿನ ಹಾರದ ಮೆರವಣಿಗೆ ನಡೆಸಲಾಗುವುದು. ಬಾಳೆಯ ದಿಂಡಿನಿಂದ ಅಲಂಕೃತವಾದ ಕದಳಿ ಪೂಜೆಯೊಂದಿಗೆ ಈ ಸಾರಿಯ ಕಾರ್ತೀಕ ವಿಶೇಷವಾಗಿದ್ದು, ಸುಮಾರು 101 ದೀಪಗಳಿರುವ ಕಂಬಗಳಿಂದ ದೀಪೋತ್ಸವವು ಸರಳ ರೀತಿಯಲ್ಲಿ ನಡೆಯುತ್ತದೆ.

## ನಗರಕ್ಕೆ ಇಂದು ಸೋದೆ ಮಠದ ಶ್ರೀಗಳು



ಸೋದೆ ಶ್ರೀ ವಾದಿರಾಜ ಮಠದ ಶ್ರೀ ಗುರು ವಲ್ಲಭ ತೀರ್ಥ ಶ್ರೀಪಾದಂಗಳವರು ಇಂದು ನಗರಕ್ಕೆ ಸಂಜೆ 6.30 ಆಗಮಿಸಲಿದ್ದು, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಿಂದ ವಿನೋಬನಗರ 1ನೇ ಮುಖ್ಯ ರಸ್ತೆಯಲ್ಲಿರುವ ನಲ್ಲೂರು ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನಕ್ಕೆ ಮೆರವಣಿಗೆ ಮೂಲಕ ಕರೆ ತರಲಾಗುವುದು.

ನಾಳೆ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ನಲ್ಲೂರು ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನದಲ್ಲಿ ಏರ್ಪಾಡಾಗಿರುವ ಕಾರ್ಯಕ್ರಮದಲ್ಲಿ ಶ್ರೀಗಳವರ ಪಾದಪೂಜೆ, ಆಶೀರ್ವಚನ, ಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಲಿವೆ ಎಂದು ಸೋದೆ ಶ್ರೀ ಗುರು ವಾದಿರಾಜ ಮಠದ ದೈವಜ್ಞ ಬ್ರಾಹ್ಮಣರ ಶಿಷ್ಯ ವೃಂದ ತಿಳಿಸಿದೆ.

ಭಕ್ತಾದಿಗಳು, ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶಿಷ್ಯ ವೃಂದದ ನಲ್ಲೂರು ಎಸ್. ರಾಜಕುಮಾರ್ ಕೋರಿದ್ದಾರೆ.

## ನಗರದಲ್ಲಿ ಇಂದು ಕಾಯಿಪೇಟೆ ಬಸವೇಶ್ವರ ಕಾರ್ತಿಕೋತ್ಸವ, ನಾಳೆ ಮಹೇಶ್ವರ ಜಾತ್ರೆ



ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ಇಂದು ರಾತ್ರಿ 9 ಗಂಟೆಗೆ ಕಡೆ ಕಾರ್ತಿಕೋತ್ಸವ ನಡೆಯಲಿದೆ.

ನಾಳೆ ಮಂಗಳವಾರ ಮತ್ತು ನಾಡಿದ್ದು ಬುಧವಾರ ಪೂಜಾ ಇಂಟರ್‌ನ್ಯಾಷನಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿಯ ನಿವೇಶನದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಮಿತಿ ತಿಳಿಸಿದೆ.

**ವಿಶೇಷ ಸೂಚನೆ :** ಶ್ರೀ ಕರಿಯಾಂಬಿಕಾ ದೇವಿ ಭಜನಾ ಮಂಡಳಿ, ಕ್ಯಾರೆಕಟ್ಟೆ ಹರಪನಹಳ್ಳಿ ಇವರಿಂದ ಎರಡು ದಿವಸ ರಾತ್ರಿ 10 ರಿಂದ ಭಜನಾ ಕಾರ್ಯಕ್ರಮವಿರುತ್ತದೆ.

# ಜಿಲ್ಲೆಯಲ್ಲಿ ಉದ್ಯೋಗ ಆಧಾರಿತ ತರಬೇತಿ

## ಕ್ಯೂ-ಸ್ಪೈಡರ್ಸ್ ಸಿಇಓ ಗಿರೀಶ್ ರಾಮಣ್ಣ ಜೊತೆ ಸಂಸದೆ ಡಾ.ಪ್ರಭಾ ಚರ್ಚೆ



ದಾವಣಗೆರೆ, ಡಿ.22- ಜಿಲ್ಲೆಯ ವಿದ್ಯಾರ್ಥಿಗಳಿಗೆ ದಾವಣಗೆರೆಯಲ್ಲಿಯೇ ಉದ್ಯೋಗ ಆಧಾರಿತ ತರಬೇತಿ ಕೊಡಿಸುವ ಅವಶ್ಯಕತೆ ಮನಗಂಡ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಈ ಕುರಿತು ಬೆಂಗಳೂರಿನ ಕ್ಯೂ -ಸ್ಪೈಡರ್ಸ್ ಟ್ರೈನಿಂಗ್ ಮತ್ತು ಪ್ಲೇಸ್‌ಮೆಂಟ್‌ನ ಕೇಂದ್ರ ಕಚೇರಿ ಹಾಗೂ ಟೆಸ್ಟ್ ಯಂತ್ರ ಸಾಫ್ಟ್‌ವೇರ್ ಕಂಪನಿಗೆ ಭೇಟಿ ನೀಡಿ, ಕ್ಯೂ-ಸ್ಪೈಡರ್ಸ್ ಸಂಸ್ಥಾಪಕ ಹಾಗೂ ಸಿಇಓ ಗಿರೀಶ್ ರಾಮಣ್ಣನವರೊಂದಿಗೆ ಚರ್ಚಿಸಿದರು.

ಜಿಲ್ಲೆಯಿಂದ ಸಾವಿರಾರು ವಿದ್ಯಾರ್ಥಿಗಳು ಪದವಿ ಮುಗಿದ ನಂತರ ಉದ್ಯೋಗಾಧಾರಿತ ತರಬೇತಿ ಪಡೆಯಲು ಬೆಂಗಳೂರಿಗೆ ತೆರಳುತ್ತಿದ್ದು, ವಿದ್ಯಾರ್ಥಿಗಳ ತರಬೇತಿ ಶುಲ್ಕ, ಊಟ ಮತ್ತು ವಸತಿಗಳಿಗೆ ಸಾಕಷ್ಟು ಹಣ ಖರ್ಚಾಗುತ್ತಿದೆ. ಇದನ್ನು ಮನಗಂಡ ಸಂಸದರು, ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನರವರೊಂದಿಗೆ ಚರ್ಚಿಸಿ ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ ದಾವಣಗೆರೆಯಲ್ಲಿ ತರಬೇತಿ ನಡೆಸುವ ಬಗ್ಗೆ ಚಿಂತನೆ ನಡೆಸಿದ್ದರು.

ಜಿಲ್ಲಾ ಕೇಂದ್ರದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಬೇಕಾಗುವ ತರಬೇತಿ ಕೇಂದ್ರ ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಬದ್ಧರಾಗಿ ಕ್ಯೂ -ಸ್ಪೈಡರ್ಸ್‌ನ ಸಿಇಓ ಗಿರೀಶ್ ರವರೊಂದಿಗೆ ಮಾತುಕತೆ ನಡೆಸಿದರು.

ಕಂಪನಿಯ ಸಾಮಾಜಿಕ ಜವಾಬ್ದಾರಿ ಹಾಗೂ ಸಿಎಸ್ ಆರ್ ಯೋಜನೆಯಡಿಯಲ್ಲಿ ಉಚಿತವಾಗಿ ದಾವಣಗೆರೆಯಲ್ಲಿಯೇ ತರಬೇತಿ ಕೊಡಲು ಗಿರೀಶ್ ಸಮ್ಮತಿಸಿದರು.

ದಾವಣಗೆರೆ ವಿ.ವಿ. ಕುಲಪತಿ ಡಾ. ಬಿ. ಡಿ.ಕುಂಬಾರ್‌ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಸಂಸದರು, ಶೀಘ್ರದಲ್ಲೇ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ ತರಬೇತಿಯನ್ನು ಪ್ರಾರಂಭಿಸಲು ಸೂಚಿಸಿದರು.

ದಾವಣಗೆರೆಯಲ್ಲಿ ಸಾಫ್ಟವೇರ್ ಸ್ಟಾರ್ಟ್ ಅಪ್ ಮತ್ತು ಕಾರ್ಪೋರೇಟ್ ಆಫೀಸ್‌ಗಳು ಕಾರ್ಯನಿರ್ವಹಿಸುವ ಸಾಧ್ಯತೆ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು. ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಮಹಿಳೆಯರಿಗೆ ಗಾರ್ಮೆಂಟ್ಸ್ ಮತ್ತು ಇತರೆ ಉದ್ಯಮಗಳ ಬಗ್ಗೆಯೂ ಸಹ ಚರ್ಚಿಸಲಾಯಿತು.

ಈ ವೇಳೆ ದಾವಣಗೆರೆ ವಿ.ವಿ. ಸಿಂಡಿಕೇಟ್ ಸದಸ್ಯರಾದ ಡಾ.ಪ್ರಶಾಂತ್ ಎನ್.ಸಿ., ದವನ್ ಕಾಲೇಜು ಕಾರ್ಯದರ್ಶಿ ವೀರೇಶ್ ಪಟೇಲ್, ಎಲ್. ಸತೀಶ್ ಕುಮಾರ್, ಸಮರ್ಥ್ ಶಾಮನೂರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಜಿಹ್ವೇಶ್ವರ ಕಾರ್ತಿಕ



ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್) ದ ಬಳಿಯ ಸ್ವಕುಳಸಾಳಿ ಸಮಾಜದ ಶ್ರೀ ಜಿಹ್ವೇಶ್ವರ ಧ್ಯಾನ ಮಂದಿರದಲ್ಲಿ ಸ್ವಕುಳಸಾಳಿ ಸಮಾಜದ ಮಹಿಳಾ ಮಂಡಳಿ ವತಿಯಿಂದ ಇಂದು ಸಂಜೆ 5.30ಕ್ಕೆ ಶ್ರೀ ಜಿಹ್ವೇಶ್ವರ ಸ್ವಾಮಿಯ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ಮಹಿಳಾ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಸುಜಾತ ರೋಖಡೆ ತಿಳಿಸಿದ್ದಾರೆ.

## ಬ್ಯಾಡ್ಮಿಂಟನ್ : ಸಿದ್ದೇಶ್, ಡಾ. ಸಂಜೀವ್ ಪ್ರಥಮ



ದಾವಣಗೆರೆ, ಡಿ.22- ನಗರದಲ್ಲಿ ಇಂದು ಜಿಜಿಸಿಎಲ್‌ನಿಂದ ನಡೆದ 40 ವರ್ಷ ಮೇಲ್ಪಟ್ಟವರ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕೆ.ಬಿ. ಸಿದ್ದೇಶ್ ಮತ್ತು ಡಾ. ಸಂಜೀವ್ ಅವರು ಪ್ರಥಮ ಸ್ಥಾನ ಗಳಿಸಿದ್ದಾರೆ.

# ರಾಜ್ಯದ ಗಡಿಗಳತ್ತ ಗಮನ ಹರಿಸಿ

## ಕನ್ನಡಪರ ಹೋರಾಟಗಾರರಿಗೆ ಶಾಸಕ ಕೆ.ಎಸ್. ಬಸವಂತಪ್ಪ ಸಲಹೆ



ದಾವಣಗೆರೆ, ಡಿ. 22- ರಾಜ್ಯದ ಗಡಿ ಭಾಗದಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಧಕ್ಕೆಯಾಗುತ್ತಿದ್ದು, ಕನ್ನಡ ಪರ ಹೋರಾಟಗಾರರು ಗಡಿಭಾಗದಲ್ಲಿ ಹೋರಾಟ ನಡೆಸಲು ಮುಂದಾಗಬೇಕು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ನಗರದ ಶಿವಯೋಗಿ ಮಂದಿರದ ಆವರಣದಲ್ಲಿ ಶನಿವಾರ ಸಂಜೆ ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆಯಿಂದ ಹಮ್ಮಿಕೊಳ್ಳಲಾಗಿದ್ದ 3ನೇ ವರ್ಷದ ಕನ್ನಡ ಹಬ್ಬ ಹಾಗೂ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅನೇಕ ಸಾಹಿತಿಗಳು, ಕವಿಗಳು ಎಲ್ಲರನ್ನೂ ಒಳಗೊಂಡ ಸಮೃದ್ಧಿಯ ನಾಡು ಈ ಕನ್ನಡ ನಾಡು. ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವುದರಿಂದಲೇ ಈ ನಾಡು ಸಮೃದ್ಧವಾಗಿದೆ ಎಂದರು.

ಅಚ್ಚ ಕನ್ನಡ ಮಾತನಾಡುವ ಜಿಲ್ಲೆ ದಾವಣಗೆರೆ ಮಾತ್ರ. ನಾವು ಯಾರ ಭಾಷೆಗೂ ದಾಸ್ಯರಾಗಿಲ್ಲ ಎಂದು ಬಸವಂತಪ್ಪ ಹೇಳಿದರು.

ಹೊರ ದೇಶದಿಂದ ಬರುವ ಉದ್ಯಮಿಗಳು ತಮ್ಮ ಕಂಪನಿಗಳಲ್ಲಿ ಶೇ.80ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ಕೊಡಬೇಕೆಂಬ ಷರತ್ತನ್ನು ಸರ್ಕಾರ ವಿಧಿಸಬೇಕು ಎಂದು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಕನ್ನಡದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆ ಬರೆಯಿರಿ. ನಿಮ್ಮ ಆದ್ಯತೆ ಕನ್ನಡಕ್ಕೇ ಇರಲಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಕನ್ನಡ ಪ್ರೇಮ ಕೇವಲ ನವೆಂಬರ್ ತಿಂಗಳಿಗೆ ಸೀಮಿತವಾಗದೇ, ಜವಾಬ್ದಾರಿಯುತ ಕನ್ನಡಿಗರಾಗಬೇಕು. ಆಗ ಮಾತ್ರ ಕನ್ನಡ ಉಳಿದು, ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕನ್ನಡದಲ್ಲಿಯೇ ವ್ಯವಹರಿಸಬೇಕು. ಕನ್ನಡದಲ್ಲಿಯೇ ಸಹಿ ಮಾಡಬೇಕು. ಪತ್ರ ವ್ಯವಹಾರ ಕನ್ನಡದಲ್ಲಿಯೇ ಇರಬೇಕು. ನಾಡು-ನುಡಿ, ನೆಲ, ಜಲದ ಸಂರಕ್ಷಣೆಗೆ ಬದ್ಧರಾಗಿರಬೇಕು. ಈ ಜವಾಬ್ದಾರಿ ನಮಗೆಲ್ಲರಿಗೂ ಅಗತ್ಯವಿದೆ ಎಂದರು.

ಕನ್ನಡದಲ್ಲಿ ಓದಿದವರಿಗೆ ಉದ್ಯೋಗಕ್ಕೆ ಒತ್ತು ಕೊಡಬೇಕು. ಇಂಗ್ಲೀಷ್ ಕಲಿತರೆ ಮಾತ್ರ ಉದ್ಯೋಗ, ಇಂಗ್ಲೀಷ್‌ನಿಂದಲೇ ಬದುಕು ಉದ್ಧಾರ ಎಂಬ ಭ್ರಮೆ ಹಲವರಲ್ಲಿದೆ. ಅದರಿಂದ ಹೊರ ಬರಬೇಕಿದೆ ಎಂದರು.

ಪಾಲಿಕೆ ಮೇಯರ್ ಕೆ.ಚಮನ್ ಸಾಬ್, ವಾಸುದೇವ ರಾಯ್ಕರ್, ಶಿವಗಂಗಾ ಶ್ರೀನಿವಾಸ್, ಆಲೂರು ಲಿಂಗರಾಜ್, ಶಾಮನೂರು ಕಣ್ಣಾಳ್ ಅಂಜಿನಪ್ಪ, ರವೀಂದ್ರ ಬಾಬು ಕೆ.ಹೆಚ್., ರಘುನಾಥ್, ಸಂತೋಷ್ ಎಸ್., ಆನಂದ್ ಜಾಧವ್, ಲೋಕಿಕೆರೆ ನಾಗರಾಜ್, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಾಲಾ ನಾಗರಾಜ್ ಇತರರಿದ್ದರು. ಸಮಗ್ರ ಕರವೇ ಸಂಸ್ಥಾಪಕ ರಾಜ್ಯಾಧ್ಯಕ್ಷ ವಿ.ಅವಿನಾಶ್ (ಅಭಿ) ಅಧ್ಯಕ್ಷತೆ ವಹಿಸಿ, ಅತಿಥಿಗಳನ್ನು ಸ್ವಾಗತಿಸಿದರು. ಕನ್ನಡ ಪ್ರಾಧ್ಯಾಪಕ ಅಯೂಬ್ ಖಾನ್ ನಿರೂಪಿಸಿದರು.

## ನೈಸರ್ಗಿಕ ಚೆಲುವಿಗೆ ಮರಳುತ್ತಿರುವ ಕುಂದುವಾಡ ಕೆರೆ



ಕೆರೆ, ನದಿ, ತೊರೆಗಳು ನಿಸರ್ಗದತ್ತ ಜೀವಸೆಲೆಗಳು. ಅಸಂಖ್ಯಾತ ಜೀವಿಗಳು ನೀರಿನಿಂದಲೇ ಉಗಮಗೊಂಡಿವೆ. ದಾವಣಗೆರೆ ನಗರದ ಕುಂದುವಾಡ ಕೆರೆ ಒಂದು ನೈಸರ್ಗಿಕ ತಾಣವಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನಲುಗಿದ್ದ ಕೆರೆ ನಿಧಾನವಾಗಿ ಮತ್ತು ನಿರ್ದಿಷ್ಟವಾಗಿ ತನ್ನ ಗತವೈಭವಕ್ಕೆ ಮರಳುತ್ತಿದೆ. ಇಂದು ಪಕ್ಷಿ ವೀಕ್ಷಣೆಗೆ ತೆರಳಿದಾಗ ಮೂರು ವಿದೇಶಿ ಪಕ್ಷಿಗಳ ಪ್ರಭೇದಗಳು ಸೇರಿದಂತೆ 46 ಪ್ರಭೇದದ ಪಕ್ಷಿಗಳು ಜಲಕ್ರೀಡೆಯಾಡುತ್ತಿರುವುದು ಕಂಡುಬಂದಿತು. ಯೂರೋಪಿನ ನಾರ್ದರನ್ ಶೋವರ್ ಚಳಿಗಾಲದ ವಲಸೆಗಾರ ಹಕ್ಕಿಗಳು ಕಂಡು ಬಂದವು. ಕಳೆದ ನಾಲ್ಕು ವರ್ಷಗಳಲ್ಲಿ ಕುಂದುವಾಡ ಕೆರೆಯಲ್ಲಿ ಕಾಣದಿದ್ದ ಈ ಹಕ್ಕಿಗಳು ಕೇವಲ ಐದು ಈ ವರ್ಷ ಕಂಡು ಬಂದಿರುವುದು ಶುಭ ಸೂಚನೆ. ಹಾಗೆಯೇ ಬಿಳಿ ಬಾತುಗಳು 40 ರಷ್ಟಿದ್ದವು. ಒಂದೇ ಒಂದು ಗುಬುಟು ಕೊಕ್ಕಿನ ಬಾತು ಕಾಣಿಸಿದ್ದು ವಿಶೇಷವೇ ಸರಿ. ಹಾಗೆಯೇ ಮಧ್ಯದ ದ್ವೀಪದಲ್ಲಿರುವ ಮರಗಳಲ್ಲಿ ನೂರಾರು ನೀರು ಕಾಗೆಗಳು ಗೂಡು ಕಟ್ಟಿರುವುದು ಕುಂದುವಾಡ ಕೆರೆಗೆ ಮೆರಗು ತಂದಿವೆ. ಮಾನವನ ದಬ್ಬಾಳಿಕೆ ವಿರುದ್ಧ ಪ್ರಕೃತಿ ಪುಟಿದೇಳು ವುದು ಸಾಮಾನ್ಯ. ಹಾಗೆಯೇ ಕುಂದುವಾಡ ಕೆರೆ ನಿಧಾನ ವಾಗಿ ತನ್ನ ಗತವೈಭವಕ್ಕೆ ಮರಳುತ್ತಿರುವುದು ಸಮಾಧಾನ ಕರ ಸಂಗತಿ. ಅಂತಯೇ ಪ್ರಕೃತಿದತ್ತ ಕೆರೆಯನ್ನು ನೈಸರ್ಗಿಕ ವಾಗಿ ಉಳಿಸಿಕೊಂಡರೆ ನಗರ-ನಾಡು ಉಳಿಯುವುದು.

ಚಿತ್ರ ಬರಹ: **ಡಾ. ಎಸ್. ಶಿಶುಪಾಲ ಪ್ರಾಧ್ಯಾಪಕರು**
ದಾವಣಗೆರೆ ವಿಶ್ವವಿದ್ಯಾಲಯ, ಮೊ.:8792674905,
ಇಮೇಲ್: kumb@gmail.com

## ಆರ್‌ಪಿಎಫ್ ಮುಖ್ಯಪೇದೆ ಶಿವಾನಂದಗೆ 'ರೈಲು ಸೇವಾ ಪುರಸ್ಕಾರ'



ದಾವಣಗೆರೆ, ಡಿ. 22 - ರೈಲು ಪ್ರಯಾಣಿಕರ ಜೀವ ಉಳಿಸುವ ಮತ್ತು ಆಸ್ತಿ ರಕ್ಷಣೆಯಲ್ಲಿ ಪ್ರಮುಖ ಸೇವೆ ಸಲ್ಲಿಸಿದ ಉದ್ಯೋಗಿಗಳು ಮತ್ತು ಅಧಿಕಾರಿಗಳಿಗೆ ನೀಡುವ ಅತಿ ವಿಶಿಷ್ಟ 'ರೈಲು ಸೇವಾ ಪುರಸ್ಕಾರ' ದಾವಣಗೆರೆ ರೈಲ್ವೆ ರಕ್ಷಣಾ ದಳದ ಮುಖ್ಯ ಪೇದೆ ಟಿ. ಶಿವಾನಂದ ಅವರಿಗೆ ನೀಡಲಾಗಿದೆ.

ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಪೇದೆ ಟಿ. ಶಿವಾನಂದ ಅವರಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು 'ರೈಲು ಸೇವಾ ಪುರಸ್ಕಾರ' ನೀಡಿ ಗೌರವಿಸಿದ್ದಾರೆ.

ರೈಲು ಪ್ರಯಾಣಿಕರ ಜೀವ ಉಳಿಸುವ ಮತ್ತು ಆಸ್ತಿ ರಕ್ಷಣೆ ಮಾಡುವ ರೈಲ್ವೆ ಉದ್ಯೋಗಿಗಳು ಮತ್ತು ಅಧಿಕಾರಿಗಳನ್ನು 'ರೈಲು ಸೇವಾ ಪುರಸ್ಕಾರ'ಕ್ಕೆ ನೈಋತ್ಯ ರೈಲ್ವೆ ಮೈಸೂರು ವಿಭಾಗದಿಂದ ಆಯ್ಕೆ ಮಾಡಲಾಗುತ್ತಿದೆ. ರೈಲಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದ ವೃದ್ಧನ ಜೀವ ಉಳಿಸಿದ ಮುಖ್ಯಪೇದೆ ಟಿ. ಶಿವಾನಂದ ಅವರನ್ನು ದಾವಣಗೆರೆ ರೈಲ್ವೆ ರಕ್ಷಣಾ ದಳದಿಂದ ಆಯ್ಕೆ ಮಾಡಲಾಗಿತ್ತು.

2023ರ ಜುಲೈ 7 ರಂದು ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 12778 ಸಂಖ್ಯೆಯ ರೈಲು ನಿಲ್ದಾಣಕ್ಕೆ ಬರುತ್ತಿದ್ದಾಗ ವೃದ್ಧನೊಬ್ಬ ಹಳಿಯ ಮೇಲೆ ಸಿಲುಕಿಕೊಂಡಿರುವುದನ್ನು ಗಮನಿಸಿದ ಆರ್‌ಪಿಎಫ್ ಮುಖ್ಯ ಪೇದೆ ಟಿ. ಶಿವಾನಂದ ಅವರು ತಕ್ಷಣವೇ ಟ್ರ್ಯಾಕ್‌ಗೆ ಹಾರಿ ಕ್ಷಣಾರ್ಧದಲ್ಲಿ ಜೀವ ಕಳೆದುಕೊಳ್ಳುತ್ತಿದ್ದ ವೃದ್ಧನ ಪ್ರಾಣ ರಕ್ಷಣೆ ಮಾಡಿದ್ದರು. ಇದರಿಂದ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಪ್ರಶಂಸೆಗೆ ಕಾರಣರಾಗಿದ್ದರು. ಸಮಯೋಚಿತವಾಗಿ ವೃದ್ಧನ ಪ್ರಾಣ ರಕ್ಷಿಸಿದ್ದ ಟಿ. ಶಿವಾನಂದ ಅವರನ್ನು ನೈಋತ್ಯ ರೈಲ್ವೆ ಮೈಸೂರು ವಿಭಾಗದಿಂದ 'ರೈಲು ಸೇವಾ ಪುರಸ್ಕಾರ' ಆಯ್ಕೆ ಮಾಡಲಾಗಿತ್ತು.

2ನೇ ವರ್ಷಕ್ಕೆ ಪಾದಾರ್ಪಣೆ
ಶಾಮನೂರು ಎಣ್ಣೆ ಖಾರ ಹೋಟೆಲ್
ಸಸ್ಯಹಾರಿ ಮತ್ತು ಮಾಂಸಹಾರಿ

ನಮ್ಮೆಲ್ಲಾ ಗ್ರಾಹಕರ ಪ್ರೋತ್ಸಾಹ - ಸಹಕಾರದಿಂದ ಶಾಮನೂರು ಎಣ್ಣೆ ಕಾರ ಹೋಟೆಲ್ ಯಶಸ್ವಿಯಾಗಿ ಒಂದು ವರ್ಷ ಪೂರೈಸಿ, 2ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಮೊದಲನೇ ವರ್ಷದ ಸಂಭ್ರಮಾಚರಣೆಗೆ ಕಾರಣರಾದ ನಮ್ಮೆಲ್ಲಾ ಗ್ರಾಹಕರಿಗೆ, ಹಿತೈಷಿಗಳಿಗೆ, ಬಂಧು-ಮಿತ್ರರಿಗೆ ಹೃದಯಪೂರ್ವಕ ಕೃತಜ್ಞತೆಗಳು. ನಿಮ್ಮ ಪ್ರೀತಿ - ವಿಶ್ವಾಸ ನಮ್ಮ ಮೇಲೆ ಸದಾ ಹೀಗೇ ಇರಲಿ ಎಂದು ಕೇಳಿಕೊಳ್ಳುತ್ತೇವೆ.
ಶುದ್ಧವಾದ ಮಟನ್ ಎಣ್ಣೆ ಖಾರ ಮತ್ತು ಶುದ್ಧ ಮಾಂಸಹಾರಿ
ಸಸ್ಯಹಾರಿ ಊಟಕ್ಕಾಗಿ ಭೇಟಿ ಕೊಡಿ
ಶಾಮನೂರು ಎಣ್ಣೆ ಖಾರ ಹೋಟೆಲ್
ಸಸ್ಯಹಾರಿ ಮತ್ತು ಮಾಂಸಹಾರಿ
ಮಿಟ್ಲಕಟ್ಟೆ - ಬಿಸಲೇರಿ ರಸ್ತೆ, ದಾವಣಗೆರೆ.
ಮೊ. 95354-34062

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas